ಸಂಪುಟ: 06 ಸಂಚಿಕೆ: 88 ಪುಟಗಳು: 08 ಗುರುವಾರ 11 ಜೂನ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನೀವು ಎಷ್ಟೇ ಪ್ರಯತ್ನ ಪಟ್ಟರೂ
ಕೂಡ ಕೆಲವರಿಗೆ
ನಿಮ್ಮ ಭಾವನೆಗಳು
ಯಾವತ್ತು
ಕೂಡ ಅರ್ಥವಾಗುವುದಿಲ್ಲ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರೇಣುಕಾಸ್ವಾಮಿ ಕೊಲೆ ಕೇಸ್ ದರ್ಶನ್ ಅರೆಸ್ಟ್‌ಆಗಿ ಇಂದಿಗೆ 2 ವರ್ಷ

• ಉದಯವಾಹಿನಿ,ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ನಟ ದರ್ಶನ್ ಅರೆಸ್ಟ್ ಆಗಿ ಇಂದು (ಜೂ.11) 2 ವರ್ಷ ಪೂರೈಸಿದೆ. ಕೊಲೆ ಕೇಸಲ್ಲಿ 2024 ಜೂನ್ 11ರಂದು ಮೈಸೂರಿನಲ್ಲಿ ಹೋಟೆಲ್‌ನಲ್ಲಿದ್ದಾಗಲೇ ಅರೆಸ್ಟ್ ಮಾಡಲಾಗಿತ್ತು. 1 ಬಾರಿ ಮಧ್ಯಂತರ ಜಾಮೀನು ಪಡೆದು ಹೊರಬಂದಿದ್ದರು. ಅದಾದ ಬಳಿಕ ಸುಪ್ರೀಂನಲ್ಲಿ ಜಾಮೀನು ರದ್ದಾದ ಹಿನ್ನೆಲೆ ದರ್ಶನ್ ಸೇರಿ 7 ಆರೋಪಿಗಳು ಮತ್ತೆ ಜೈಲುಪಾಲಾಗಿದ್ದಾರೆ. ಇನ್ನು, ದರ್ಶನ್ ಸಹಚರರಿಗೆ ಬಿಗ್ ರಿಲೀಫ್ ಸಿಕ್ಕಿದೆ.

ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳ ಜಾಮೀನು ರದ್ದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನ ಹೈಕೋರ್ಟ್ ವಜಾ ಮಾಡಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಎ-3 ಪವನ್, ಎ-4 ರಾಘವೇಂದ್ರ, ಎ-5-ನಂದೀಶ್, ಎ-9 ಧನರಾಜು ಹಾಗೂ ಎ-10 ವಿನಯ್ ಸೇರಿ ಜಾಮೀನಿಗಾಗಿ ಅರ್ಜಿ ಸಲ್ಲಿದ್ದರು.

## ವಿಕ್ಷಿತ್ ಭಾರತ್ - ಜಿ ರಾಮ್ ಜಿಯ ಕನಿಷ್ಠ ವೇತನ ಹೆಚ್ಚಳಕ್ಕೆ ಸಚಿವ ಈಶ್ವರ ಖಂಡ್ರೆ ಮನವಿ

• ಉದಯವಾಹಿನಿ, ಬೆಂಗಳೂರು

ಪ್ರಸಕ್ತ ಬೆಲೆ ಏರಿಕೆ ಸರಿದೂಗಿಸಲು ಕಾರ್ಮಿಕರ ರಾಜ್ಯ ಸರ್ಕಾರ ಕನಿಷ್ಠ ವೇತನವನ್ನು ಹೆಚ್ಚಿಸಲು ತೀರ್ಮಾನಿಸಿದ್ದು, ಈ ಹಿಂದಿನ ಮನ್ರೇಗಾದ ಹೊಸ ರೂಪವಾದ ವಿಕ್ಷಿತ್ ಭಾರತ್-ಜಿ ರಾಮ್ ಜಿ ಯ ಕನಿಷ್ಠ ವೇತನವನ್ನು ಹೆಚ್ಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಕೇಂದ್ರ ಸಚಿವರನ್ನು ಕೋರಿದ್ದಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಖಂಡ್ರೆ ಭಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲಾ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಮಂಗಳವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿ ಮಾತನಾಡಿದ ಸಚಿವ ಖಂಡ್ರೆ ಅವರು, ರಾಜ್ಯ ಸರ್ಕಾರ ಈಗಾಗಲೇ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದು, ಇದೇ ಪ್ರಕಾರವಾಗಿ ಕೇಂದ್ರ ಸರ್ಕಾರವೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣ ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ಈ ವರ್ಷ ಜುಲೈ 1ರಿಂದ ಜಾರಿಯಾಗಬೇಕಿರುವ ಮನ್ರೇಗಾ- ವಿಕ್ಷಿತ್ ಭಾರತ್-ಜಿ ರಾಮ್ ಜಿ ಅಡಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ 5,709.90 ಕೋಟಿ ರೂ. ಮಧ್ಯಂತರ ಹಂಚಿಕೆ ಮಾಡಿದ್ದು, ಇದಕ್ಕೆ ರಾಜ್ಯ ಸರ್ಕಾರ 40ರ ಅನುಪಾತದಲ್ಲಿ 3,806.60 ಕೋಟಿ ನೀಡಬೇಕಾಗಿದೆ, ಈ ಯೋಜನೆ ಅನುಷ್ಠಾನಕ್ಕಾಗಿ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

## ಮದುವೆ ಹೆಸರಲ್ಲಿ ಯುವತಿಗೆ ವಂಚನೆ ಕೇಸ್: ಆರೋಪಿ ಕೃಷ್ಣ ಜೆ. ರಾವ್‌ಗೆ ಹೈಕೋರ್ಟ್ ತೀವ್ರ ತರಾಟೆ

• ಉದಯವಾಹಿನಿ,ಬೆಂಗಳೂರು

ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ಪುತ್ತೂರಿನ ಬಿಜೆಪಿ ಮಾಜಿ ನಾಯಕನ ಪುತ್ರ, ಆರೋಪಿ ಕೃಷ್ಣ ಜೆ. ರಾವ್‌ನನ್ನು ಕರ್ನಾಟಕ ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ. ಸಂತ್ರಸ್ತೆ ಹಾಗೂ ಆಕೆಯ 10 ತಿಂಗಳ ಮಗುವಿನ ನಿರ್ವಹಣೆಗೆ ಹಣ ಠೇವಣಿ ಇಡಬೇಕೆಂಬ ನ್ಯಾಯಾಲಯದ ಹಿಂದಿನ ಆದೇಶವನ್ನು ಪಾಲಿಸದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.ಆರೋಪಿ ಕೃಷ್ಣ ಜೆ. ರಾವ್ ಹಾಗೂ ಅವರ ಪೋಷಕರು ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ವೇಳೆ ಗರಂ ಆದ ನ್ಯಾಯಾಧೀಶರು, ಮಗು ಕೆಳ ವರ್ಗದ ಕುಟುಂಬದಲ್ಲಿ ಜನಿಸಿದೆ ಎಂಬ ಕಾರಣಕ್ಕೆ ಅದನ್ನು ಕೈಬಿಡುತ್ತಿದ್ದೀರಾ? ಅದನ್ನು ನಾವು ಒಪ್ಪುವುದಿಲ್ಲ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಮಗುವಿನ ನಿರ್ವಹಣೆಗೆ 75,000 ರೂ. ಹಣವನ್ನು ಒಂದು ವಾರದೊಳಗೆ ಠೇವಣಿ ಇಡಲು ಸೂಚಿಸಲಾಗಿತ್ತು ಎಂಬುದನ್ನೂ ನೆನಪಿಸಿದೆ. ಅರ್ಜಿದಾರರ ಪರವಾದ ಮಂಡಿಸಿದ ಹಿರಿಯ ವಕೀಲ ಪಿ.ಪಿ. ಹೆಗ್ಡೆ ಆರೋಪಿ ವಿದ್ಯಾರ್ಥಿಯಾಗಿರುವುದರಿಂದ ನ್ಯಾಯಾಲಯ ವಿಧಿಸಿದ್ದ ಷರತ್ತನ್ನು ಪಾಲಿಸಲು ಸಾಧ್ಯವಾಗಿಲ್ಲ.

## ಗುತ್ತಿಗೆ ವೈದ್ಯರಿಗೆ ಸಿಹಿ ಸುದ್ದಿ: ವಾರದೊಳಗೆ 200 ವೈದ್ಯರ ಖಾಯಂ ನೇಮಕಾತಿಗೆ ಅನುಮೋದನೆ

• ಉದಯವಾಹಿನಿ,ಬೆಂಗಳೂರು

ಆರೋಗ್ಯ ಸಚಿವರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಸಚಿವ ಯುಟಿ ಖಾದರ್ ಆರೋಗ್ಯ ಕ್ಷೇತ್ರದಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡುತ್ತಿದ್ದಾರೆ. ರಾಜ್ಯದಲ್ಲಿ ದಶಕಗಳಿಂದ ಕಾಡುತ್ತಿರುವ ವೈದ್ಯರ ಕೊರತೆ ನೀಗಿಸಲು ಸಚಿವರು ಮೊದಲ ಪ್ರಗತಿ ಪರಿಶೀಲನಾ ಸಭೆಯಲ್ಲೇ ಆ್ಯಕ್ಷನ್ ಪ್ಲಾನ್ ಸಿದ್ಧಪಡಿಸಿದ್ದಾರೆ. ಅದರಂತೆ ಹಲವು ವರ್ಷಗಳಿಂದ ಕನಿಷ್ಠ ವೇತನಕ್ಕೆ ಕೆಲಸ ಮಾಡುತ್ತಿರುವ ಗುತ್ತಿಗೆ ವೈದ್ಯರಿಗೆ ಸಚಿವರು ಬಂಪರ್ ಕೊಡುಗೆ ನೀಡಿದ್ದಾರೆ. 5 ವರ್ಷ ಸೇವೆ ಪೂರ್ಣಗೊಳಿಸಿರುವ ಮತ್ತು ಉತ್ತಮ ಕೆಲಸ ಮಾಡಿರುವ ಗುತ್ತಿಗೆ ನೌಕರರನ್ನು ಹಂತಹಂತವಾಗಿ ಖಾಯಂಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆ. ಇದರ ಭಾಗವಾಗಿ 200 ವೈದ್ಯರನ್ನು ಕೆಇಎ ಪರೀಕ್ಷೆ ಮೂಲಕ ನೇರ ನೇಮಕಾತಿ ಮಾಡಿ ವಾರದೊಳಗೆ ಆದೇಶ ಪತ್ರ ನೀಡಲು ನಿರ್ಧರಿಸಲಾಗಿದ್ದು, ಇದಕ್ಕೆ ಆರ್ಥಿಕ ಇಲಾಖೆಯ ಒಪ್ಪಿಗೆಯೂ ಸಿಕ್ಕಿದೆ.



# ಖಾತೆ ಕೈ ಕ್ಯಾತೆ

### ಮೆಟ್ರೋ ಮೂರನೇ ಎ ಹಂತಕ್ಕೆ ಅನುಮತಿ

ಈ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದವಿದ್ದು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದ್ದು, 25,999 ಕೋಟಿ ರೂ. ಅಂದಾಜು ವೆಚ್ಚದ ಪರಿಷ್ಕೃತ ಡಿಪಿಆರ್ ಅನ್ನು 29-04-2026ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡಲಾಗಿದ್ದು, ಆದಷ್ಟು ಬೇಗ ಇದಕ್ಕೆ ಅನುಮತಿ ನೀಡಬೇಕು.ಬೆಂಗಳೂರು- ಮೈಸೂರು, ಬೆಂಗಳೂರು- ಕನಕಪುರ, ಬೆಂಗಳೂರು- ತುಮಕೂರು, ಬೆಂಗಳೂರು- ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು- ಕೋಲಾರ ನಡುವೆ ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ ಜಾರಿಗೆ ಅನುಮತಿ ನೀಡಬೇಕು.





‘ ಬಿಡಿಎ, ಬಿಎಂಆರ್‌ಡಿಎ ಇಲ್ಲದಿದ್ದರೆ, ಬೆಂಗಳೂರು ಅಭಿವೃದ್ಧಿ ಖಾತೆ ಅಪೂರ್ಣ ಆಗುತ್ತದೆ ಎನ್ನುವುದು ನಿಜ. ಇನ್ನು ಮುನಿಸಿಕೊಳ್ಳುವವರು ಯಾರೂ ಇಲ್ಲ. ಡಿಸೆಂಬರ್ ಕಳೆಯುತ್ತಿದ್ದಂತೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಶಾಸಕರು ಮಗ್ನರಾಗುತ್ತಾರೆ. ಸಂಪುಟದ ಬಗ್ಗೆ ತಲೆಕೆಡಿಸಿಕೊಳ್ಳಲು ಪುರಸೊತ್ತು ಇರುವುದೂ ಇಲ್ಲ. ನಾನು ಸಚಿವ ಸ್ಥಾನದ ರೇಸ್‌ನಲ್ಲಿ ಇಲ್ಲ. ಸಚಿವ ಸ್ಥಾನ ಕೇಳಿಲ್ಲ. ಪರಿಶಿಷ್ಟ ಜಾತಿಗೆ ಒಂದು ಡಿಸಿಎಂ ಕೊಟ್ಟಿದ್ದಾರೆ. ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೂ ಒಂದೊಂದು ಡಿಸಿಎಂ ಹುದ್ದೆ ಕೊಡಬೇಕು. -ಕೆ.ಎನ್.ರಾಜಣ್ಣ, ಮಾಜಿ ಸಚಿವ

### ಸಮನ್ವಯಕ್ಕೆ ಸಮಸ್ಯೆ

ಬಿಡಿಎ ಮತ್ತು ಬಿಎಂಆರ್‌ಡಿಎ ಪ್ರಾಧಿಕಾರ ಹೊರತಾಗಿ ಬೆಂಗಳೂರು ಅಭಿವೃದ್ಧಿ ಇಲಾಖೆ ನೀಡಿದರೆ ಸಮನ್ವಯಕ್ಕೆ ಸಮಸ್ಯೆ ಉಂಟಾಗಲಿದೆ ಎಂಬುವುದು ಕೃಷ್ಣ ಬೈರೇಗೌಡ ಅವರ ವಾದವಾಗಿದೆ. ಹೊರ ವರ್ತುಲ ರಸ್ತೆ ಬಿಡಿಎ ವ್ಯಾಪ್ತಿಗೆ ಬರುತ್ತದೆ. ಈ ಕಾರಿಡಾರ್‌ನಲ್ಲಿ ಸಮಸ್ಯೆಗಳು ಉಂಟಾದರೆ ಅದಕ್ಕೆ ಯಾರು ಹೊಣೆ? ಎಂಬುವುದು ಇವರ ವಾದವಾಗಿದೆ. ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸುವುದು ಹಾಗೂ ಬೆಂಗಳೂರಿನ ಅಭಿವೃದ್ದಿಗೆ ಸಂಬಂಧಿಸಿದಂತೆ ಎಲ್ಲಾ ಏಜೆನ್ಸಿಗಳ ಜೊತೆಗ ಸಮನ್ವಯ ಸಾಧಿಸುವುದು ಅಗತ್ಯವಾಗಿದೆ. ಎರಡು ಪ್ರಮುಖ ಪ್ರಾಧಿಕಾರ ಇಲ್ಲದೆ ಹೋದಲ್ಲಿ ಸಮನ್ವಯತೆ ಸಾಧಿಸಲು ಸಾಧ್ಯವಿಲ್ಲ. ಪ್ರಮುಖ ಖಾತೆಯನ್ನು ನೀಡಿದರೂ ಅದರಿಂದ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ವಾತಾವರಣ ಸೃಷ್ಟಿಯಾಗುತ್ತದೆ. ಹೀಗಾಗಿ ಎರಡು ಪ್ರಾಧಿಕಾರವನ್ನು ನೀಡಿ ಎಂಬುವುದು ಕೃಷ್ಣ ಬೈರೇಗೌಡ ವಾದವಾಗಿದೆ.







**ಖಾತೆ ಕ್ಯಾತೆ: ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಕೃಷ್ಣಬೈರೇಗೌಡ ಮತ್ತೆ ಅತೃಪ್ತಿ!**

### ಡಿಕೆಶಿ ಹೊಸ ಜವಾಬ್ದಾರಿ

ಕಂದಾಯ ಇಲಾಖೆಯಲ್ಲಿ ಮಾಡಿರುವ ಕೆಲವೊಂದು ಅಮೂಲಾಗ್ರ ಬದಲಾವಣೆಯ ಹಿನ್ನೆಲೆಯಲ್ಲಿ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ಅಭಿವೃದ್ಧಿ ಇಲಾಖೆ ನೀಡಲಾಗಿತ್ತು. ವರಿಷ್ಠರ ಸೂಚನೆಯಂತೆ ಈ ಇಲಾಖೆಯನ್ನು ನೀಡಲಾಗಿದೆ. ಈ ಹಿಂದೆ ಬೆಂಗಳೂರು ಅಭಿವೃದ್ಧಿ ಇಲಾಖೆಯನ್ನು ಡಿಸಿಎಂ ಡಿಕೆ ಶಿವಕುಮಾರ್ ನೋಡಿಕೊಂಡಿದ್ದರು. ವರಿಷ್ಠರ ಸೂಚನೆಯಂತೆ ಕಂದಾಯ ಇಲಾಖೆಯನ್ನು ಕೃಷ್ಣ ಬೈರೇಗೌಡ ಅವರಿಗೆ ನೀಡಲಾಗಿದೆಯಾದರೂ ಅದರಲ್ಲಿ ಬಿಡಿಎ ಮತ್ತು ಬಿಎಂಆರ್ ಡಿ ಎ ಪ್ರಾಧಿಕಾರವನ್ನು ಸೇರಿಸಿಲ್ಲ. ಇದು ಬೈರೇಗೌಡ ಅಸಮಾಧಾನಕ್ಕೆ ಕಾರಣವಾಗಿದೆ. ಈ ಕಾರಣಕ್ಕಾಗಿ ಅವರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿದ್ದಾರೆ. ಈ ಎರಡು ಪ್ರಾಧಿಕಾರ ಇಲ್ಲದೆ ಬೆಂಗಳೂರು ಅಭಿವೃದ್ಧಿ ಖಾತೆ ಬೇಡ ಎಂದು ಪಟ್ಟು ಹಿಡಿದಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ನಂತರ ಡಿ.ಕೆ.ಶಿವಕುಮಾರ್ ಅವರು ಮೊದಲ ಬಾರಿಗೆ ರಾಷ್ಟ್ರ ರಾಜಧಾನಿ ದೆಹಲಿಗೆ ಭೇಟಿ ನೀಡಿದ್ದಾರೆ. ಈ ಸಂದರ್ಭದಲ್ಲಿ ಅವರು ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿದ್ದಾರೆ. ದೆಹಲಿಯ ‘10 ಜನಪಥ್’ ರಸ್ತೆಯಲ್ಲಿರುವ ಸೋನಿಯಾ ಗಾಂಧಿ ಅವರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಈ ದೆಹಲಿ ಭೇಟಿಯ ವೇಳೆ ಕೇವಲ ಸೋನಿಯಾ ಗಾಂಧಿ ಮಾತ್ರವಲ್ಲದೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಉಪಸ್ಥಿತರಿದ್ದರು. ಸಿಎಂ ಆದ ಬಳಿಕ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ ಶಿವಕುಮಾರ್ ಅವರಿಗೆ ಗಾಂಧಿ ಕುಟುಂಬದ ನಾಯಕರು ಆತ್ಮೀಯವಾಗಿ ಬರಮಾಡಿಕೊಂಡು ಶುಭ ಹಾರೈಸಿದ್ದಾರೆ.

ಪಕ್ಷದ ವರಿಷ್ಠರ ಸೂಚನೆ ಬಳಿಕವೂ ಸಚಿವರ ಖಾತೆ ‘ಕ್ಯಾತೆ’ ಮುಗಿಯುತ್ತಿಲ್ಲ. ಕೆಲವರು ಸಚಿವರಿಂದ ಖಾತೆ ಬದಲಾವಣೆ ಕೂಗು ಕೇಳಿಬರುತ್ತಲೇ ಇದೆ. ಇದಕ್ಕೆ ಪೂರಕವಾಗಿ ಒಂದೆಡೆ ಕೃಷ್ಣ ಬೈರೇಗೌಡ ದೆಹಲಿಗೆ ಹಾರಿದ್ದರೆ, ಮತ್ತೊಂದೆಡೆ ಸಚಿವ ಕೆ.ಎಚ್.ಮುನಿಯಪ್ಪ ಮತ್ತೆ ಅಸಮಾಧಾನ ಹೊರಹಾಕಿದ್ದಾರೆ. ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಕೂಡ ಖಾತೆ ಬದಲಾವಣೆಗೆ ಬೇಡಿಕೆ ಇಟ್ಟಿದ್ದಾರೆ. ’ನಾನು ಸೀನಿಯರ್ ಇದ್ದೇನೆ. ಬಡವರ ಕೆಲಸ ಮಾಡಬೇಕು. ಅದಕ್ಕೆ ಪೂರಕವಾದ ಖಾತೆ ಕೊಡಿ ಅಂತ ಕೇಳಿದ್ದೇನೆ. ಈ ಬಗ್ಗೆ ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಗಮನಕ್ಕೂ ತಂದಿದ್ದೇನೆ. ಅಂತಿಮವಾಗಿ ಪಕ್ಷ ಏನು ತೀರ್ಮಾನ ಕೈಗೊಳ್ಳುತ್ತದೆಯೋ ಅದಕ್ಕೆ ಬದ್ಧನಾಗಿರುತ್ತೇನೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ದೇವನಹಳ್ಳಿಯಲ್ಲಿ ಸ್ಪಷ್ಟಪಡಿಸಿದ್ದಾರೆ. 3-4 ದಿನಗಳ ಹಿಂದಷ್ಟೇ ರಾಹುಲ್ ಗಾಂಧಿ ಭೇಟಿ ಬಳಿಕ ತಮಗೆ ಹಂಚಿಕೆಯಾದ ಖಾತೆ ಬಗ್ಗೆ ತೃಪ್ತಿ ಇದೆ. ಐ ಆ್ಯಮ್ ಹ್ಯಾಪಿ ಅಂತ ಮುನಿಯಪ್ಪ ಹೇಳಿದ್ದರು. ಈಗ ಮತ್ತೆ ಖಾತೆ ಬದಲಾವಣೆ ಇಂಗಿತ ವ್ಯಕ್ತಪಡಿಸಿದ್ದಾರೆ. ಡಾ. ಪರಮೇಶ್ವರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಬಗ್ಗೆ ಒಲವು ವ್ಯಕ್ತಪಡಿಸಿದ್ದಾರೆ. ಕೃಷ್ಣ ಬೈರೇಗೌಡ ’ಕಂದಾಯ’ದಲ್ಲೇ ಮುಂದುವರಿಯುವ ಇಚ್ಛೆ ಇದೆ. ಹಾಗೊಂದು ವೇಳೆ ಬೆಂಗಳೂರು ಅಭಿವೃದ್ಧಿ ನೀಡುವುದಾದರೆ, ಸಮಗ್ರ ಬೆಂಗಳೂರು ಹಂಚಿಕೆ ಮಾಡಲಿ ಎಂದು ಹೇಳಿದ್ದಾರೆ. ಒಟ್ಟಾರೆಯಾಗಿ 2ನೇ ಹಂತದ ಸಂಪುಟ ವಿಸ್ತರಣೆ ವೇಳೆ ಖಾತೆ ಬದಲಾವಣೆಗಳಾದರೂ ಅಚ್ಚರಿ ಇಲ್ಲ ಎಂದು ಹೇಳಲಾಗುತ್ತಿದೆ. ದೆಹಲಿಯಲ್ಲಿ ಸಚಿವರು ಮತ್ತು ಸಚಿವ ಆಕಾಂಕ್ಷಿಗಳ ಮತ್ತೊಂದು ಸುತ್ತಿನ ಲಾಬಿ ಶುರುವಾಗಿದೆ. ಈ ಮಧ್ಯೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ರಾಷ್ಟ್ರ ರಾಜಧಾನಿಗೆ ಬೇಟಿ ನೀಡಿದ್ದಾರೆ. ರಾಜಕೀಯ ಚಟುವಟಿಕೆಗಳು ಮತ್ತಷ್ಟು ಚುರುಕುಗೊಳ್ಳುವ ಬಿಡಿಎ ಮತ್ತು ಬಿಎಂಆರ್‌ಡಿಎ ಇಲ್ಲದಿದ್ದರೆ ಬೆಂಗಳೂರು ಅಭಿವೃದ್ಧಿ ಖಾತೆಯೇ ಅಪೂರ್ಣವಾಗುತ್ತದೆ. ಹಾಗಾಗಿ, ಈ ಖಾತೆ ಕೊಡುವುದಾದರೆ, ಎರಡನ್ನೂ ಸೇರಿಸಿ ಹಂಚಿಕೆ ಮಾಡಬೇಕು ಎಂಬ ಒತ್ತಾಯ ಸಚಿವ ಕೃಷ್ಣ ಬೈರೇಗೌಡ ಅವರಿಂದ ಕೇಳಿಬಂದಿದ್ದು, ಖಾತೆ ವಿಚಾರದಲ್ಲಿ ಇರುವ ಗೊಂದಲ ನಿವಾರಣೆ ಮಾಡುವಂತೆ ವರಿಷ್ಠರಿಗೆ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೃಷ್ಣಬೈರೇಗೌಡ ಜತೆ ಸಚಿವ ಆಕಾಂಕ್ಷಿಗಳಾದ ಶಾಸಕರಾದ ರಿಜ್ವಾನ್ ಅರ್ಷದ್, ಶ್ರೀನಿವಾಸ ಮಾನೆ, ಅಜಯ್ ಸಿಂಗ್ ಸೇರಿದಂತೆ ಕೆಲವರು ದೆಹಲಿಗೆ ಹಾರಿದ್ದಾರೆ. 2ನೇ ಹಂತದ ಪಟ್ಟಿಯಲ್ಲಾದರೂ ತಮಗೆ ಸಚಿವ ಸ್ಥಾನ ನೀಡುವಂತೆ ಹೈಕಮಾಂಡ್‌ಗೆ ಮನವಿ ಮಾಡಲಿದ್ದಾರೆ. ಸಮುದಾಯ, ಪ್ರಾದೇಶಿಕತೆ, ಪಕ್ಷನಿಷ್ಠೆ ಹಲವು ಲೆಕ್ಕಾಚಾರಗಳ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಮುಖ್ಯಮಂತ್ರಿಗಳು ಬುಧವಾರ ದೆಹಲಿಗೆ ಭೇಟಿ ನೀಡಿದ್ದಾರೆ.

**1** ಬಿಡಿಎ ಮತ್ತು ಬಿಎಂಆರ್ ಡಿಎ ಪ್ರಾಧಿಕಾರ ನೀಡದಕ್ಕಾಗಿ ಕೃಷ್ಣ ಬೈರೇಗೌಡ ಅಸಮಾಧಾನ

**2** ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡಿ ಮಾತುಕತೆ ನಡೆಸಿರುವ ಕೃಷ್ಣ ಬೈರೇಗೌಡ

**3** ಕೃಷ್ಣ ಬೈರೇಗೌಡ ಮುನಿಸು ತಣಿಸಲು ಡಿಕೆ ಶಿವಕುಮಾರ್ ಏನೇನು ಕ್ರಮ ಕೈಗೊಳ್ಳುತ್ತಾರೆ

### ಕೇಂದ್ರ ಸಚಿವ ಖಟ್ಟರ್ ಭೇಟಿ ಮಾಡಿದ ಸಿಎಂ ಡಿಕೆಶಿ

ಸಿಎಂ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಬೆಂಗಳೂರಿಗೆ ಸಂಬಂಧಿಸಿದ ಮಹತ್ವದ ಯೋಜನೆಗಳಾದ ಮೆಟ್ರೋ ಮತ್ತು ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ ಜಾರಿಗೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿದರು. ಮೆಟ್ರೋ ಮೂರನೇ ಹಂತದ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಬಿಎಂಆರ್ ಸಿಎಲ್ ಮುಂದಾಗಿದ್ದು, 13-09-2024ರಂದು ಕೇಂದ್ರ ಸರ್ಕಾರ ಅನುಮತಿ ನೀಡಿತ್ತು. ಈ ಯೋಜನೆಯ ವೆಚ್ಚ 9,700 ಕೋಟಿ ರೂ. ಅನ್ನು ಕರ್ನಾಟಕ ಸರ್ಕಾರವೇ ಭರಿಸಲಿದೆ. 19-01-2026ರಂದು ಬಿಎಂಆರ್ ಸಿಎಲ್ ಮಂಡಳಿಯ 118ನೇ ಸಭೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಿದ್ದು, ಕೇಂದ್ರ ಸರ್ಕಾರ ಈ ಯೋಜನೆಯನ್ನು ಆರಂಭಿಸಲು ಬಿಎಂಆರ್ ಸಿಎಲ್‌ಗೆ ಅನುಮತಿ ನೀಡಬೇಕು. ಈ ಯೋಜನೆಗೆ ಕೇಂದ್ರ ಸರ್ಕಾರ 21-02-2014ರಂದು 26,405.14 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮತಿ ನೀಡಿತ್ತು. 72.095 ಕಿ.ಮೀ ಉದ್ದ ಹಾಗೂ 61 ನಿಲ್ದಾಣಗಳನ್ನು ಒಳಗೊಂಡಿರುವ ಈ ಯೋಜನೆ ಅಂದಾಜು ವೆಚ್ಚ ಈಗ 40,425.02 ಕೋಟಿ ರೂ.ಗೆ ಅಂದರೆ 14,019.88 ಕೋಟಿ ರೂ. ಏರಿಕೆ ಮಾಡಲಾಗಿದ್ದು, ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.



### ಸತ್ತವರ ಹೆಸರಲ್ಲೂ ಹಣ ಹೋಗಿದೆ

ಸತ್ತವರ ಹೆಸರಿನಲ್ಲೂ ಹಣ ಹೋಗ್ತಿದೆ, ಅಂಗಡಿಗೂ ವಿದ್ಯುತ್ ಬಳಕೆ ಆಗುತ್ತಿದೆ. ಅದನ್ನ ಪರಿಶೀಲನೆ ಮಾಡುತ್ತಿದ್ದೇವೆ. ಸರಿಯಾದ ಫಲಾನುಭವಿಗೆ ತಲುಪಿಸುವುದು ನಮ್ಮ ಉದ್ದೇಶವಾಗಿದೆ ಎಂದು ಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ಕಾಂಗ್ರೆಸ್ ವರಿಷ್ಠರಾದ ಸೋನಿಯ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರನ್ನ ಭೇಟಿಯಾದ ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಗೃಹಲಕ್ಷ್ಮಿ ಯೋಜನೆ ಕಡಿತ ವಿಚಾರಕ್ಕೆ ಪ್ರತಿಕ್ರಿಯಿಸಿ, ಸತ್ತವರ ಹೆಸರಿನಲ್ಲಿ ಹಣ ಹೋಗ್ತಿದೆ. ಫೋನ್ ನಂಬರ್ ಬದಲಾಗಿ, ಯಾರಿಗೋ ಹಣ ತಲುಪ್ತಿದೆ.

ಅದನ್ನ ಪರಿಶೀಲನೆ ಮಾಡುತ್ತಿದ್ದೇವೆ. ಸರಿಯಾದ ಫಲಾನುಭವಿಗೆ ತಲುಪಿಸುವುದು ನಮ್ಮ ಉದ್ದೇಶ ಎಂದಿದ್ದಾರೆ. ಗೃಹಜ್ಯೋತಿ ಗ್ಯಾರಂಟಿ ಪರಿಷ್ಕರಣೆ ಕುರಿತು ಮಾತನಾಡಿ, ಅಂಗಡಿಗೂ ವಿದ್ಯುತ್ ಬಳಕೆ ಆಗುತ್ತಿದೆ. ವಾಸಕ್ಕೆ ಅಡ್ಡಿ ಇಲ್ಲ, ವಾಣಿಜ್ಯ ಬಳಕೆ ಆಗಬಾರದು.

## ಆರ್‌ಎಸ್‌ಎಸ್ ಕುರಿತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಲ್ಲ: ಬಿ.ವೈ. ರಾಘವೇಂದ್ರ

• ಉದಯವಾಹಿನಿ, ಬೆಂಗಳೂರು

ಪ್ರಿಯಾಂಕ್ ಖರ್ಗೆ ಅವರ ಆರ್‌ಎಸ್ ಎಸ್ ಕುರಿತ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ ಎಂದು ಶಿವಮೊಗ್ಗ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಅವರು ಹೇಳಿದ್ದಾರೆ. ಮಾಜಿ ಪ್ರಧಾನಿ ನೆಹರು ಅವರ ನಂತರ ದೇಶದಲ್ಲಿ ದೀರ್ಘಾವಧಿಯ ಆಡಳಿತ ನಡೆಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಶುಭ ಕೋರಲು ಶಿವಮೊಗ್ಗದ ವಿನೋಬನಗರದ ಕಲ್ಲಹಳ್ಳಿಯ ಅಭಿಷ್ಟವರ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗಿಡ ನೆಟ್ಟು ನಂತರ ಮಾತನಾಡಿದರು.

ಪ್ರಿಯಾಂಕ್ ಖರ್ಗೆ ಅವರ ಆರ್‌ಎಸ್‌ಎಸ್ ಕುರಿತ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ ಎಂದು ಶಿವಮೊಗ್ಗ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಅವರು ಹೇಳಿದ್ದಾರೆ. ಮಾಜಿ ಪ್ರಧಾನಿ ನೆಹರು ಅವರ ನಂತರ ದೇಶದಲ್ಲಿ ದೀರ್ಘಾವಧಿಯ ಆಡಳಿತ ನಡೆಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಶುಭ ಕೋರಲು ಶಿವಮೊಗ್ಗದ ವಿನೋಬನಗರದ ಕಲ್ಲಹಳ್ಳಿಯ ಅಭಿಷ್ಟವರ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗಿಡ ನೆಟ್ಟು ನಂತರ ಮಾತನಾಡಿದರು.

**ಪರಿಷತ್ ಚುನಾವಣೆ ಕುರಿತು:** ವಿಧಾನ ಪರಿಷತ್ ಚುನಾವಣೆಗೆ ಮೂರು ಜನ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದಾರೆ. ನನಗೆ



ವಿಶ್ವಾಸವಿದೆ. ಶಾಸಕರುಗಳಲ್ಲಿ ಪ್ರಧಾನ ಮಂತ್ರಿ ಬಗ್ಗೆ ವಿಶ್ವಾಸವಿದೆ. ಹಾಗಾಗಿ ನಾಳೆ ಮೂರನೇ ಅಭ್ಯರ್ಥಿ ಗೆಲ್ಲುತ್ತಾರೆ. ಏಳನೇ ಅಭ್ಯರ್ಥಿಗೆ ಗೆಲುವು ಸಿಗಲಿದೆ. ಬಿಜೆಪಿ ಮತ್ತು ಜೆಡಿಎಸ್ ಹೊಂದಾಣಿಕೆಯ ಅಭ್ಯರ್ಥಿಗೆ ಗೆಲುವು ಸಿಗುವ ವಿಶ್ವಾಸವಿದೆ. ಎರಡು ಭಾರತೀಯ ಜನತಾ ಪಕ್ಷದ ಇಬ್ಬರು ಅಭ್ಯರ್ಥಿಗಳು ಸೇರಿದಂತೆ ಜೆಡಿಎಸ್‌ನ ಅಭ್ಯರ್ಥಿ ಸಹ ಗೆಲುವು ಸಾಧಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ಮುಂದುವರೆದು ರಾಘವೇಂದ್ರ ಅವರು, ದೇವೆಗೌಡರು ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿಗಳು ಅವರಿಗೆ ಅತ್ಯಂತ ಗೌರವ ನೀಡಿದ ಯಾರಾದರೂ ಪ್ರಧಾನ ಮಂತ್ರಿಗಳಿದ್ದರೆ, ಅವರು ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿರವರು. ದೇವೆಗೌಡರಿಗೆ ಯಾರು ಅನ್ಯಾಯ ಮಾಡಿದ್ದಾರೆ, ಅವರ ಪಕ್ಷದ ವಕ್ತಾರರು ಈಗಾಗಲೇ ತಿಳಿಸಿದ್ದಾರೆ. ಇಂದು ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ. ದೇವೆಗೌಡ ಅವರು ಈ ಕುರಿತು ಸುದ್ದಿಗೋಷ್ಠಿ ಮಾಡಲಿದ್ದಾರೆ ಎಂದು ಉತ್ತರಿಸಿದರು. ವಿಮಾನ ನಿಲ್ದಾಣವನ್ನು ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರು ಉದ್ಘಾಟಿಸಿದ್ದರು. ಶಿವಮೊಗ್ಗದ ನೈಟ್ ಲ್ಯಾಂಡಿಂಗ್ ಸಮಸ್ಯೆ ಇದೆ.

## 140 ಕೋಟಿ ಭಾರತೀಯರ ಆಶೀರ್ವಾದ ನನ್ನ ದೊಡ್ಡ ಶಕ್ತಿ

• ಉದಯವಾಹಿನಿ, ಬೆಂಗಳೂರು

ಚುನಾಯಿತ ಪ್ರಧಾನಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ ದಾಖಲೆಗೆ ತಮಗೆ ಶುಭಾಶಯ ಕೋರಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಮುಖ್ಯಮಂತ್ರಿಗಳು ಮತ್ತು ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ಧನ್ಯವಾದ ಅರ್ಪಿಸಿದರು.

ವರ್ಷಗಳಲ್ಲಿ ಸಾಧಿಸಲಾಗಿರುವುದು ಭಾರತದ ಜನರ ಸಾಮೂಹಿಕ ಪ್ರಯತ್ನಗಳು ಮತ್ತು ಆಕಾಂಕ್ಷೆಗಳ ಫಲಿತಾಂಶವಾಗಿದೆ ಎಂದು ಮೋದಿ ಹೇಳಿದರು.ಎನ್‌ಡಿಎಯ ಪ್ರಯಾಣವು ರಾಷ್ಟ್ರೀಯ ಹಿತಾಸಕ್ತಿ ಮತ್ತು ಪ್ರಾದೇಶಿಕ ಆಕಾಂಕ್ಷೆಗಳನ್ನು ಮತ್ತಷ್ಟು ಹೆಚ್ಚಿಸುವ ಹಂಚಿಕೆಯ ಸಂಕಲ್ಪದಿಂದ ವ್ಯಾಖ್ಯಾನಿಸಲ್ಪಟ್ಟಿದೆ ಮತ್ತು ಈ ಮನೋಭಾವವು ದೇಶದ ಪ್ರಜಾಪ್ರಭುತ್ವವನ್ನು ಬಲಪಡಿಸಿದೆ, ಸಹಕಾರಿ ಒಕ್ಕೂಟವನ್ನು ಆಳಗೊಳಿಸಿದೆ ಮತ್ತು ಅಭಿವೃದ್ಧಿಯನ್ನು ವೇಗಗೊಳಿಸಿದೆ ಎಂದು ಮೋದಿ ಹೇಳಿದ್ದಾರೆ.ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಮತ್ತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಅಭಿನಂದನಾ ಸಂದೇಶಗಳಿಗಾಗಿ ಮೋದಿ ಕೃತಜ್ಞತೆ ಸಲ್ಲಿಸಿದರು. ರಾಷ್ಟ್ರಪತಿಯವರೇ, ನಿಮ್ಮ ಹೃತ್ಪೂರ್ವಕ ಶುಭಾಶಯಗಳು ಮತ್ತು ಹಿತ ಮಾತುಗಳಿಗೆ ನಾನು ನಿಮಗೆ ಕೃತಜ್ಞನಾಗಿದ್ದೇನೆ.

ವರ್ಷಗಳಲ್ಲಿ ಸಾಧಿಸಲಾಗಿರುವುದು ಭಾರತದ ಜನರ ಸಾಮೂಹಿಕ ಪ್ರಯತ್ನಗಳು ಮತ್ತು ಆಕಾಂಕ್ಷೆಗಳ ಫಲಿತಾಂಶವಾಗಿದೆ ಎಂದು ಮೋದಿ ಹೇಳಿದರು.140 ಕೋಟಿ ಭಾರತೀಯರ ಪ್ರೀತಿ ಮತ್ತು ಆಶೀರ್ವಾದಗಳು ತಮ್ಮ ದೊಡ್ಡ ಶಕ್ತಿ ಮತ್ತು ಸ್ಫೂರ್ತಿ ಎಂದು ಪ್ರಧಾನಿ ಇದೇ ವೇಳೆ



ಹೇಳಿದರು ಮತ್ತು ರಾಷ್ಟ್ರಪತಿಗಳು ತಮ್ಮ ಅಭಿನಂದನಾ ಸಂದೇಶದಲ್ಲಿ ಪಿಎಂ-ಜನ್ಮಾನ್ ಮತ್ತು ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನವನ್ನು ಉಲ್ಲೇಖಿಸಿದ್ದಕ್ಕೆ ಅವರು ವಿಶೇಷವಾಗಿ ಸಂತೋಷಪಟ್ಟರು.

ಅಂತ್ಯೋದಯದ ನಿಜವಾದ ಉತ್ಸಾಹದಲ್ಲಿ ಅಭಿವೃದ್ಧಿಯ ಪ್ರಯೋಜನಗಳು ಸಮಾಜದ ಪ್ರತಿಯೊಂದು ವರ್ಗವನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಅವರು ಹೇಳಿದರು. ಮುಖ್ಯಮಂತ್ರಿಗಳು ಮತ್ತು ಎನ್‌ಡಿಎ ನಾಯಕರ ಆಶಯಗಳಿಗೆ ಧನ್ಯವಾದ ಹೇಳಿದ ಮೋದಿ, ಎನ್‌ಡಿಎ ಪ್ರಯಾಣ ರಾಷ್ಟ್ರೀಯ ಹಿತಾಸಕ್ತಿ ಮತ್ತು ಪ್ರಾದೇಶಿಕ ಆಕಾಂಕ್ಷೆಗಳನ್ನು ಮತ್ತಷ್ಟು ಹೆಚ್ಚಿಸುವ ಹಂಚಿಕೆಯ ಸಂಕಲ್ಪದಿಂದ ವ್ಯಾಖ್ಯಾನಿಸಲ್ಪಟ್ಟಿದೆ ಎಂದು ಹೇಳಿದರು. ಈ ಮನೋಭಾವವು ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸಿದೆ, ಸಹಕಾರಿ ಒಕ್ಕೂಟವನ್ನು ಆಳಗೊಳಿಸಿದೆ ಮತ್ತು ಅಭಿವೃದ್ಧಿಯನ್ನು ವೇಗಗೊಳಿಸಿದೆ.

# ರಾಜ್ಯದಿಂದ ರಾಷ್ಟ್ರೀಯ ಗ್ರಿಡ್‌ಗೆ 423 ಕೋಟಿ ಮೌಲ್ಯದ ವಿದ್ಯುತ್ ಮಾರಾಟ

• ಉದಯವಾಹಿನಿ, ಬೆಂಗಳೂರು

ಪವರ್ ಕಂಪೆನಿ ಆಫ್ ಕರ್ನಾಟಕ ಲಿಮಿಟೆಡ್ ಮೂಲಕ ರಾಜ್ಯವು ಕಳೆದ ಎರಡೂವರೆ ತಿಂಗಳಲ್ಲಿ ಪ್ರತಿ ಯೂನಿಟ್‌ಗೆ 9.08 ಪೈಸೆಯಂತೆ 423 ಕೋಟಿ ರೂಪಾಯಿ ಮೌಲ್ಯದ ವಿದ್ಯುತ್ ಅನ್ನು ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದೆ ಎಂದು ಇಂಧನ ಹಾಗೂ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸರ್ಕಾರದಲ್ಲಿ ಇಂಧನ ಸಚಿವರಾಗಿ ಮತ್ತೆ ಅಧಿಕಾರ ವಹಿಸಿಕೊಂಡು ನಂತರ ಬೆಸ್ಕಾಂ ಕಾರ್ಪೋರೇಟ್ ಕಚೇರಿಯಲ್ಲಿ ಬುಧವಾರ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದ ಸಚಿವ ಜಾರ್ಜ್ ಅವರು ಮುಂಗಾರು ಸಿದ್ಧತೆ, ಕುಸುಮ್ ಯೋಜನೆ, ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ ಮಾತನಾಡಿದರು. 2026ರ ಏಪ್ರಿಲ್-ಜೂನ್ (8ರವರೆಗೆ) ಅವಧಿಯಲ್ಲಿ 423 ಕೋಟಿ ರೂಪಾಯಿ ಮೌಲ್ಯದ ವಿದ್ಯುತನ್ನು ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದ್ದೇವೆ. ಹಗಲಿನ ವೇಳೆ ಕಡಿಮೆ ದರಕ್ಕೆ ವಿದ್ಯುತ್ ಖರೀದಿಸಿ, ರಾತ್ರಿ ವೇಳೆ ಜಲ ಮತ್ತು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗಿದೆ. ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಸಮರ್ಥವಾಗಿ ಪೂರೈಸುವ ಜೊತೆಗೆ ಈ ಸಾಧನೆ ಮಾಡಿದ್ದೇವೆ. ವಿದ್ಯುತ್ ಉತ್ಪಾದನೆ,




ಗ್ರಿಡ್ ನಿರ್ವಹಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ವ್ಯಾವಹಾರಿಕ ಜಾಣ್ಮೆಯ ಫಲವಿದು ಎಂದರು. ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಇಂಧನ ಬೇಡಿಕೆ ಮತ್ತು ಬಳಕೆಯ ಕುರಿತು ಪ್ರಮುಖ ಅಂಕಿ-ಅಂಶಗಳನ್ನು ನೀಡಿದ ಸಚಿವ ಕೆ.ಜೆ.ಜಾರ್ಜ್, 2023-24ರ ಆರ್ಥಿಕ ವರ್ಷದಲ್ಲಿ ರಾಜ್ಯದ ಗರಿಷ್ಠ ಬೇಡಿಕೆ 18,478 ಮಿಲಿಯನ್ ಯೂನಿಟ್ ಆದರೆ ಒಟ್ಟು ಬಳಕೆ 10,451 ಮಿಲಿಯನ್ ಯೂನಿಟ್‌ನಷ್ಟಿತ್ತು. ವರ್ಷದಿಂದ ವರ್ಷಕ್ಕೆ ಇದು ಶೇ.19ರಷ್ಟು ಹೆಚ್ಚಳವನ್ನು ಸೂಚಿಸುತ್ತದೆ. ನಂತರ 2024-25ರ ಅವಧಿಯಲ್ಲಿ ಗರಿಷ್ಠ ಬೇಡಿಕೆ 17,682 ಮಿಲಿಯನ್ ಯೂನಿಟ್ ಆದರೆ ಮತ್ತು ಒಟ್ಟು ಬಳಕೆ 9,324 ಮಿಲಿಯನ್ ಯೂನಿಟ್‌ನಷ್ಟಿತ್ತು. ವರ್ಷದಿಂದ ವರ್ಷಕ್ಕೆ ಶೇ.28ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಪ್ರಸಕ್ತ ಆರ್ಥಿಕ ವರ್ಷ ಜೂನ್ 8ರವರೆಗಿನ ಗರಿಷ್ಠ ಬೇಡಿಕೆ 13,904 ಮಿಲಿಯನ್ ಯೂನಿಟ್ ಆಗಿದ್ದು, ಬಳಕೆ 2,103 ಮಿಲಿಯನ್ ಯೂನಿಟ್ ನಷ್ಟಿದೆ. ಇದು ವರ್ಷದಿಂದ ವರ್ಷಕ್ಕೆ ಶೇ.14ರಷ್ಟು ಹೆಚ್ಚಳವನ್ನು ಸೂಚಿಸುತ್ತದೆ ಎಂದು ತಿಳಿಸಿದರು.

**ವಿದ್ಯುತ್ ಉತ್ಪಾದನೆ:** ವಿದ್ಯುತ್ ಉತ್ಪಾದನೆಯಲ್ಲಿ ಸದೃಢ ಹೆಜ್ಜೆಗಳನ್ನಿಡುತ್ತಿರುವ ರಾಜ್ಯವು 2025?26ರಲ್ಲಿ ಉಷ್ಣ, ಜಲ, ಅನಿಲ, ಸೌರ, ಪವನ ಮತ್ತು ತ್ಯಾಜ್ಯದಿಂದ ಇಂಧನ ಮೂಲಗಳಿಂದ ಒಟ್ಟು ವಿದ್ಯುತ್ 38,041 ಮಿಲಿಯನ್ ಯೂನಿಟ್ ಉತ್ಪಾದಿಸಿದೆ. 2026-27ರ ಅಂದಾಜಿಸಲಾಗಿರುವ ವಿದ್ಯುತ್ ಉತ್ಪಾದನೆಯ ಪ್ರಮಾಣ 38,205 ಮಿಲಿಯನ್ ಯೂನಿಟ್ ಆಗಿದೆ.

ಗುಣಮಟ್ಟದ ವಿದ್ಯುತ್ ಪೂರೈಕೆ ಮತ್ತು ಸಾಮರ್ಥ್ಯ ವೃದ್ಧಿ ಜೊತೆಗೆ ವಿದ್ಯುತ್ ಮೂಲಸೌಕರ್ಯ ಸುಧಾರಣೆ ಮೂಲಕ ಇಂಧನ ಇಲಾಖೆಯು ಸುಸ್ಥಿರ ಪ್ರಗತಿ ಸಾಧಿಸುತ್ತಿದೆ ಎಂದು ಜಾರ್ಜ್ ಹೇಳಿದರು. ಇದೇ ವೇಳೆ, ಮಳೆ ಮತ್ತು ಗಾಳಿಯಿಂದಾಗುವ ಹಾನಿ ನಂತರ ವಿದ್ಯುತ್ ಅನ್ನು ತ್ವರಿತವಾಗಿ ಪುನಃಸ್ಥಾಪಿಸಿ ಜನರಿಗೆ ಯಾವುದೇ ರೀತಿ ಸಮಸ್ಯೆ ಆಗದಂತೆ ಎಚ್ಚರ ವಹಿಸಿ ಎಂದು ಸಚಿವ ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು.

### 33 ಸಾವಿರಕ್ಕೂ ಹೆಚ್ಚು ಕಂಬಗಳು ಧರೆಗೆ


ಸಚಿವರಿಗೆ ಈ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು, ಈವರೆಗೆ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲಿ ಹಾನಿಗೊಳಗಾದ 33,400 ಕಂಬಗಳು, 1,441 ಟ್ರಾನ್ಸ್‌ಫಾರ್ಮರ್‌ಗಳು ಮತ್ತು 343.56 ಕಿ.ಮೀ. ವಿದ್ಯುತ್ ಮಾರ್ಗಗಳನ್ನು ಬದಲಾಯಿಸಲಾಗಿದೆ. ಸದ್ಯ 20,012 ಲೈನ್‌ಮೆನ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಮಳೆಗಾಲದ ಕಾರ್ಯಾಚರಣೆಗಾಗಿ ಹೆಚ್ಚುವರಿಯಾಗಿ 4,883 ಲೈನ್‌ಮೆನ್‌ಗಳನ್ನು ವಿಶೇಷವಾಗಿ ನೇಮಿಸಿದೆ. ಅಲ್ಲದೇ, 99,530 ಕಂಬಗಳು ಮತ್ತು 12,733 ಟ್ರಾನ್ಸ್‌ಫಾರ್ಮರ್‌ಗಳು ಸೇರಿದಂತೆ ಅಗತ್ಯ ಸಾಮಗ್ರಿಗಳ ದಾಸ್ತಾನಿದೆ ಎಂದು ವಿವರಿಸಿದರು.

**ಈ ದಿನದ ದರ** ಪೆಟ್ರೋಲ್: 110.97 ₹/L | ಡೀಸೆಲ್ : 98.87₹/L | ಬಂಗಾರ: ₹ 14,886/Gram 24ct ₹13,645 /Gram 22ct | ಬೆಳ್ಳಿ: ₹250.00/Gram

# ರಾಜ್ಯಸಭಾ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕಾರವು ಬಿಜೆಪಿಯ 'ಸೀಟ್ ಚೋರಿ': ಬಿ.ಕೆ.ಹರಿಪ್ರಸಾದ್ ಆರೋಪ

• ಉದಯವಾಹಿನಿ, ಬೆಂಗಳೂರು

ಇಷ್ಟು ದಿನಗಳ ಕಾಲ ಬಿಜೆಪಿಯು ಮತಗಳ್ಳತನ ಮಾಡುತ್ತಿತ್ತು. ಇದೀಗ ಸ್ಥಾನ ಕಳ್ಳತನ (ಸೀಟ್ ಚೋರಿ) ಮಾಡಲು ಮುಂದಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಆರೋಪಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಬಿ.ಕೆ.ಹರಿಪ್ರಸಾದ್ ಅವರು ಕಾಂಗ್ರೆಸ್ ಕಚೇರಿಗೆ ಆಗಮಿಸಿ ಕಾರ್ಯಕರ್ತರನ್ನು ಭೇಟಿ ಮಾಡಿದರು. ಬಳಿಕ ಪತ್ರಿಕಾಗೋಷ್ಠಿ ವೇಳೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಹರಿಪ್ರಸಾದ್, ಮಧ್ಯಪ್ರದೇಶ ಕಾಂಗ್ರೆಸ್‌ನಿಂದ ರಾಜ್ಯಸಭಾ ಅಭ್ಯರ್ಥಿಯಾಗಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕೃತಗೊಂಡಿದೆ. ಇಷ್ಟು ದಿನಗಳ ಕಾಲ ಮತಗಳ್ಳತನ ಮಾಡುತಿದ್ದ ಬಿಜೆಪಿಯು ಇದೀಗ ಸೀಟ್ ಚೋರ್ ಮಾಡುವ ಮೂಲಕ ಕೀಳುಮಟ್ಟಕ್ಕೆ ಇಳಿದಿದೆ. ಹರಿಯಾಣ ಕಾಂಗ್ರೆಸ್ ಉಸ್ತುವಾರಿ ಆಯ್ಕೆ ಸಂದರ್ಭದಲ್ಲಿಯೂ ಬಿಜೆಪಿಯು ನಮಗೆ ದೊರೆಯಬೇಕಿದ್ದ ಸ್ಥಾನವನ್ನು ಬಿಜೆಪಿಯು ಕಸಿದುಕೊಂಡಿತ್ತು ಎಂದು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

ಕೆಪಿಸಿಸಿ ಕಾರ್ಯಾಧ್ಯಕ್ಷ ಜೆ.ಸಿ.ಚಂದ್ರಶೇಖರ್ ಮಾತನಾಡಿ, ಹಿರಿಯ ಹಾಗೂ ರಾಜಕೀಯ ಮುತ್ಸದ್ದಿಯಾಗಿರುವ ಬಿ.ಕೆ.ಹರಿಪ್ರಸಾದ್ ಅವರನ್ನು ಕಾಂಗ್ರೆಸ್ ಪಕ್ಷದ ರಾಜ್ಯ ಅಧ್ಯಕ್ಷರಾಗಿ ಆಯ್ಕೆ ಮಾಡಿದೆ. ಇದೇ ತಿಂಗಳು 21ರಂದು ಅರಮನೆ ಮೈದಾನದಲ್ಲಿ ಪದಗ್ರಹಣ ಮಾಡಲಿದ್ದು, ಅಧಿಕೃತವಾಗಿ ಸಿಎಂ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಬಾವುಟ ನೀಡಿ ಜವಾಬ್ದಾರಿಯನ್ನು ಹಸ್ತಾಂತರ ಮಾಡಲಿದ್ದಾರೆ.

ಶಿವಕುಮಾರ್ ಹಾಗೂ ಹರಿಪ್ರಸಾದ್ ಅವರು ಅನುಭವಿ ಜೋಡಿಯಾಗಿದ್ದು, ಇವರ ಹಿಂದೆ ಸಿದ್ದರಾಮಯ್ಯ ಅವರ ಮಾರ್ಗದರ್ಶನ ಇರಲಿದೆ. 2028ರ ವಿಧಾನಸಭಾ ಚುನಾವಣೆಯನ್ನ ಮೂವರ ನೇತೃತ್ವದಲ್ಲಿ ಎದುರಿಸಿ ಮತ್ತೆ ಅಧಿಕಾರಕ್ಕೆ ಬರಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜೂನ್ 18ರಂದು 24 ಸ್ಥಾನಗಳಿಗೆ ರಾಜ್ಯಸಭಾ ಚುನಾವಣೆ ನಡೆಯಲಿದೆ. 10 ರಾಜ್ಯಗಳಿಂದ ಹಲವು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ರಾಜ್ಯದಿಂದ ನಾಲ್ಕು ರಾಜ್ಯಸಭೆಸ್ಥಾನಗಳು ತೆರವಾಗಲಿವೆ. ಆ ಪೈಕಿ ಕಾಂಗ್ರೆಸ್ ಸಂಖ್ಯಾಬಲದಂತೆ 3 ಸ್ಥಾನ ಲಭಿಸಲಿದ್ದು, ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ. ಕರ್ನಾಟಕದಲ್ಲಿ ಕಾಂಗ್ರೆಸ್‌ನಿಂದ ರಾಜ್ಯಸಭೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮನ್ಸೂರ್ ಅಲಿ ಖಾನ್ ಹಾಗೂ ಪವನ್‌ಖೇರಾ ಕಣಕ್ಕಿಳಿದಿದ್ದಾರೆ. ಹಾಗೆಯೇ, ಬಿಜೆಪಿಯಿಂದ ಪ್ರೊ ಎಂ.ನಾಗರಾಜ್ ಅವರಿಗೆ ರಾಜ್ಯಸಭೆ ಟಿಕೆಟ್ ನೀಡಲಾಗಿದೆ. ಹಾಗೆಯೇ, ಮೀನಾಕ್ಷಿ ನಟರಾಜನ್ ಅವರನ್ನು ಮಧ್ಯಪ್ರದೇಶದ ರಾಜ್ಯಸಭಾ ಚುನಾವಣೆಗೆ ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಇದರಿಂದ ಬಿಜೆಪಿ ಅಭ್ಯರ್ಥಿಗೆ ಗೆಲುವು ಸುಲಭವಾಗಿದೆ. ಮೀನಾಕ್ಷಿ ನಟರಾಜನ್ ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಪ್ರಕರಣವೊಂದರ ವಿವರಗಳನ್ನು ಸಂಪೂರ್ಣವಾಗಿ ಬಹಿರಂಗಪಡಿಸಿಲ್ಲ ಎಂದು ಆರೋಪಿಸಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕೊಠಾರಿ ಆಕ್ಷೇಪಣೆ ಸಲ್ಲಿಸಿದ್ದರು.

## ಪ್ರಧಾನಿ ಮೋದಿ 12 ವರ್ಷಗಳ ಕಾಲ ಸಮರ್ಥ ಆಡಳಿತಕ್ಕೆ ಮತ್ತಷ್ಟು ಚೈತನ್ಯ ನೀಡಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿಜೀಯವರು ಭಾರತದ ಪ್ರಧಾನಿಯಾಗಿ 12 ವರ್ಷಗಳ ಕಾಲ ಸಮರ್ಥ ಆಡಳಿತ ನೀಡಿದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ವಿ ಸೋಮಣ್ಣ ಅವರು ವಿಜಯನಗರ ವಿಧಾನಸಭಾ ಕ್ಷೇತ್ರದ ಹಂಪಿ ನಗರದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ, ಪ್ರಧಾನಿಗಳಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ಮತ್ತಷ್ಟು ಚೈತನ್ಯ ನೀಡಲಿ ಎಂದು ಪ್ರಾರ್ಥಿಸಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ, ಮಾಜಿ ಬಿಬಿಎಂಪಿ ಸದಸ್ಯರಾದ ಹೆಚ್. ರವೀಂದ್ರರವರು, ಮಂಡಲ ಬಿಜೆಪಿ ಅಧ್ಯಕ್ಷರಾಗಿರುವ ರಾಮಾಂಜನಿ ಅವರು, ಮುಖಂಡರಾದ ಟಿ.ವಿ ಕೃಷ್ಣ ಅವರು, ಶ್ರೀ ಭಾಬಿ ವೆಂಕಟೇಶ್ ಅವರು ಸೇರಿದಂತೆ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಬಿವೈವಿ ಅವರಿಂದ ವಿಶೇಷ ಪೂಜೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜೀ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ.

ಮಲ್ಲೇಶ್ವರದ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್, ರಾಜ್ಯ ಉಪಾಧ್ಯಕ್ಷ ಮುರುಗೇಶ್ ನಿರಾಣಿ, ಶಾಸಕರಾದ ಬಸವರಾಜ ಮತ್ತಿಮಡು, ಡಾ. ಶಿವರಾಜ್ ಪಾಟೀಲ್, ವಿಧಾನಪರಿಷತ್ ಸದಸ್ಯ ಪಿ.ಹೆಚ್. ಪೂಜಾರ್, ಎಸ್‌ಟಿ ಮೋರ್ಚಾ ರಾಜ್ಯ ಅಧ್ಯಕ್ಷ ಬಂಗಾರು ಹನುಮಂತು, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರೀ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಕೆಲಸ ಮಾಡುತ್ತಿದ್ದ ಮನೆಯಲ್ಲೇ 25 ಲಕ್ಷ ಎಗರಿಸಿದ್ದ ನೇಪಾಳದ ದಂಪತಿ

### ಅಮೃತಹಳ್ಳಿ ಪೊಲೀಸ್ ಠಾಣೆಗೆ ದೂರು

• ಉದಯವಾಹಿನಿ, ಬೆಂಗಳೂರು

ಕೆಲಸ ಮಾಡಿಕೊಂಡಿದ್ದ ಮನೆಯಲ್ಲಿ ಕಳ್ಳತನ ಎಸಗಿದ್ದ ನೇಪಾಳ ಮೂಲದ ದಂಪತಿಯನ್ನು ನಗರದ ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪವನ್ ಬಿಸ್ತಾ ಹಾಗೂ ಸೀತಾ ಬಿಸ್ತಾ ಬಂಧಿತ ಆರೋಪಿಗಳು. ನಗರದ ಅರ್ಕಾವತಿ ಲೇಔಟ್‌ನಲ್ಲಿರುವ ಗುತ್ತಿಗೆದಾರರೊಬ್ಬರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಆರೋಪಿಗಳು, ಮೇ 27ರಂದು ಮನೆಯ ಕಬೋರ್ಡ್‌ನಲ್ಲಿದ್ದ 25 ಲಕ್ಷ ರೂಪಾಯಿ ನಗದು ದೋಚಿಕೊಂಡು ಪರಾರಿಯಾಗಿರುವ ಬಗ್ಗೆ ದೂರು ದಾಖಲಾಗಿತ್ತು.ದೂರುದಾರ ಉದ್ಯಮಿಯ ಮನೆಯಲ್ಲಿ ಆರೋಪಿ ಪವನ್ ಬಿಸ್ತಾ ಒಂದು ತಿಂಗಳಿನಿಂದ ಸೆಕ್ಯುರಿಟಿ ಗಾರ್ಡ್ ಕೆಲಸಕ್ಕಿದ್ದರೆ, ಆತನೊಂದಿಗೆ ಪತ್ನಿ ಸೀತಾ ಬಿಸ್ತಾ ಮನೆಗೆಲಸ ಮಾಡಿಕೊಂಡಿದ್ದಳು. ಕೆಲಸಗಾರರಿಗೆ ಕೊಡಬೇಕಿದ್ದ ವೇತನದ ಹಣ 25 ಲಕ್ಷ ರೂಪಾಯಿಯನ್ನು ಉದ್ಯಮಿಯು ಮನೆಯ ಕಬೋರ್ಡ್‌ನಲ್ಲಿ ಇಟ್ಟಿದ್ದರು. ಮೇ 27ರಂದು ಮನೆ ಮಾಲೀಕರು ಕೆಲಸದ ನಿಮಿತ್ತ ಮನೆಯಿಂದ ಹೊರಗಡೆ ಹೋಗಿದ್ದರು. ಅದೇ ಸಮಯದಲ್ಲಿ ಮನೆಯೊಳಗೆ ನುಗ್ಗಿದ್ದ ಆರೋಪಿಗಳು ನಗದು ದೋಚಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮಾಲೀಕ ಮನೆಗೆ ಬಂದಾಗ ಕೆಲಸಗಾರರಿಬ್ಬರು ನಾಪತ್ತೆಯಾಗಿದ್ದರು. ಅನುಮಾನಗೊಂಡು ಕಬೋರ್ಡ್ ಪರಿಶೀಲಿಸಿದಾಗ ಮನೆಯಲ್ಲಿ ನಗದು ಕಳ್ಳತನವಾಗಿರುವುದು ಬಯಲಾಗಿತ್ತು.

ತಕ್ಷಣ ಮಾಲೀಕರು ಅಮೃತಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ ಅಮೃತಹಳ್ಳಿ ಠಾಣೆ ಪೊಲೀಸರು ಕೆಂಗೇರಿಯ ಶಿರ್ಕೆಯ ಬಳಿ ವಾಸವಿದ್ದ ಆರೋಪಿ ದಂಪತಿಯನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 25 ಲಕ್ಷ ರೂ. ನಗದು ವಶಪಡಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ರಾಜ್ಯದಲ್ಲಿ ಮುಂಗಾರು ಮತ್ತಷ್ಟು ಚುರುಕು ಕರಾವಳಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಮತ್ತಷ್ಟು ಚುರುಕುಗೊಂಡಿದೆ. ಮುಂದಿನ ಕೆಲವು ದಿನಗಳು ರಾಜ್ಯದ ಕರಾವಳಿ ಹಾಗೂ ಮಲೆನಾಡಿನ ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಹಲವು ಜಿಲ್ಲೆಗಳಿಗೆ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ 30 ರಿಂದ 40 ಕಿ.ಮೀ ವೇಗದ ಬಲವಾದ ಗಾಳಿಯೊಂದಿಗೆ ಭಾರಿ ಮಳೆ ನಿರೀಕ್ಷಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ತೀವ್ರ ಗಾಳಿ ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದ್ದು ಎಲ್ಲೋ ಅಲರ್ಟ್ ಘೋಷಿಸಲಾಗಿದೆ. ಜೊತೆಗೆ ಮಲೆನಾಡು ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಾದ ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಕೋಲಾರ, ತುಮಕೂರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಬಲವಾದ ಗಾಳಿ ಸಹಿತ ಭಾರಿ ಮಳೆಯಾಗುವ ನಿರೀಕ್ಷೆಯಿದ್ದು, ಆ ಜಿಲ್ಲೆಗಳಿಗೂ ಎಲ್ಲೋ ಅಲರ್ಟ್ ಘೋಷಿಸಲಾಗಿದೆ.

## ತ್ಯಾಜ್ಯ ಸಂಸ್ಕರಣೆ ಟೆಂಡರ್‌ನಲ್ಲಿ 33 ಸಾವಿರ ಕೋಟಿ ಲೂಟಿಗೆ ಯತ್ನ ಅಶೋಕ್ ಆರೋಪ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ಮಹಾನಗರ ಪಾಲಿಕೆಗಳಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ 5,200 ಮೆಟ್ರಿಕ್ ಟನ್ ತ್ಯಾಜ್ಯ ಸಂಸ್ಕರಣೆಗೆ ಯೋಜನೆಯಡಿ 39,437 ಕೋಟಿ ವೆಚ್ಚದ ಟೆಂಡರ್‌ಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿರುವುದನ್ನು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀವ್ರವಾಗಿ ಖಂಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ತ್ಯಾಜ್ಯ ಸಂಸ್ಕರಣೆಗೆ ಪ್ರತಿ ಟನ್‌ಗೆ 260 ಟಿಪ್ಪಿಂಗ್ ಶುಲ್ಕ ನೀಡಲಾಗುತ್ತಿದ್ದು, ಹೊಸ ಯೋಜನೆಯಲ್ಲಿ ಪ್ರತಿ ಟನ್‌ಗೆ 2,400 ಪಾವತಿಸಲು ಅನುಮೋದನೆ ನೀಡಲಾಗಿದೆ. ಇದು ಈಗಿನ ವೆಚ್ಚಕ್ಕಿಂತ ಸುಮಾರು ಒಂಬತ್ತೂವರೆ ಪಟ್ಟು ಹೆಚ್ಚಾಗಿದ್ದು, ಸಾರ್ವಜನಿಕ ಹಣದ ದುರುಪಯೋಗಕ್ಕೆ ಅವಕಾಶ ಕಲ್ಪಿಸುವ ನಿರ್ಧಾರವಾಗಿದೆ ಎಂದು ಆರೋಪಿಸಿದರು. ಈ ಪ್ರಸ್ತಾವನೆಗೆ ಸಚಿವ ಸಂಪುಟದ 33 ಸಚಿವರಲ್ಲಿ 10ಕ್ಕೂ ಹೆಚ್ಚು ಸಚಿವರು ವಿರೋಧ ವ್ಯಕ್ತಪಡಿಸಿದ್ದರೂ ಸರ್ಕಾರ ಅನುಮೋದನೆ ನೀಡಿರುವುದು ಆಶ್ಚರ್ಯಕರ ಸಂಗತಿ ಎಂದು ಹೇಳಿದರು. ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೂ ಸಹ ಈ ಯೋಜನೆಯ ವೆಚ್ಚ ಅತಿಯಾದದ್ದು ಎಂದು ಕಡತದಲ್ಲಿ ಲಿಖಿತ ಅಭಿಪ್ರಾಯ ದಾಖಲಿಸಿದ್ದಾರೆ ಎಂದು ಅಶೋಕ್ ತಿಳಿಸಿದರು. ಯೋಜನೆಯ ಟೆಂಡರ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುವ ಸಂಸ್ಥೆಯು ಬಿಡ್ ಮೊತ್ತಕ್ಕಿಂತಲೂ ಶೇ.20ರಷ್ಟು ಹೆಚ್ಚಿನ ಮೊತ್ತವನ್ನು ನಮೂದಿಸಿದ್ದರೂ ಸರ್ಕಾರ ಅನುಮೋದನೆ ನೀಡಿದೆ. ಇದರಿಂದ ಒಟ್ಟಾರೆ ವೆಚ್ಚವು ವಾಸ್ತವ ಅಗತ್ಯಕ್ಕಿಂತ ಶೇ.408ರಷ್ಟು ಹೆಚ್ಚಾಗಿದೆ ಎಂದು ಅವರು ಆರೋಪಿಸಿದರು.

ಪ್ರಸ್ತುತ ಕನ್ನಹಳ್ಳಿ, ಸೀಗೇಹಳ್ಳಿ, ಸುಬ್ಬರಾಯನಪಾಳ್ಯ, ಚಿಕ್ಕನಾಗಮಂಗಲ ಹಾಗೂ ಸೇರಿದಂತೆ ಏಳು ತ್ಯಾಜ್ಯ ಸಂಸ್ಕರಣಾ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳು ಪ್ರತಿ ಟನ್‌ಗೆ 275-280 ಪಾವತಿಸಿದರೂ ಕಾರ್ಯ ಮುಂದುವರಿಸಲು ಸಮ್ಮತಿ ಸೂಚಿಸಿವೆ. ಇಂತಹ ಸಂದರ್ಭದಲ್ಲಿ 2,400 ಪಾವತಿಸಲು ಮುಂದಾಗಿರುವುದರ ಹಿಂದಿನ ಉದ್ದೇಶ ಪ್ರಶ್ನಾರ್ಹವಾಗಿದೆ ಎಂದು ಹೇಳಿದರು. ಹಿಂದೆ ಕಪ್ಪುಪಟ್ಟಿಗೆ ಸೇರಿಸಲಾಗಿದ್ದ ಸಂಸ್ಥೆಯೊಂದಿಗೆ ಸಂಬಂಧ ಹೊಂದಿರುವ ಅಯೋಧ್ಯೆ ರಾಮರೆಡ್ಡಿ ನೇತೃತ್ವದ ಸಂಸ್ಥೆಗೆ ಈ ಬೃಹತ್ ಮೊತ್ತದ ಗುತ್ತಿಗೆ ನೀಡಲಾಗಿದೆ ಎಂದು ಅಶೋಕ್ ದೂರಿದರು.

**1** ರಾಜ್ಯದಲ್ಲಿ ಘನತ್ಯಾಜ್ಯ ವಿಲೇವಾರಿ ಟೆಂಡರ್‌ನಲ್ಲಿ ಭಾರೀ ಅಕ್ರಮ ಆರೋಪ

**2** ರಾಜ್ಯ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ ವಿಪಕ್ಷ ಬಿಜೆಪಿ

**3** ಟೆಂಡರ್ ರದ್ದು ಮಾಡಲು ಬಿಜೆಪಿ ನಾಯಕರಿಂದ ಒತ್ತಾಯ, ಹೋರಾಟದ ಎಚ್ಚರಿಕೆ



ಉದಯವಾಹಿನಿ ಚಿತ್ರ

### ತನಿಖೆಗೆ ಒಳಪಡಿಸಿ

ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ಈ ಕುರಿತು ದೂರು ನೀಡಿದರು. ಈ ಟೆಂಡರ್ ಪ್ರಕ್ರಿಯೆಯನ್ನು ತನಿಖೆಗೆ ಒಳಪಡಿಸಬೇಕು.

### ರಾಜ್ಯಪಾಲರಿಗೆ ದೂರಿನ ಪತ್ರ

**ಸಚಿವ ಸಂಪುಟದ 33 ಸಚಿವರಲ್ಲಿ 10ಕ್ಕೂ ಹೆಚ್ಚು ಸಚಿವರು ವಿರೋಧ ವ್ಯಕ್ತಪಡಿಸಿದ್ದರೂ ಸರ್ಕಾರ ಅನುಮೋದನೆ ನೀಡಿರುವುದು ಆಶ್ಚರ್ಯಕರ ಸಂಗತಿ**



"ಬೆಂಗಳೂರು ನಗರದ ನಾಲ್ಕು ಭಾಗಗಳಲ್ಲಿ ತಲಾ 100 ಎಕರೆ ಪ್ರದೇಶವನ್ನು ಸರ್ಕಾರವೇ ಖರೀದಿಸಿ, ಮೂಲಸೌಕರ್ಯ ಕಲ್ಪಿಸಿದ ಬಳಿಕ ಯೋಜನೆಯನ್ನು ಖಾಸಗಿ ಸಂಸ್ಥೆಗೆ ಹಸ್ತಾಂತರಿಸಲಾಗುತ್ತಿದೆ. ಅಲ್ಲದೆ ಆ ಭೂಮಿಯ ಆಧಾರದ ಮೇಲೆ 1,500 ಕೋಟಿ ಸಾಲ ಪಡೆಯುವ ಅವಕಾಶವನ್ನೂ ಗುತ್ತಿಗೆದಾರರಿಗೆ ನೀಡಲಾಗಿದೆ ಎಂದು ಆರೋಪಿಸಿದರು. **ವಿಪಕ್ಷ ಆರ್ ಅಶೋಕ್**

### ಬೃಹತ್ ಟೆಂಡರ್‌ಗಳಿಗೆ ಅನುಮೋದನೆ

ಈ ಸಂಪೂರ್ಣ ಪ್ರಕ್ರಿಯೆಯು ಸಂವಿಧಾನದ 74ನೇ ತಿದ್ದುಪಡಿ ಆಶಯಗಳಿಗೆ ವಿರುದ್ಧವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲದ ಸಂದರ್ಭದಲ್ಲಿ ಇಂತಹ ಬೃಹತ್ ಟೆಂಡರ್‌ಗಳಿಗೆ ಅನುಮೋದನೆ ನೀಡಬಾರದು ಎಂಬ ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ಅವರು ಆರೋಪಿಸಿದರು.

### ದಾಖಲೆ ಸಮೇತ ದೂರು

39,437 ಕೋಟಿ ಮೊತ್ತದ ಯೋಜನೆಯಲ್ಲಿ ಸುಮಾರು 33 ಸಾವಿರ ಕೋಟಿ ಸಾರ್ವಜನಿಕ ಹಣವನ್ನು ಲೂಟಿ ಮಾಡುವ ಸಂಚು ನಡೆದಿದೆ ಎಂಬುದು ದಾಖಲೆಗಳಿಂದ ಬಹಿರಂಗವಾಗಿದೆ ಎಂದು ಆರೋಪಿಸಿದ ಅಶೋಕ್, ಈ ಕುರಿತು ರಾಜ್ಯಪಾಲರು ಹಾಗೂ ಲೋಕಾಯುಕ್ತರಿಗೆ ದಾಖಲೆ ಸಮೇತ ದೂರು ಸಲ್ಲಿಸಲಾಗುವುದು ಎಂದು ತಿಳಿಸಿದರು.

### ಆರ್ಥಿಕ ಇಲಾಖೆಯಿಂದ ಎಚ್ಚರಿಕೆ

ಎರಡೂ ಪ್ಯಾಕೇಜ್‌ಗಳನ್ನು ಒಂದೇ ಕಂಪನಿಗೆ ನೀಡಿರುವುದು, 30 ವರ್ಷಗಳ ದೀರ್ಘ ಅವಧಿ, 5% ಹೆಚ್ಚಳ ಮೊದಲಾದ ಅಂಶಗಳ ಬಗ್ಗೆ ಹಣಕಾಸು ಇಲಾಖೆ ತಕರಾರು ಎತ್ತಿದೆ. ಅವಧಿಯನ್ನು 10 ವರ್ಷಕ್ಕೆ ಇಳಿಸಿ, ಹೆಚ್ಚಿನ ಮೊತ್ತವನ್ನು 2.5% ಇಳಿಸಬೇಕು, ಇಲ್ಲವಾದರೆ ಜಿಬಿಎಗೆ ಮುಂದೆ ಹೊರೆಯಾಗುತ್ತದೆ ಎಂದು ಸಲಹೆ ನೀಡಲಾಗಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಮುಖ್ಯಮಂತ್ರಿಗೆ ಪತ್ರ ಬರೆದು, ಇದರಲ್ಲಿನ ಲೋಪಗಳನ್ನು ಎತ್ತಿ ತೋರಿಸಿದ್ದಾರೆ ಎಂದರು. ರಾಮ್‌ಕಿ ಕಂಪನಿ ವಂಚನೆ ಮಾಡಿದೆ, ನಿಯಮಗಳನ್ನು ಉಲ್ಲಂಘಿಸಿದೆ ಎಂದು ವಿಶ್ವಬ್ಯಾಂಕ್ ಹೇಳಿದ್ದು, ಇದನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. 2016 ರಲ್ಲಿ ಬಿಬಿಎಂಪಿಯಿಂದಲೇ ರಾಮ್‌ಕಿ ಕಂಪನಿಯ ಗುತ್ತಿಗೆ ರದ್ದು ಮಾಡಲಾಗಿತ್ತು. ಇಷ್ಟಿದ್ದರೂ ಇದೇ ಕಂಪನಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಸಿಎಂ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಟೆಂಡರ್ ನೀಡಿದೆ ಎಂದರು. ಸಿದ್ದರಾಮಯ್ಯ ರಾಜೀನಾಮೆ ನೀಡುವ ಮುನ್ನ ಇದನ್ನು ಸಂಪುಟಕ್ಕೆ ತಂದು ಅನುಮೋದನೆ ನೀಡಲಾಗಿದೆ. ಇದಕ್ಕಾಗಿ ಸಿದ್ದರಾಮಯ್ಯನವರಿಗೆ ದೆಹಲಿಯಿಂದ ಕರೆ ಬಂದಿತ್ತು.

## ತೊಟ್ಟಿಗಳಾದ ಶಂಪುರ, ಟ್ಯಾನರಿ ರಸ್ತೆ! ಎಲ್ಲೆಲ್ಲೂ ದುರ್ವಾಸನೆ..

• ಉದಯವಾಹಿನಿ, ಬೆಂಗಳೂರು

ಶಂಪುರ ಅಥವಾ ಟ್ಯಾನರಿ ರಸ್ತೆಗಳಲ್ಲಿ ನಡೆದು ಹೋಗಲು ಪ್ರಯತ್ನಿಸಿದರೆ ಕಸದ ದುರ್ವಾಸನೆ ಮೂಗಿಗೆ ರಾಚುತ್ತದೆ. ಆದರೂ, ನಿವಾಸಿಗಳು ಹೊಂದಿಕೊಂಡು ತಮ್ಮ ಜೀವನ ಸಾಗಿಸುತ್ತಿದ್ದಂತೆ ವ್ಯಾಪಾರ ಎಂದಿನಂತೆ ನಡೆಯುತ್ತಿದೆ. ಸರಿಯಾಗಿ ತ್ಯಾಜ್ಯ ವಿಲೇವಾರಿ ಇಲ್ಲದೆ ನಿವಾಸಿಗಳಲ್ಲಿ ಕಳವಳ ಹೆಚ್ಚುತ್ತಿದೆ.

ಆಟೋ ಬರುವ ಸಮಯದ ಬಗ್ಗೆ ತಿಳಿಯದೆ ಜನರು ಎಲ್ಲೆಂದರಲ್ಲಿ ಮನೆಯ ಪಕ್ಕದಲ್ಲಿ ಕಸ ತಂದು ಸುರಿಯುತ್ತಿದ್ದಾರೆ. ಇದರಿಂದ ಕಸದ ತೊಟ್ಟಿಗಳಾಗಿ ಮಾರ್ಪಟ್ಟಿದೆ. ಮುಂಜಾನೆ ಮತ್ತು ಸಂಜೆ ಬೀದಿನಾಯಿಗಳು ಮತ್ತು ದನಗಳು ಹೆಚ್ಚಾಗಿ ಇಲ್ಲಿರುತ್ತವೆ.


ಉದಯವಾಹಿನಿ ಚಿತ್ರ

ಸೊಳ್ಳೆಗಳು, ಇಲಿಗಳ ಕಾಟ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ ಎಂದು ಸ್ಥಳೀಯ ನಿವಾಸಿಗಳು ಹೇಳುತ್ತಾರೆ. ಹಲವಾರು ಕಿರಿದಾದ ಮಾರ್ಗಗಳು, ಖಾಲಿ ಜಾಗಗಳು ಮತ್ತು ರಸ್ತೆಬದಿಯ ಮೂಲೆಗಳು ಕಸದ ತೊಟ್ಟಿಗಳಾಗಿ ಮಾರ್ಪಟ್ಟಿವೆ. ಒಮ್ಮೆ ಒಂದೇ ಸ್ಥಳದಲ್ಲಿ ಕಸ ಸಂಗ್ರಹವಾಗಲು ಪ್ರಾರಂಭಿಸಿದರೆ, ಅದು ಕ್ರಮೇಣ ಹೆಚ್ಚಾಗಲು ಪ್ರಾರಂಭವಾಗುತ್ತದೆ. ಈ ಪ್ರದೇಶದ ದೈನಂದಿನ ಪ್ರಯಾಣಿಕರು ಮತ್ತು ಅಂಗಡಿಯವರು ಸಹ ತೊಂದರೆ ಪಡುತ್ತಿದ್ದಾರೆ. ತ್ಯಾಜ್ಯಗಳಿಂದ ಓಡಾಡಲು ಜಾಗ ಇಲ್ಲದಂತಾಗಿದೆ. ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಚ್ಚಿಹೋಗಿರುವ ಚರಂಡಿಗಳಲ್ಲಿ ಕೆಲವೊಮ್ಮೆ ಮಳೆಯ ಸಮಯದಲ್ಲಿ ಸಣ್ಣ ಪ್ರಮಾಣದ ನೀರು ನಿಲ್ಲುವುದರಿಂದ ಜನರು ತೀವ್ರ ತೊಂದರೆ ಎದುರಿಸುವಂತಾಗಿದೆ ಎಂದು ಇನ್ನೂ ಕೆಲವು ಮಂದಿ ಹೇಳಿದರು.

### ಕೆಲವೊಮ್ಮೆ ವಿಳಂಬಕ್ಕೆ ಕಾರಣ

ರಸ್ತೆಬದಿಯ ಡಂಪಿಂಗ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳನ್ನು ನಾಗರಿಕರು ಒತ್ತಾಯಿಸಿದ್ದಾರೆ. ಕೆಲವು ಜನದಟ್ಟಣೆಯ ಪ್ರದೇಶಗಳಲ್ಲಿ, ವಾಹನಗಳು ಕಿರಿದಾದ ಮಾರ್ಗದಲ್ಲಿ ಹೋಗುವಾಗ ತೊಂದರೆಯನ್ನು ಎದುರಿಸುತ್ತವೆ, ಇದು ಕೆಲವೊಮ್ಮೆ ವಿಳಂಬಕ್ಕೆ ಕಾರಣವಾಗುತ್ತದೆ ಎಂದು ಹೆಸರು ಹೇಳಲು ಇಚ್ಛಿಸದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮಾರ್ಷಲ್ ಒಬ್ಬರು ತಿಳಿಸಿದರು.

## ಕರ್ನಾಟಕದಲ್ಲಿ ಸಲಿಂಗಿಗಳಲ್ಲಿ ಹೆಚ್‌ಐವಿ ಪ್ರಕರಣ ಸಂಖ್ಯೆ 166ರಿಂದ 412ಕ್ಕೆ ಏರಿಕೆ: ಆತಂಕಕಾರಿ ಸಂಗತಿ ಬಹಿರಂಗ

• ಉದಯವಾಹಿನಿ, ಬೆಂಗಳೂರು

ಪುರುಷರೊಂದಿಗೆ ಲೈಂಗಿಕ ಸಂಬಂಧ ಹೊಂದುವ ಪುರುಷರ ಸಲಿಂಗಕಾಮಿಗಳ ಸಮುದಾಯದಲ್ಲಿ ಎಚ್‌ಐವಿ ಸೋಂಕು ಪತ್ತೆಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚಳವಾಗಿದ್ದು, ರಾಜ್ಯ ಏಡ್ಸ್ ತಡೆಗಟ್ಟುವಿಕೆ ಸಂಸ್ಥೆಯ ಅಂಕಿಅಂಶಗಳ ಪ್ರಕಾರ 2023-24ರಲ್ಲಿ 166 ಇದ್ದ ಪ್ರಕರಣಗಳು 2025-26ರಲ್ಲಿ 412ಕ್ಕೆ ಏರಿಕೆಯಾಗಿದೆ. ಅಂಕಿಅಂಶಗಳ ಪ್ರಕಾರ, 2024-25ರಲ್ಲಿ ಈ ಸಂಖ್ಯೆ 362ಕ್ಕೆ ಏರಿಕೆಯಾಗಿದ್ದು, 2025-26ರಲ್ಲಿ 412ಕ್ಕೆ ತಲುಪಿದೆ. ಕಳೆದ ಮೂರು ವರ್ಷಗಳಿಂದ ಈ ಸಮುದಾಯದಲ್ಲಿ ಎಚ್‌ಐವಿ ಸೋಂಕು ಪತ್ತೆಯಾಗುತ್ತಿರುವ ಪ್ರಕರಣಗಳಲ್ಲಿ ನಿರಂತರ ಏರಿಕೆ ಕಂಡುಬಂದಿದೆ.

ಕೆಎಸ್‌ಎಪಿಎಸ್ ಮಾಹಿತಿ ಪ್ರಕಾರ, ನಿರ್ದಿಷ್ಟ ಸಮುದಾಯಗಳ ಕಾರ್ಯಕ್ರಮ ಅಡಿಯಲ್ಲಿ ನೋಂದಾಯಿತ ಲೈಂಗಿಕ ಸಂಬಂಧ ಹೊಂದುವ ವ್ಯಕ್ತಿಗಳ ಸಂಖ್ಯೆ 2023-24ರಲ್ಲಿ 44,581 ಇದ್ದದ್ದು, 2024-25ರಲ್ಲಿ 62,664ಕ್ಕೆ ಹಾಗೂ 2025-26ರಲ್ಲಿ 66,606ಕ್ಕೆ ಏರಿಕೆಯಾಗಿದೆ. ನೋಂದಾಯಿತರಲ್ಲಿ 26-35 ವರ್ಷ ವಯೋಮಾನದವರೇ ಅತಿ ಹೆಚ್ಚು ಸಂಖ್ಯೆಯಲ್ಲಿದ್ದು, ನಂತರ 18-25 ವರ್ಷ ವಯೋಮಾನದವರು ಇದ್ದಾರೆ. ಎಂಎಸ್ ಎಂ ಸಮುದಾಯಕ್ಕಾಗಿ ಜಾರಿಗೊಳಿಸಲಾಗುವ ಈ ಕಾರ್ಯಕ್ರಮಗಳು ಎಚ್‌ಐವಿ ಹಾಗೂ ಇತರೆ ಲೈಂಗಿಕ ಸಂಪರ್ಕದಿಂದ ಹರಡುವ ಸೋಂಕುಗಳ ತಡೆಗಟ್ಟುವಿಕೆಗೆ ಉದ್ದೇಶಿತ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಾಗಿವೆ.


ಉದಯವಾಹಿನಿ ಚಿತ್ರ

ಎಂಎಸ್ ಎಂ ಸಮುದಾಯದಲ್ಲಿ ಎಚ್‌ಐವಿ ಮತ್ತು ಲೈಂಗಿಕ ಆರೋಗ್ಯದ ಕುರಿತು ಅರಿವಿನ ಕೊರತೆ ಹಾಗೂ ತಪ್ಪು ಕಲ್ಪನೆಗಳು ಇನ್ನೂ ಪ್ರಮುಖ ಸಮಸ್ಯೆಯಾಗಿವೆ. ಸುರಕ್ಷಿತ ಲೈಂಗಿಕ ಜೀವನದ ಬಗ್ಗೆ ತಿಳುವಳಿಕೆ ಇಲ್ಲದೆ ಮತ್ತು ನಿಯಮಿತ ಎಚ್‌ಐವಿ ಪರೀಕ್ಷೆಯ ಮಹತ್ವ ಅರಿಯದೆ ಅನೇಕರು ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

"ಡೇಟಿಂಗ್ ಆಪ್‌ಗಳ ಬಳಕೆ ಹೆಚ್ಚುತ್ತಿರುವುದರಿಂದ ಜನರು ಸುಲಭವಾಗಿ ಸಂಪರ್ಕ ಸಾಧಿಸುತ್ತಿದ್ದಾರೆ. ಸರಿಯಾದ ಮಾಹಿತಿ ಹಾಗೂ ತಡೆಗಟ್ಟುವ ಸೇವೆಗಳು ಎಲ್ಲರಿಗೂ ತಲುಪುವಂತೆ ನಿರಂತರ ಜಾಗೃತಿ ಮತ್ತು ಸಂಪರ್ಕ ಕಾರ್ಯಕ್ರಮಗಳ ಅಗತ್ಯವಿದೆ. **ಪದ್ಮ ಬಸವಂತಪ್ಪ ಕೆಎಸ್‌ಎಪಿಎಸ್ ಯೋಜನಾ ನಿರ್ದೇಶಕಿ**

## ಹಣಕಾಸು ವರ್ಷ ಆರಂಭದ ಎರಡೇ ತಿಂಗಳಲ್ಲಿ ಶೇ 49ರಷ್ಟು ಆಸ್ತಿ ತೆರಿಗೆ ಗುರಿ ಸಾಧಿಸಿದ; 2,933 ಕೋಟಿ ಸಂಗ್ರಹ!

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿರುವ ಐದು ನಗರ ಪಾಲಿಕೆಗಳು 202627ರ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ 2,933 ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಿವೆ. ವಾರ್ಷಿಕ 6,000 ಕೋಟಿ ತೆರಿಗೆ ಸಂಗ್ರಹಿಸುವ ಗುರಿಯ ಪೈಕಿ ಈಗಾಗಲೇ ಶೇ 48.8 ರಷ್ಟು ಸಾಧಿಸಲಾಗಿದೆ.

ಐದು ನಿಗಮಗಳ ಪೈಕಿ, ಬೆಂಗಳೂರು ಪೂರ್ವ ನಗರ ಪಾಲಿಕೆ (ಬಿಇಸಿಸಿ) ಅತಿ ಹೆಚ್ಚು 788 ಕೋಟಿ ಸಂಗ್ರಹಿಸಿದ್ದರೆ, ಬೆಂಗಳೂರು ಉತ್ತರ ನಗರ ಪಾಲಿಕೆಯು ಏಪ್ರಿಲ್ 1 ರಿಂದ ಜೂನ್ ಆರಂಭದವರೆಗೆ ಕನಿಷ್ಠ 456 ಕೋಟಿ ಸಂಗ್ರಹ ಮಾಡಿದೆ.

ಹಣಕಾಸು ವರ್ಷದ ಆರಂಭದಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಏರಿಕೆ ಕಾಣುವುದು ಸಾಮಾನ್ಯ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ. ಹಣಕಾಸು ವರ್ಷದ ಆರಂಭದಲ್ಲಿ ವಾರ್ಷಿಕ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ಆಸ್ತಿ ಮಾಲೀಕರಿಗೆ ಜಿಬಿಎ ಶೇ 5 ರಷ್ಟು ರಿಯಾಯಿತಿ ನೀಡುತ್ತದೆ.


ಉದಯವಾಹಿನಿ ಚಿತ್ರ

ಈ ವರ್ಷ, ರಿಯಾಯಿತಿ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿತ್ತು. ಸಂಗ್ರಹ ಗುರಿಗಳನ್ನು ನಿಗದಿಪಡಿಸಲಾಗಿದೆ ಮತ್ತು ತೆರಿಗೆ ವಸೂಲಾತಿಯನ್ನು ಸುಧಾರಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಕಂದಾಯ ಅಧಿಕಾರಿಗಳು ಹೇಳಿದ್ದಾರೆ.

ಗಮನಾರ್ಹ ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರಿಗೆ ನೋಟಿಸ್‌ಗಳನ್ನು ನೀಡಲಾಗುತ್ತಿದ್ದು, ಬಾಕಿ ಪಾವತಿಗಳನ್ನು ತೆರವುಗೊಳಿಸುವಂತೆ ಒತ್ತಾಯಿಸಲಾಗುತ್ತಿದೆ. ತೆರಿಗೆ ಪಾವತಿಗಳಲ್ಲಿ ಡೀಫಾಲ್ಟ್ ಆಗಿ ಮುಂದುವರಿಯುವ ವಾಣಿಜ್ಯ ಸಂಸ್ಥೆಗಳ ಮುಚ್ಚುವಿಕೆ ಸೇರಿದಂತೆ ಕಾನೂನು ಕ್ರಮಗಳನ್ನು ಎದುರಿಸುತ್ತಿವೆ.

ತೆರಿಗೆದಾರರು ಆರಂಭಿಕ ಪಾವತಿಗೆ ಪ್ರೋತ್ಸಾಹ ಧನ ಪಡೆದುಕೊಂಡಿದ್ದರಿಂದ ಸಂಗ್ರಹಣೆಯಲ್ಲಿ ಏರಿಕೆ ಕಂಡುಬಂದಿದೆ. ಇದರಿಂದಾಗಿ ಐದು ನಗರ ಪಾಲಿಕೆಗಳಲ್ಲಿ ಹಣಕಾಸು ವರ್ಷದ ಮೊದಲ ಎರಡು ತಿಂಗಳಲ್ಲಿಯೇ 2,933 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲು ಸಹಾಯ ಮಾಡಿದೆ.

## ಗ್ರಾನೈಟ್ ಕ್ವಾರಿಯಲ್ಲಿ ಸಂಗ್ರಹಿಸಿಟ್ಟಿದ್ದ ಸ್ಫೋಟಕಗಳ ವಶ, ಮಾಲೀಕ ಸೇರಿ ಐವರ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು

ಇಲ್ಲಿ ನಡೆದ ದಾಳಿಯ ಸಂದರ್ಭದಲ್ಲಿ ಅನುಮತಿಯಿಲ್ಲದೆ ಸಂಗ್ರಹಿಸಲಾಗಿತ್ತು ಎನ್ನಲಾದ ಸ್ಫೋಟಕಗಳನ್ನು ವಶಪಡಿಸಿಕೊಂಡ ನಂತರ ಗ್ರಾನೈಟ್ ಕ್ವಾರಿಯ ಮಾಲೀಕ ಸೇರಿದಂತೆ ಐದು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಬಿದರಹಳ್ಳಿ ಹೋಬಳಿಯ ಯರಪ್ಪನಹಳ್ಳಿ ಗ್ರಾಮದ ವೆಂಕಟೇಶ್ವರ ಗ್ರಾನೈಟ್ಸ್ ಮತ್ತು ಕ್ರಷರ್ ಮೇಲೆ ಜೂನ್ 5 ರಂದು ದಾಳಿ ನಡೆಸಲಾಗಿದ್ದು, ಸುಮಾರು 230 ಜಿಲೆಟಿನ್ ಸ್ಟಿಕ್‌ಗಳು ಮತ್ತು 50 ಡಿಟೋನೇಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಕ್ವಾರಿಯಲ್ಲಿ ಸ್ಫೋಟಕ ವಸ್ತುಗಳನ್ನು ಅಕ್ರಮವಾಗಿ ಸಂಗ್ರಹಿಸಿ, ಸಕ್ಷಮ ಅಧಿಕಾರಿಗಳಿಂದ ಅಗತ್ಯ ಅನುಮತಿಗಳನ್ನು ಪಡೆಯದೆ ಅವುಗಳನ್ನು ಕಾರ್ಯಾಚರಣೆಗೆ ಬಳಸಲಾಗುತ್ತಿದೆ ಎಂಬ ಬಗ್ಗೆ ರಾತ್ರಿ ವಿಶೇಷ ಗಸ್ತು ತಿರುಗುತ್ತಿದ್ದಾಗ ದೊರೆತ ಸುಳಿವಿನ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಕ್ವಾರಿಯಲ್ಲಿ ಸ್ಫೋಟಕ ವಸ್ತುಗಳನ್ನು ಅಕ್ರಮವಾಗಿ ಸಂಗ್ರಹಿಸಿ, ಕಲ್ಲು ಗಣಿಗಾರಿಕೆ ಚಟುವಟಿಕೆಗಳಿಗೆ ಸ್ಫೋಟಕಗಳನ್ನು ಬಳಸಲಾಗುತ್ತಿತ್ತು ಮತ್ತು ಮಾನ್ಯ ಪರವಾನಗಿಗಳಿಲ್ಲದೆ ಅಥವಾ ನಿಗದಿತ ಸುರಕ್ಷಾ ಮಾನದಂಡಗಳನ್ನು ಪಾಲಿಸದೆ ಸಂಗ್ರಹಿಸಲಾಗಿತ್ತು.


## ರಾಜ್ಯಸಭಾ ಟಿಕೆಟ್ ಏಕೆ ಸಿಗಲಿಲ್ಲ; ಸ್ವತಃ ಸ್ಪಷ್ಟನೆ ನೀಡಿದ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನ ಮಂತ್ರಿ, ಹೆಚ್ ಡಿ ದೇವೇಗೌಡರಿಗೆ ಎನ್‌ಡಿಎಯಿಂದ ರಾಜ್ಯಸಭಾ ಟಿಕೆಟ್ ಕೈತಪ್ಪಿದ್ದು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಇಂದು ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿರುವ ಹೆಚ್‌ಡಿ ದೇವೇಗೌಡರು, 'ನನಗೆ ರಾಜ್ಯಸಭಾ ಸದಸ್ಯನಾಗಬೇಕು ಎಂಬ ಯಾವುದೇ ವ್ಯಾಮೋಹವಿಲ್ಲ. ನನ್ನ ರಾಜಕೀಯ ಜೀವನದ ಎಪ್ಪತ್ತು ವರ್ಷಗಳ ಸುದೀರ್ಘ ಪಯಣದಲ್ಲಿ ಅಧಿಕಾರಕ್ಕಿಂತ ಜನಸೇವೆಯೇ ಮುಖ್ಯವಾಗಿತ್ತು' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಇದೇ ಸಂದರ್ಭದಲ್ಲಿ ವಿರೋಧಿಗಳಿಗೆ ಖಡಕ್ ಸಂದೇಶ ರವಾನಿಸಿದ ದೇವೇಗೌಡರು ನಾನು ಸುಮ್ಮನೆ ಕೂರಲ್ಲ, ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ರಾಜ್ಯ ಮತ್ತು ದೇಶದ ವಿಚಾರವನ್ನು ಯಾರ ಹಂಗಿಲ್ಲದೆ ಮಾತಾಡ್ತೇನೆ ಎಂದು ಹೇಳಿದರು.

ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ಸ್ಮರಿಸಿದ ದೇವೇಗೌಡರು, 'ನಾನು ರಾಜಕಾರಣಕ್ಕೆ ಬಂದು ಎಷ್ಟು ವರ್ಷವಾಯಿತು ಎಂದು ಒಮ್ಮೆ ಯೋಚಿಸಿ. 1954-55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಅಂದು ಕೇವಲ ಗುತ್ತಿಗೆ ಕೆಲಸ ಮಾಡುತ್ತಿದ್ದ ನಾನು, ಅದರ ಜೊತೆಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ರಾಜಕೀಯಕ್ಕೆ ಬಂದವನು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಜನರ ಮಧ್ಯೆಯೇ ಇದ್ದೇನೆ. ಹಾಗಾಗಿ, ಇಂದು ಒಂದು ಸ್ಥಾನಕ್ಕಾಗಿ ನಾನು ಹಾತೊರೆಯುವ ಅಗತ್ಯವಿಲ್ಲ ಎಂದರು. ರಾಜ್ಯಸಭಾ ಟಿಕೆಟ್ ಕೈತಪ್ಪಿದ್ದಕ್ಕೆ ದೇವೇಗೌಡರಿಗೆ ಅಪಮಾನ ಮಾಡಲಾಗಿದೆ ಎಂಬ ಅವರ ಹಿತೈಷಿಗಳ ಹಾಗೂ ಬೆಂಬಲಿಗರ ಮಾತಿಗೆ ಪ್ರತಿಕ್ರಿಯಿಸಿದ ಅವರು, ನನ್ನ ಸ್ನೇಹಿತರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ಬೇಡಿಕೆ ಇಟ್ಟಿರಲಿಲ್ಲ ಎಂದು ಸ್ಪಷ್ಟಪಡಿಸಿದರು.


ಉದಯವಾಹಿನಿ ಚಿತ್ರ

"ನನಗೆ ಸ್ಪರ್ಧಿಸುವ ಆಸಕ್ತಿ ಇದ್ದಿದ್ದರೆ, ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ದೆಹಲಿಗೆ ಹೋದಾಗ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಈ ವಿಷಯವನ್ನು ಚರ್ಚಿಸುತ್ತಿದ್ದೆ. ಆದರೆ ನಾನು ಯಾರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಲಿಲ್ಲ. ಕಾರ್ಯಕ್ರಮ ಮುಗಿದ ಬಳಿಕ ಬೆಂಗಳೂರಿಗೆ ಹಿಂದಿರುಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

### ಪಕ್ಷದೊಳಗೆ ಚರ್ಚೆಯಾದ ವಿಚಾರ.

ಕಾಂಗ್ರೆಸ್ ಟೀಕೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ಈ ವಿಷಯದಲ್ಲಿ ನನಗೆ ಆಸಕ್ತಿ ಇಲ್ಲ. ಇದು ಪಕ್ಷದೊಳಗೆ ಚರ್ಚೆಯಾದ ವಿಚಾರ. ನಮ್ಮ ಬಳಿ ವಿಧಾನಸಭೆಯಲ್ಲಿ 18 ಸದಸ್ಯರಿದ್ದಾರೆ. ಈ ಸಂಖ್ಯೆಯಿಂದ ನಾವು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ. ಇದಕ್ಕಿಂತ ಹೆಚ್ಚು ಪ್ರತಿಕ್ರಿಯೆ ನೀಡಲು ನಾನು ಬಯಸುವುದಿಲ್ಲ ಎಂದು ಹೇಳಿದರು.

### 10 ವರ್ಷಗಳಲ್ಲಿ ನಮ್ಮ ಸಂಬಂಧ ಗಟ್ಟಿ

ಕಳೆದ ಹತ್ತು ವರ್ಷಗಳಲ್ಲಿ ಮೋದಿ ಅವರೊಂದಿಗಿನ ನನ್ನ ಸಂಬಂಧವು ಕೇವಲ ಒಂದು ರಾಜ್ಯಸಭೆ ಸ್ಥಾನಕ್ಕಾಗಿ ಬೆಳೆದದ್ದಲ್ಲ. ಅದು ನಮ್ಮಿಬ್ಬರ ನಡುವಿನ ವೈಯಕ್ತಿಕ ಬಾಂಧವ್ಯವಾಗಿದೆ. ನಾನು ರಾಜ್ಯಸಭೆಯ ಸದಸ್ಯನಾಗಿರದಿದ್ದರೂ ಆ ಸಂಬಂಧ ಮುಂದುವರಿಯುತ್ತದೆ ಎಂದು ದೇವೇಗೌಡ ಹೇಳಿದರು. ಈ ದೇಶದಲ್ಲಿ ಯಾವುದೇ ಸಂದರ್ಭ ಬಂದರೂ, ಮೋದಿ ಅಥವಾ ಅವರ ಆಡಳಿತದ ಬಗ್ಗೆ ನನ್ನ ಭಾವನೆಗಳನ್ನು ನಾನು ನಿರ್ಭಯವಾಗಿ ವ್ಯಕ್ತಪಡಿಸಿದ್ದೇನೆ. ಕುಮಾರಸ್ವಾಮಿ ಅವರ ಸರ್ಕಾರ ಇಲ್ಲಿ ಪತನಗೊಂಡಾಗ ಬಿಜೆಪಿಯೊಂದಿಗೆ ಕೈಜೋಡಿಸಬೇಕು ಎಂದು ನಾನು ಹೇಳಿದ್ದೆ. ಇದು ಯಾರಿಗೂ ಗೊತ್ತಿಲ್ಲದ ವಿಷಯವಲ್ಲ ಎಂದರು. ನಾನು ಮೋದಿ ಅವರೊಂದಿಗೆ ನಿಂತಿದ್ದೇನೆ.

# ಶೋಷಿತರ ಏಕತಾದಿನವಾಗಿ ಪ್ರೊ.ಕೃಷ್ಣಪ್ಪ ಜನ್ಮದಿನಾಚರಣೆ

• ಉದಯವಾಹಿನಿ, ಗುಂಡ್ಲುಪೇಟೆ

ಕೋಲಾರ,-ಸಮಾನತೆ ಸಮಾಜ ಹಾಗೂ ಪ್ರಬುದ್ಧ ದೇಶ ನಿರ್ಮಾಣ ಮಾಡುವ ಕನಸನ್ನು ಪ್ರೊ.ಬಿ. ಕೃಷ್ಣಪ್ಪ ಹೊಂದಿದ್ದರು ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ- ಕರ್ನಾಟಕ ರಾಜ್ಯಾಧ್ಯಕ್ಷ ಡಾ. ಆರ್. ಮೋಹನ್‌ರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ- ಕರ್ನಾಟಕ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಮಾರ್ಗ ವತಿಯಿಂದ ಪ್ರೊ. ಬಿ. ಕೃಷ್ಣಪ್ಪ ಜನ್ಮದಿನದ ಕಾರ್ಯಕ್ರಮದಲ್ಲಿ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಸಮಾನತೆ ಸಮಾಜ ಹಾಗೂ ಪ್ರಬುದ್ಧ ದೇಶ ನಿರ್ಮಾಣ ಮಾಡುವ


ಉದಯವಾಹಿನಿ ಚಿತ್ರ

ಕನಸು ಕಂಡ ಅಂಬೇಡ್ಕರ್ ರವರ ಆದರ್ಶಗಳ ಹಾದಿಯಲ್ಲಿ ನಡೆದವರು ಪ್ರೊ. ಬಿ.ಕೃಷ್ಣಪ್ಪ ಅವರ ಜನ್ಮದಿನವನ್ನು ಶೋಷಿತರ ಬಹುಜನರ ಏಕತಾ ದಿನವಾಗಿ ಆಚರಿಸಲಾಗುತ್ತಿದೆ ಎಂದರು. ದಲಿತರ,ಶೋಷಿತರ ಏಳ್ಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಕೃಷ್ಣಪ್ಪ ಎಂದ ಅವರು, ದಲಿತರು ರಾಜಕೀಯವಾಗಿಯೂ ಪ್ರಬಲರಾದಾಗ ಮಾತ್ರ ತಮ್ಮ ಸಮುದಾಯದ ಅಭಿವೃದ್ಧಿಯನ್ನು ಕಾಣಬಹುದು ಎಂಬ ಸತ್ಯ ಅರಿತಿದ್ದ ಅವರು, ನಮಗೆಲ್ಲಾ ಆದರ್ಶವಾಗಿದ್ದರು ಎಂದರು.

ಸ್ವಾತಂತ್ರ ಭಾರತದಲ್ಲಿ ದಲಿತ. ಹಿಂದುಳಿದ, ಹಾಗೂ ಶೋಷಣೆಗೆ ಒಳಗಾದ ಸಮುದಾಯಗಳು ಇಂದಿಗೂ ಸಹ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಕಾಣದಿರುವುದು ದುರಂತ.

ಸ್ವತಂತ್ರದ ನಂತರ ಅಂಬೇಡ್ಕರ್ ಸ್ಥಾಪಿಸತ ಸಂವಿಧಾನದ ಅಡಿಯಲ್ಲಿ ದೇಶವನ್ನು ಆಳಿದ ರಾಜಕೀಯ ಪಕ್ಷಗಳು ದಲಿತ. ಹಿಂದುಳಿದ, ಹಾಗೂ ಶೋಷಣೆಗೆ ಒಳಗಾದ ಸಮುದಾಯಗಳ ಏಳಿಗೆಗೆ ಶ್ರಮಿಸಿದವರಲ್ಲ ಇನ್ನಾದರೂ ನಾವು ಸಂಘಟಿತರಾಗಿ ಆಳುವವರನ್ನು ಪ್ರಶ್ನಿಸುವ ಜೊತೆಗೆ ನಾವೇ ಆಳುವವರಗಬೇಕು ಎಂದು ತಿಳಿಸಿದರು.

> **ಸ್ವಾತಂತ್ರ್ಯ ಬಂದು ಇಷ್ಟೊಂದು ವರ್ಷಗಳು ಉರುಳಿದರೂ ಇಂದಿಗೂ ಶೋಷಣೆ ಇದೆ ಎಂದರೆ ಅದು ತಲೆತಗ್ಗಿಸುವಂತದ್ದು ಎಂದ ಅವರು, ಪ್ರೊ.ಬಿ.ಕೃಷ್ಣಪ್ಪ ಅವರ ಆದರ್ಶವನ್ನು ಪಾಲಿಸುವ ಮೂಲಕ ನಾವೆಲ್ಲಾ ದೀನ ದಲಿತರ ಏಳ್ಗೆಗೆ ಶ್ರಮಿಸುವ ಸಂಕಲ್ಪ ತೊಡೋಣ ಎಂದರು.**
> ಡಾ. ಆರ್.ಮೋಹನ್‌ರಾಜ್ ಕರ್ನಾಟಕ ರಾಜ್ಯಾಧ್ಯಕ್ಷ

# ಎಸ್.ಐ.ಆರ್ ಬಗ್ಗೆ ಜಾಗೃತಿ ಮೂಡಿಸಲು ಟಿ.ಕೆ ರಮೇಶ್ ಕರೆ

## ಎಸ್.ಐ.ಆರ್‌ಗೆ ಪೂರಕವಾಗಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮತದಾರರ ಸಹಾಯ ಕೇಂದ್ರ

• ಉದಯವಾಹಿನಿ,ಕೋಲಾರ

ಅರ್ಹ ನಾಗರಿಕರೆಲ್ಲರಿಗೂ ಮತದಾನದ ಹಕ್ಕು ಸಿಗುವಂತೆ ಮಾಡಲು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಬಗ್ಗೆ ವ್ಯಾಪಕವಾಗಿ ಪ್ರಾಚಾರ ಕೈಗೊಳ್ಳಲು ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಾದ ಟಿ.ಕೆ ರಮೇಶ್ ತಿಳಿಸಿದರು.

ಜಿಲ್ಲಾ ಪಂಚಾಯತಿ ಸಭಾಗಂಣದಲ್ಲಿ ಹಮ್ಮಿಕೊಂಡಿದ್ದ ಎಸ್.ಐ.ಆರ್ ಸಂಬಂಧ ಸ್ವೀಪ್ ಚಟುವಟಿಕೆಗಳ ಸಭೆಯಲ್ಲಿ ಅವರು ಮಾತನಾಡಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆಂದೋಲನವನ್ನು ಯಶಸ್ವಿಗೊಳಿಸಲು, ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ಸ್ವೀಪ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿದಂತೆ ಕ್ರಮವಹಿಸುವುದು. ಯಾವುದೇ ಅನರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸದಂತೆ ಎಚ್ಚರ ವಹಿಸುವುದು ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಪ್ರಮುಖ ಉದ್ದೇಶವಾಗಿದೆ. ಅದೇ ರೀತಿ ಹಿಂದಿನ ಸಮಗ್ರ ಪರಿಷ್ಕರಣೆಯ ಮತದಾರರ ಪಟ್ಟಿಗೆ ಪ್ರಸ್ತುತ ಮತದಾರರ ಪಟ್ಟಿಯಲ್ಲಿರುವ ಮತದಾರರ ಅರ್ಹತೆಯನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಹೊಸ ಮತದಾರರ ಸೇರ್ಪಡೆ, ಮರಣ ಹೊಂದಿದ ವ್ಯಕ್ತಿಗಳ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವುದು. ಖಾಯಂ ಆಗಿ ವಾಸಸ್ಥಳ ಬದಲಾಯಿಸಿದವರ ಅಥವಾ ಒಂದಕ್ಕಿಂತ ಹೆಚ್ಚು ಕಡೆ ಹೆಸರು ನಮೂದಾಗಿರುವ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲು ಕ್ರಮವಹಿಸಲಾಗುತ್ತದೆ. ಈ ವೇಳೆ ಯಾವುದೇ ಗೊಂದಲಕ್ಕೆ ಅವಕಾಶ ನೀಡಬಾರದು ಎಂದು ಕಿವಿಮಾತು ಹೇಳಿದರು. ಸಭೆಯಲ್ಲಿ ಮಾತನಾಡಿದ ರಾಜ್ಯ ಮಟ್ಟದ ಮಾಸ್ಟರ್ ತರಬೇತುದಾರರಾದ ನಂಜುಂಡೆಗೌಡ, ಶಾಲಾ ಕಾಲೇಜುಗಳಲ್ಲಿ



ಉದಯವಾಹಿನಿ ಚಿತ್ರ

17 ವರ್ಷ ತುಂಬಿದ ಯುವಕರು ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಮುಂಗಡವಾಗಿಯೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅವರಿಗೆ 18 ವರ್ಷ ತುಂಬಿದ ತಕ್ಷಣ ಸ್ವಯಂಚಾಲಿತವಾಗಿ ಮತದಾರರ ಗುರುತಿನ ಚೀಟಿ ದೊರೆಯುತ್ತದೆ. ಆಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಮನೆಯಲ್ಲೇ ಕುಳಿತು/ ತಾವು ಇರುವ ಸ್ಥಳದಲ್ಲಿ ಹೊಸ ನೋಂದಣಿ ಅಥವಾ ತಿದ್ದುಪಡಿ ಮಾಡಿಕೊಳ್ಳಬಹುದು, ಈ ಬಗ್ಗೆ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಶಾಲಾ-ಕಾಲೇಜುಗಳಲ್ಲಿ 'ಚುನಾವಣಾ ಸಾಕ್ಷರತಾ ಕ್ಲಬ್‌ಗಳು ಯುವ ಜನರಲ್ಲಿ ಜಾಗೃತಿ ಮೂಡಿಸಲು ಪ್ರೌಢಶಾಲೆಗಳು, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ 'ಚುನಾವಣಾ ಸಾಕ್ಷರತಾ ಕ್ಲಬ್‌ಗಳನ್ನು ಸ್ಥಾಪಿಸಲು ಎಲ್ಲಾ ಮುಖ್ಯೋಪಾಧ್ಯರು ಹಾಗೂ ಪ್ರಾಂಶುಪಾಲುರು ಕ್ರಮ ವಹಿಸಬೇಕು. ಇವುಗಳ ಮೂಲಕ ವಿದ್ಯಾರ್ಥಿಗಳಿಗೆ ಮತದಾನದ ಮಹತ್ವ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಮತದಾರರ ನೋಂದಣಿ ಪ್ರಕ್ರಿಯೆಯ ಅರಿವು ಮೂಡಿಸಬೇಕು.

ಆಟಗಳು, ರಸಪ್ರಶ್ನೆ ಹಾಗೂ ಚರ್ಚಾಸ್ಪರ್ಧೆಗಳ, ಪೋಸ್ಟರ್ ರಚನೆ, ನಾಟಕ, ಕಿರುಚಿತ್ರಗಳನ್ನು ತಯಾರಿಸವು ಸ್ಪರ್ಧೆಗಳ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತಿಳಿಸಿದರು. ವಿಶೇಷ ಹಾಗೂ ಕ್ರಿಯಾತ್ಮಕ ಸ್ವೀಪ್ ಚಟುವಟಿಕೆ ಕೈಗೊಳ್ಳುವ ಶಾಲೆ, ಕಾಲೇಜುಗಳಿಗೆ ಪ್ರಶಸ್ತಿ ವಿತರಿಸಲಾಗುವುದು ಎಂದರು.

### ಕರಪತ್ರಗಳ ವಿತರಣೆ

**ಸರ್ಕಾರಿ, ಸರ್ಕಾರೇತರ, ಸಹಕಾರಿ ಸಂಸ್ಥೆಗಳಲ್ಲಿ ಮತದಾರರ ಜಾಗೃತಿ ವೇದಿಕೆಗಳು ಸ್ಥಾಪಿಸಿ, ಯಾವೊಬ್ಬ ಮತದಾರರು ಮತದಾನದಿಂದ ಹೊರಗುಳಿಯದಂತೆ ಅರಿವು ಮತ್ತು ಜಾಗೃತಿಯನ್ನು ಮೂಡಿಸುತ್ತಾ ದಾಖಲೀಕರಣ ಮಾಡಬೇಕು. ಧ್ವನಿವರ್ಧಕಗಳ ಮೂಲಕ ಡಂಗೂರ ಸಾರುವುದು ಮತ್ತು ಕರಪತ್ರಗಳ ವಿತರಣೆಯ ಮೂಲಕ. ಸಾರ್ವಜನಿಕರು ಹೆಚ್ಚು ಸೇರುವ ಡೈರಿ, ಪಡಿತರ ವಿತರಣಾ ಕೇಂದ್ರಗಳು ಬಳಿ ಪೋಸ್ಟರ್ ಹಾಕುವುದು, ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಗ್ರಾಮೀನ ಪ್ರದೇಶದಲ್ಲಿ ಅರಿವು ಮೂಡಿಸಲು ಕ್ರಮ ವಹಿಸಬೇಕಾಗಿದೆ.**

### ಗೊಂದಲಕ್ಕೆ ಅವಕಾಶ ಬೇಡ

> **ಈ ಕೇಂದ್ರಗಳಲ್ಲಿ ಮತದಾರರಿಗೆ ಇರುವ ಗೊಂದಲಗಳನ್ನು ನಿವಾರಿಸುವ ಮತ್ತು ಅಗತ್ಯ ಮಾಹಿತಿಗಳಾದ ಮತದಾರರ ಸೇರ್ಪಡೆ, ವರ್ಗಾವಣೆ, ತಿದ್ದುಪಡಿ ಮಾಹಿತಿಗಳನ್ನ ಒದಗಿಬೇಕು. ಈ ಬಗ್ಗೆ ಮುಂದಿನ ದಿನಗಳಲ್ಲಿ ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗುವುದು. ಜಾಗೃತಿ ಕಾರ್ಯಕ್ರಮಗಳು ತಳಮಟ್ಟದ ಮತದಾರರಿಗೆ ತಲುಪುವಂತೆ ಕ್ರಮವಹಿಸಲು ಅಧಿಕಾರಿಗಳಿಗೆ ತಿಳಿಸಿದರು ಎಂದರು.**

# ಬಾಡಿಗೆ ಕಟ್ಟಡದಿಂದ ಅಂಗನವಾಡಿ ಮುಕ್ತಗೊಳಿಸಲು ಶಾಸಕರ ಕ್ರಮ

• ಉದಯವಾಹಿನಿ, ರಾಮನಗರ

ನಗರಸಭೆ ವ್ಯಾಪ್ತಿಯಲ್ಲಿರುವ ಅಂಗನವಾಡಿಗಳನ್ನು ಬಾಡಿಗೆ ಕಟ್ಟಡದಿಂದ ಮುಕ್ತಗೊಳಿಸಲು ಕ್ರಮ ವಹಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮತ್ತು ನಗರಸಭೆ ಅಧಿಕಾರಿಗಳಿಗೆ ಶಾಸಕ ಹೆಚ್.ಎ.ಇಕ್ಬಾಲ್ ಹುಸೇನ್ ಖಡಕ್ ಸೂಚನೆ ನೀಡಿದರು. ತಾಲ್ಲೂಕು ಪಂಚಾಯಿತಿಯಲ್ಲಿ ಬುಧವಾರ ಅಂಗನವಾಡಿ ಸುಧಾರಣೆಗಳ ಸಭೆ ನಡೆಸಿ ಅವರು ಮಾತನಾಡಿದರು. ನಗರ ಪ್ರದೇಶ ವ್ಯಾಪ್ತಿಯಲ್ಲಿ 81 ಅಂಗನವಾಡಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಸುಮಾರು 3 ಸಾವಿರ ಮಕ್ಕಳು ಅಂಗನವಾಡಿಗಳಲಿದ್ದಾರೆ. ಆದರೆ 81 ಅಂಗನವಾಡಿಗಳಲ್ಲಿ 50 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿದ್ದು 10 ಕಟ್ಟಡ ಹೊಸದಾಗಿ ನಿರ್ಮಾಣ ಹಂತದಲ್ಲಿವೆ ಎಂದರು. ಅಂಗನವಾಡಿಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವ ವ್ಯವಸ್ಥೆ ಆಗುವವರೆಗೆ ಸರ್ಕಾರಿ ಶಾಲೆಗಳ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸಲು ಪರ್ಯಾಯವಾಗಿ ಯೋಚಿಸಬೇಕಿದೆ. ಕೆಲವೆಡೆ ಸ್ಥಳದ ಸಮಸ್ಯೆಯಿದೆ. ಖಾಲಿ ಇರುವ ಸರ್ಕಾರಿ ಕಟ್ಟಡಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಿ ಸುಧಾರಣೆ ಮಾಡಲಾಗುವುದು ಎಂದು ತಿಳಿಸಿದರು. ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳ ಬದಲಾಗಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವ ಹಿಸುವುದು ಮಕ್ಕಳ


ಉದಯವಾಹಿನಿ ಚಿತ್ರ

ಸುರಕ್ಷತೆ ಮತ್ತು ಅವರ ಸಮಗ್ರ ವಿಕಾಸದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲು ಹಲವು ಕ್ರಮಗಳನ್ನು ಕೈಗೊಂಡಿದ್ದು ನನ್ನ ಶಾಸಕರ ಅನುದಾನದಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ 10 ಹೊಸ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಎಂದು ಹೇಳಿದರು. ಪೂರ್ವ ಪ್ರಾಥಮಿಕ ಶಿಕ್ಷಣ ಮಕ್ಕಳು ಆಟವಾಡಲು ಮತ್ತು ಕಲಿಯಲು ಸಾಕಷ್ಟು ಗಾಳಿ, ಬೆಳಕು ಇರುವ ದೊಡ್ಡ ಕೊಠಡಿಗಳ ಅಗತ್ಯವಿರುತ್ತದೆ. ಚಿಕ್ಕ ಮಕ್ಕಳಿಗೆ ಬಳಸಲು ಸುಲಭವಾಗುವಂತಹ ಬೇಬಿ ಫ್ರೆಂಡ್ಲಿ ಶೌಚಾಲಯಗಳು ಮತ್ತು ನೀರಿನ ಸೌಲಭ್ಯ ಬೇಕಾಗುತ್ತದೆ. ಆಗಾಗಿ ನಗರಸಭೆ ಇಂಜಿನಿಯರ್‌ಗಳನ್ನು ನೋಡಲ್ ಆಫೀಸರ್‌ಗಳನ್ನಾಗಿ ನೇಮಿಸಿ, ಖಾಲಿ ಉಳಿದಿರುವ ಸರ್ಕಾರಿ ಶಾಲೆ ಕಟ್ಟಡ, ಸರ್ಕಾರಿ ಕಚೇರಿ ಕಟ್ಟಡಗಳನ್ನು ಗುರುತಿಸಿ ನನಗೆ ತ್ವರಿತವಾಗಿ ವರದಿ ಕೊಡುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳು ನಿರ್ಮಾಣವಾದರೆ ಮಕ್ಕಳ ಸುರಕ್ಷತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು ಸುಲಭ. ಪ್ರತಿ ತಿಂಗಳು ಸರ್ಕಾರ ಅಥವಾ ಇಲಾಖೆ ಪಾವತಿಸಬೇಕಾದ ಬಾಡಿಗೆ ಹಣ ಉಳಿತಾಯವಾಗುತ್ತದೆ.

## ಚಿಕ್ಕತೇಕಹಳ್ಳಿಯಲ್ಲಿ ಕೋಲಾಟದ ಸಂಭ್ರಮ; ಜನಮನ ಗೆದ್ದ ಜನಪದ ಕಲಾ ವೈಭವ

• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಚಿಕ್ಕತೇಕಹಳ್ಳಿ ಗ್ರಾಮದಲ್ಲಿ ಶ್ರೀ ಆಂಜನೇಯಸ್ವಾಮಿ ಕೋಲಾಟ ತಂಡದ ವತಿಯಿಂದ ಆಯೋಜಿಸಿದ್ದ ಕೋಲಾಟ ಪ್ರದರ್ಶನ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಯಿತು. ಸುಮಾರು ಎರಡು ತಿಂಗಳ ಕಾಲ ತರಬೇತಿ ಪಡೆದ ಕಲಾವಿದರು ಮೊದಲ ಬಾರಿಗೆ ಸಾರ್ವಜನಿಕವಾಗಿ ನೀಡಿದ ಪ್ರದರ್ಶನ ಜನರನ್ನು ರಂಜಿಸಿತು. ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು, ಗ್ರಾಮಸ್ಥರೇ ಕೋಲಾಟ ಕಲಿತು ವಿವಿಧ ಕೋಪುಗಳಲ್ಲಿ ಪ್ರದರ್ಶಿಸಿದರು. ವೀಕ್ಷಿಸಲು ಸುತ್ತಮುತ್ತಲಿನ ಗ್ರಾಮಗಳಿಂದಲೂ ಕಲಾಭಿಮಾನಿಗಳು ಆಗಮಿಸಿದ್ದರು.ಇಂದಿನ ದಿನಗಳಲ್ಲಿ ಯುವಜನತೆ ಮೊಬೈಲ್, ಟಿವಿ ಹಾಗೂ ಸಾಮಾಜಿಕ ಜಾಲತಾಣಗಳತ್ತ ಹೆಚ್ಚು ಆಕರ್ಷಿತರಾಗುತ್ತಿರುವ ಸಂದರ್ಭದಲ್ಲಿ, ಕೋಲಾಟದಂತಹ ಸಾಂಪ್ರದಾಯಿಕ ಕಲೆಗಳು ಮತ್ತೆ ಜನರ ಗಮನ ಸೆಳೆಯುತ್ತಿರುವುದು ವಿಶೇಷವಾಗಿದೆ.

## ಚೀಮಲಗುಟ್ಟ ಗ್ರಾಮದ ಭೂಮಿ ವಿಚಾರದಲ್ಲಿ ಸುಳ್ಳು ಆರೋಪ: ಕೋಡಿಗಲ್ ರಮೇಶ್ ಆಕ್ರೋಶ

• ಉದಯವಾಹಿನಿ, ಚಿಂತಾಮಣಿ

ಚೀಮಲಗುಟ್ಟ ಗ್ರಾಮದ ಜಮೀನು ವಿಚಾರಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಮಾಡಲಾದ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಸತ್ಯಕ್ಕೆ ದೂರವಾದವು ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷ ಕೋಡಿಗಲ್ ರಮೇಶ್ ತಿಳಿಸಿದ್ದಾರೆ.

ಚಿಂತಾಮಣಿ ತಾಲ್ಲೂಕಿನ ಕೊಡಿಗಲ್ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಚೆನ್ನರಾಯಪ್ಪ ಎಂಬುವವರ ಜಮೀನಿನ ವಿಚಾರವಾಗಿ ನಡೆಸಲಾದ ಪತ್ರಿಕಾಗೋಷ್ಠಿಯಲ್ಲಿ ನೂರಕ್ಕೆ ನೂರರಷ್ಟು ತಪ್ಪು ಮತ್ತು ಸುಳ್ಳು ಮಾಹಿತಿ ನೀಡಲಾಗಿದೆ. ಸಾರ್ವಜನಿಕರಿಗೆ ವಾಸ್ತವಾಂಶ ತಿಳಿಯಬೇಕೆಂಬ ಉದ್ದೇಶದಿಂದ ನಾವು ಈ ಸ್ಪಷ್ಟನೆ ನೀಡುತ್ತಿದ್ದೇವೆ ಎಂದರು. ಚೆನ್ನರಾಯಪ್ಪನವರ ಮಗ ಪೊಲೀಸ್ ಅಧಿಕಾರಿಯಾಗಿದ್ದು,ಅವರು ಯಾರನ್ನೂ ಬೈದಿಲ್ಲ, ಹೊಡೆದಿಲ್ಲ. ಆದರೂ ಕೆಲವರು ಗುಂಪು ಕಟ್ಟಿಕೊಂಡು ಅವರ ಮೇಲೆ ಉದ್ದೇಶಪೂರ್ವಕ ವಾಗಿ ಪಿತೂರಿ ನಡೆಸಿ ಎಫ್‌ಐಆರ್ ದಾಖಲಿಸಿದ್ದಾರೆ. ಮದ ನಕ್ಷೆ ಮತ್ತು ಮಂಜೂರಾತಿ ಅರ್ಜಿಗಳ ಪ್ರಕಾರ, ಸುಮಾರು 23 ಜನರಿಗೆ ಅಲ್ಲಿ ಜಮೀನು ಗ್ರಾಂಟ್ ಆಗಿದೆ. ಅದರಲ್ಲಿ ಚೆನ್ನರಾಯಪ್ಪನವರಿಗೆ 3 ಎಕರೆ 20 ಕುಂಟೆ ಜಮೀನು ಮಂಜೂರಾಗಿದೆಎಂದು ರಮೇಶ್ ದಾಖಲೆಗಳನ್ನು ಪ್ರದರ್ಶಿಸಿದರು. ಗ್ರಾಮದ ಕೆಲವರು ಎಂಬುವವರು 53 ಅರ್ಜಿಯ ಜಮೀನನ್ನು ಇವರು ಉಳುಮೆ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಆದರೆ ಗೋಪಾಲಪ್ಪ ಹಾಗೂ ಇತರೆ ಆರು ಜನರು ಫಾರಂ 53ರ ಅಡಿಯಲ್ಲಿ ತಲಾ 1 ಎಕರೆ 20 ಕುಂಟೆ ಜಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ಕಂದಾಯ ಅಧಿಕಾರಿಗಳು ವಿಎ ಮತ್ತು ಗ್ರಾಮ ಲೆಕ್ಕಿಗರು ಸ್ಥಳ ತನಿಖೆ ನಡೆಸಿ, ಅಲ್ಲಿ ವ್ಯವಸಾಯಕ್ಕೆ ಯಾವುದೇ ಜಮೀನು ಲಭ್ಯವಿಲ್ಲ, ಅದು ಕೇವಲ ದನಕರುಗಳ ಮೇವಿಗಷ್ಟೇ ಸೀಮಿತವಾಗಿದೆ ಎಂದು ಸರ್ಕಾರಕ್ಕೆ ವರದಿ ನೀಡಿ, ಆ ಅರ್ಜಿಗಳನ್ನು ವಜಾಗೊಳಿಸಿದ್ದಾರೆ. ಹೀಗಿದ್ದರೂ ಜಮೀನು ಕಸಿದುಕೊಳ್ಳಲಾಗಿದೆ ಎನ್ನುವ ಆರೋಪ ಮಾಡುವುದು ಸರಿಯಲ್ಲ ಎಂದು ರಮೇಶ್ ಸ್ಪಷ್ಟಪಡಿಸಿದರು. ಬಿಲ್ಲಾಂಡ್ಲ ಹಳ್ಳಿ, ಕಮ್ಮಲಹಳ್ಳಿ, ಇರಗಂಪಲ್ಲಿ ಮುಂತಾದ ಗ್ರಾಮಗಳಲ್ಲಿ ಅಹಿತಕರ ಘಟನೆಗಳು ನಡೆದಿವೆ. ಕರ್ನಾಟಕ ದಲಿತ ಸಂಘರ್ಷ ಸಮಿತಿಯಲ್ಲಿ ಎಲ್ಲಾ ಜಾತಿಯ ಬಡವರೂ ನಮ್ಮ ಜೊತೆಯಲ್ಲಿದ್ದಾರೆ. ಎಸ್‌ಸಿ,ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ಬಡವರ ಮೇಲೆ ದೌರ್ಜನ್ಯ ನಡೆದಾಗ ನಾವು ನ್ಯಾಯದ ಪರವಾಗಿ ಧ್ವನಿ ಎತ್ತಿದ್ದೇವೆ ಎಂದು ಹೇಳಿದ ಅವರು ತಾವು ಸದಾ ನ್ಯಾಯದ ಪರವಾಗಿ ಮತ್ತು ಬಡವರ ಪರವಾಗಿ ಧ್ವನಿ ಎತ್ತುತ್ತಿರುವುದರಿಂದಲೇ ತಮ್ಮನ್ನು ಗುರಿಯಾಗಿಸಿಕೊಂಡು ಕೆಲವು ಶಕ್ತಿಗಳು ಸಂಚು ರೂಪಿಸುತ್ತಿವೆ ಎಂದು ರಮೇಶ್ ಗಂಭೀರ ಆರೋಪ ಮಾಡಿದರು. ನಮ್ಮ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸುವುದು, ನನ್ನನ್ನು ಗಡಿಪಾರು ಮಾಡಲು ಯತ್ನಿಸುವುದು ಮತ್ತು ನನ್ನ ಪ್ರಾಣಕ್ಕೇ ಹಾನಿ ಮಾಡಲು ಹಲವು ಬಾರಿ ಪ್ರಯತ್ನಗಳು ನಡೆದಿವೆ.

# ಎಸ್ಸಿ ಎಸ್ಟಿ ಸಭೆಗೆ ಅಧಿಕಾರಿಗಳ ಗೈರು : ಸಭೆ ಬಹಿಷ್ಕರಿಸಿ ಹೊರನಡೆದ ದಲಿತ ಮುಖಂಡರು

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕು ಮಟ್ಟದ ಪರಿಶಿಷ್ಟ ಜಾತಿ - ಪಂಗಡದ ಕುಂದುಕೊರತೆ ನಿವಾರಣೆ ಸಭೆಗೆ ಬಹುತೇಕ ಅಧಿಕಾರಿಗಳು ಹಾಜರಾಗಿಲ್ಲ ಎಂದು ಸಿಟ್ಟಿಗೆದ್ದ ದಲಿತ ಮುಖಂಡರು ಸಭೆಯನ್ನ ಬಹಿಷ್ಕರಿಸಿ ಹೊರನಡೆದ ಘಟನೆ ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆಯಿತು.

ತಾಲ್ಲೂಕು ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಬೇಕಿದ್ದ ಸಭೆಗೆ ದಲಿತ ಸಮುದಾಯದ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು ಆದರೆ ಸಭೆಗೆ ಕೆಲವೇ ಕೆಲವು ಅಧಿಕಾರಿಗಳು ಹಾಜರಿದ್ದುದು ಸಮುದಾಯದ ಪ್ರಮುಖರ ಆಕ್ರೋಶಕ್ಕೆ ಕಾರಣವಾಯಿತು. ಮೂರು ತಿಂಗಳಿಗೊಮ್ಮೆ ನಡೆಯಬೇಕಿದ್ದ ಸಭೆಯನ್ನ ಆರು ತಿಂಗಳಾದರೂ ಆಯೋಜನೆ ಮಾಡದೆ ದಲಿತ ವಿರೋಧಿ ನೀತಿಯನ್ನ ಅನುಸರಿಸಿದ್ದಲ್ಲದೆ ಅಸ್ಪೃಶ್ಯತೆ ಆಚರಣೆ ಮಾಡುತ್ತಿದ್ದೀರಿ ಎಂದು ಅಧಿಕಾರಿಗಳನ್ನ ತರಾಟೆಗೆ ತೆಗೆದುಕೊಂಡರು. ದಲಿತರ ಸಮಸ್ಯೆಗೆ ದ್ವನಿಯಾಗಬೇಕಿರುವ ಇಲಾಖೆ


ಉದಯವಾಹಿನಿ ಚಿತ್ರ

ಅಧಿಕಾರಿಗಳು ಸಮುದಾಯದ ಕುರಿತು ನಿರ್ಲಕ್ಷ್ಯಬಾವ ಹೊಂದಿರುವುದು ಋಜುವಾತಾಗುತ್ತಿದೆ ಎಂದು ಮುಖಂಡ ಸೋಮಣ್ಣ ತೀವ್ರ ವಾಗ್ದಾಳಿ ನಡೆಸಿದರು. ವಕೀಲ ಕಾಂತರಾಜು ಮಾತನಾಡಿ ಸಭೆಯಲ್ಲಿ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ, ತಾಲ್ಲೂಕಿನ ದಲಿತ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸಬೇಕಿರುವವರೆ ಗೈರಾದರೆ ನ್ಯಾಯ ಸಿಗುವುದಾದರು ಹೇಗೆ ಎಂದು ತಹಶೀಲ್ದಾರ್ ಎಂ.ಎಸ್. ತನ್ಮಯ್ ಅವರಿಗೆ ಪ್ರಶ್ನೆಗಳ ಸುರಿಮಳೆಗೈದರು, ನಿರ್ದಿಷ್ಟವಾದ ಸ್ಥಳ ಗ್ರಾಮಾಂತರ ಪ್ರದೇಶದ ಜನರ ಸಮಸ್ಯೆಯ ಕುರಿತಾಗಿ ವಿವರವಾದ ಮಾಹಿತಿ ತಿಳಿಯಲು ಅಥವಾ ಬಗೆಹರಿಸಲು ಕೈಗೊಂಡಿರುವ ಕ್ರಮಗಳ ಕುರಿತಾಗಿ ಅಗತ್ಯ ದಾಖಲೆಗಳ ಸಮೇತ ಉತ್ತರಿಸುವವರು ಯಾರು ನಿಯಮಾವಳಿಗಳನ್ನ ಬುಡಮೇಲು ಮಾಡುವ ಮುಖೇನ ಸಮುದಾಯದ ವಿರೋಧಿ ಧೋರಣೆ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು.

ಎಸ್ಸಿ ಎಸ್ಟಿ ಹಿತರಕ್ಷಣಾ ಸಮಿತಿ ಸಭೆಯನ್ನ ಗಂಭೀರವಾಗಿ ಪರಿಗಣಿಸದ ತಾಲ್ಲೂಕು ಮಟ್ಟದ ಅಧಿಕಾರಿಗಳು ನಿರ್ಲಕ್ಷ್ಯ ದೋರಣೆ ತಳೆದಿದ್ದಾರೆ ಸಮುದಾಯದ ಮುಖಂಡರು ಗ್ರಾಮಾಂತರ ಪ್ರದೇಶದ ರೈತಾಪಿ ಕುಟುಂಬದವರು ಹಲವು ನಿರೀಕ್ಷೆಗಳೊಂದಿಗೆ ಸಭೆಗೆ ಹಾಜರಾಗಿದ್ದರೂ ಸಹ ಬಡವರ ತೆರಿಗೆ ಹಣದಿಂದ ಪಗಾರ ಪಡೆಯುವವರು ಗೈರಾಗಿದ್ದು ಬೇಸರದ ಸಂಗತಿಯಾಗಿದೆ, ಈ ಹಿಂದೆಯೂ ಸಹ ಸಭೆಯು ಹಲವು ಬಾರಿ ಮುಂದೂಡಲ್ಪಟ್ಟಿತ್ತು ಇದಕ್ಕೆಲ್ಲಾ ಕಾರಣ ಅಧಿಕಾರಿ ವೃಂದದವರಿಗೆ ದಲಿತ ಸಮುದಾಯದ ಮೇಲಿರುವ ತಾತ್ಸಾರ ಮನೋಭಾವವೇ ಕಾರಣವಿದ್ದಂತೆ ಬಾಸವಾಗುತ್ತಿದ್ದು ಇನ್ನೊಂದು ವಾರದೊಳಗೆ ಸಭೆ ನಡೆಸಬೇಕು ಎಂದು ದಲಿತ ಸಮುದಾಯದ ಪ್ರಮುಖರು ಒತ್ತಾಯಿಸಿದರು. ಸಭೆಯಲ್ಲಿ ಇಓ ಷಣ್ಮುಗಂ, ಬಿಇಓ ಸ್ವಾಮಿ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್, ಕೃಷಿ ಇಲಾಖೆ ಶಶಿಧರ್, ಸಿಡಿಪಿಓ ಹೇಮಾವತಿ, ಕೆಇಬಿ ಸಿದ್ದಲಿಂಗಪ್ಪ, ಪುರಸಭಾ ಮುಖ್ಯಾಧಿಕಾರಿ ಸರವಣ, ಟಿಎಚ್ ಓ ಅಲೀಂಪಾಷಾ, ಪಶು ಸಂಗೋಪನ ಇಲಾಖೆ ಸಹಾಯಕ ನಿರ್ದೇಶಕ ಮಹದೇಶ್, ಎಪಿಎಂಸಿ ಕಾರ್ಯದರ್ಶಿ ಶ್ರೀಧರ್, ಅಬಕಾರಿ ನಿರೀಕ್ಷಕಿ ದೀಪಾ, ಮುಖಂಡರಾದ ಮುತ್ತಣ್ಣ, ಸಿದ್ದಯ್ಯ, ಸುಭಾಷ್ ಮಾಡ್ರಹಳ್ಳಿ, ಶಂಕರ್, ಬಸವಣ್ಣ, ರಂಗಸ್ವಾಮಿ, ಆರ್.ಡಿ.ಉಲ್ಲಾಸ್, ದೊಡ್ಡರಾಜು, ಪುರಸಭಾ ಮಾಜಿ ಸದಸ್ಯ ಎನ್. ಕುಮಾರ್, ರಂಗಪ್ಪ ನಾಯಕ್, ಸುರೇಶ್ ನಾಯಕ್, ವಕೀಲ ಕಾಂತರಾಜು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಸೇರಿದಂತೆ ಹಲವರು ಭಾಗವಹಿಸಿದ್ದರು.

# ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ- ನಮ್ಮ ಕುಟುಂಬ ನಾಶ ಬಯಸಿದವರ ಬಗ್ಗೆ ನಾನು ಚರ್ಚಿಸಲ್ಲ!

• ಉದಯವಾಹಿನಿ,ಮಂಡ್ಯ

ದೇವೇಗೌಡರ ಸಾವನ್ನು ಬಯಸಿದ್ದಾರೋ ಅಥವಾ ಅವರ ಕುಟುಂಬ ನಾಶವಾಗಬೇಕೆಂದು ಬಯಸಿದ್ದಾರೋ ಅವರ ಬಗ್ಗೆ ನಾನು ಚರ್ಚೆ ಮಾಡಬಾರದು. ಇಂತಹ ವ್ಯಕ್ತಿಗಳ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ನಾವು ಬೆಳೆಸಿದ್ದರಿಂದ ಅವರು ಈಗ ದೊಡ್ಡ ಮಟ್ಟದಲ್ಲಿ ಬೆಳೆದಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ.

ಮಂಡ್ಯದಲ್ಲಿ ಮಾತನಾಡಿದ ಅವರು, ದೇವೇಗೌಡರ ಮನೆಯಲ್ಲಿ ಸೂತಕ ಎಂದಿದ್ದ ಚಲುವರಾಯಸ್ವಾಮಿ ಹೇಳಿಕೆಗೆ ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ. ಅಲ್ಲದೇ ಜಮೀರ್ ಅಹಮದ್ ಜೊತೆ ಹೆಚ್‌ಡಿಕೆ ಸಂಪರ್ಕ ವಿಚಾರಕ್ಕೆ ಸ್ಪಷ್ಟನೆ ನೀಡಿದ ಅವ್ರು, ನಾನು ಯಾವ ಕಾಂಗ್ರೆಸ್‌ನ ನಾಯಕರನ್ನೂ ಸಂಪರ್ಕಿಸಿಲ್ಲ ಎಂದಿದ್ದಾರೆ.

ದೇವೇಗೌಡರದ್ದು ಹೋರಾಟದ ಬದುಕು, ಅಧಿಕಾರಕ್ಕಾಗಿ ಅವರು ಯಾವತ್ತೂ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದವರು ದೇವೇಗೌಡರು ಎಂದು ತಂದೆಯ ಬದುಕಿನ ಹಾದಿ ಬಗ್ಗೆ ಕುಮಾರಸ್ವಾಮಿ ಕೊಂಡಾಡಿದ್ರು.

ಆದರೆ, ಮತ ಹಾಕುವಾಗ ಈ ಕುಮಾರಣ್ಣ ನೆನಪಿಗೆ ಬರುವುದಿಲ್ಲ. ನೀವೆಲ್ಲರೂ ನನ್ನನ್ನು ಉಳಿಸಿದ್ದೀರಿ ನಿಮ್ಮೆಲ್ಲರ ಋಣ ತೀರಿಸುತ್ತೇನೆ ಎಂದರು.



ಉದಯವಾಹಿನಿ ಚಿತ್ರ

ನಾನು ಈ ಮಟ್ಟಕ್ಕೆ ಬೆಳೆಯಲು ರಾಮನಗರ ಜಿಲ್ಲೆ ಒಂದು ಭಾಗ, ನಂತರ ಜಿಲ್ಲೆಯ ಜನರು ತೋರಿದ ಪ್ರೀತಿ ವಿಶ್ವಾಸ ನಂಬಿಕೆಯನ್ನು ನಾನು ಮಣ್ಣಿಗೆ ಹೋಗುವ ತನಕ ಮರೆಯುವುದಿಲ್ಲ. ಕರ್ನಾಟಕ ಸಂಪದ್ಭರಿತ ರಾಜ್ಯ. ಇಲ್ಲಿನ ಸಂಪತ್ತನ್ನು ಜನರಿಗೆ ತಲುಪಿಸಿ ಒಳ್ಳೆಯ ಕಾರ್ಯಕ್ರಮ ರೂಪಿಸಲು ಒಂದು ಅವಕಾಶ ಕೊಟ್ಟು ನನ್ನ ಜೀವನದ ಗುರಿ ಸಾಧಿಸಲು ಅವಕಾಶ ನೀಡಿ ಎಂದು ಮನವಿ ಮಾಡಿದರು.

> **ಕುಮಾರಸ್ವಾಮಿ ಸಲಹೆ ಕೇಳುವುದಾಗಿ ಸಿಎಂ ಡಿಕೆಶಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ನಾನೇನು ಸಲಹೆ ನೀಡಲಿ, ಕುಮಾರಸ್ವಾಮಿ ಎರಡೂ ಬಾರಿ ಸಿಎಂ ಆಗಿ ಏನು ಹರಿದಿದ್ದಾರೆ ಅಂತ ಪ್ರಶ್ನೆ ಮಾಡಿದ್ರು. ಎಲ್ಲದಕ್ಕೂ ಸಾಕ್ಷಿ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನತ್ರ ಏನು ಸಲಹೆ ಕೇಳ್ತಾರೆ ಎಂದು ವ್ಯಂಗವಾಡಿದರು.**


### ಜನರ ಸಮಸ್ಯೆಗಳಿಗೆ ಪರಿಹಾರ

**ಮಾಜಿ ಪ್ರಧಾನಿ ದೇವೇಗೌಡರು 70 ವರ್ಷ ರಾಜಕಾರಣದಲ್ಲಿ ಕೆಲವೇ ವರ್ಷ ಅಧಿಕಾರ ನಡೆಸಿದ್ದಾರೆ. ಹಲವು ರೀತಿಯ ಜನಪರ ಕಾರ್ಯಕ್ರಮ ಕೊಡಬೇಕೆಂದು ಆಸೆ ಇತ್ತಾದರೂ ಅವರಿಗೆ ಸಿಕ್ಕ ಕಡಿಮೆ ಅವಧಿಯಲ್ಲಿ ಅಧಿಕಾರ ನಡೆಸಲು ಸಾಧ್ಯವಾಗದೆ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಆಗಲಿಲ್ಲ. ಅವರ ಮಗನಾಗಿ ನಾನು ದೇವೇಗೌಡರ ಗುರಿಯನ್ನು ಸಾಧಿಸಿ ಯಶಸ್ಸು ಕಾಣಬೇಕೆಂದು ಹೃದಯದಲ್ಲಿರುವ ಕನಸನ್ನು ಸಾಕಾರಗೊಳಿಸಲು ನೀವು ತೀರ್ಮಾನಿಸಿ ನನಗೆ ಶಕ್ತಿ ಕೊಡಬೇಕು ಎಂದರು.**

## ಮಿನಿ ನ್ಯೂಸ್

### ತಾಲ್ಲೂಕು ಕಚೇರಿಗೆ ಶಾಸಕರ ದಿಢೀರ್ ಭೇಟಿ : ಕಾರ್ಯವೈಕರಿ ಪರಿಶೀಲನೆ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಶಾಸಕ ಹೆಚ್.ಎ.ಇಕ್ಬಾಲ್ ಹುಸೇನ್ ಅವರು ತಾಲ್ಲೂಕು ಕಚೇರಿಗೆ ಬುಧವಾರ ಮಧ್ಯಾಹ್ನ ದಿಢೀರ್ ಭೇಟಿ ನೀಡಿ ಅಧಿಕಾರಿಗಳ ಕಾರ್ಯ ವೈಖರಿಯನ್ನು ಪರಿಶೀಲನೆ ನಡೆಸಿದರು. ಯಾವುದೇ ಮುನ್ಸೂಚನೆ ನೀಡದೆ ಕಚೇರಿಗೆ ದಿಢೀರನೆ ಆಗಮಿಸಿದ ಶಾಸಕರನ್ನು ಕಂಡು ಅಧಿಕಾರಿಗಳು ಹಾಗೂ ಸಿಬ್ಬಂದಿ ಕ್ಷಣಕಾಲ ಆತಂಕಕ್ಕೊಳಗಾದರು.

ಕಚೇರಿಯ ಹಾಜರಾತಿ ಪುಸ್ತಕವನ್ನು ಶಾಸಕರು ಖುದ್ದಾಗಿ ಪರಿಶೀಲಿಸಿದರು. ಅದೇ ಸಮಯಕ್ಕೆ ಕಚೇರಿಯಲ್ಲಿದ್ದ ಸಾರ್ವಜನಿಕರ ಬಳಿ ತೆರಳಿ ಅವರ ಅಹವಾಲುಗಳನ್ನು ಆಲಿಸಿದ ಅವರು, ಜನಸಾಮಾನ್ಯರನ್ನು ಸಣ್ಣ ಪುಟ್ಟ ಕೆಲಸಗಳಿಗಾಗಿ ವಿನಾಕಾರಣ ಅಲೆದಾಡಿಸಬಾರದು ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

### ಲಿಂಕ್ ಕೆನಾಲ್ ವಿಚಾರವಾಗಿ ಮುಖ್ಯಮಂತ್ರಿಗಳಿಗೆ ಸ್ಪಷ್ಟ ಮಾಹಿತಿಯ ನೀಡಿದ್ದೇನೆ: ಶಾಸಕ ಎಸ್ ಆರ್ ಶ್ರೀನಿವಾಸ್

• ಉದಯವಾಹಿನಿ, ಗುಬ್ಬಿ

ಲಿಂಕ್ ಕೆನಾಲ್ ವಿಚಾರವಾಗಿ ಆರಂಭದಿಂದಲೂ ನನ್ನ ವಿರೋಧ ಇದೆ. ನಾಳೆ ಆಗಲೀ ಕರಣ ಮಾಡಿ ಲಿಂಕ್ ಕೆನಾಲ್ ಬೇಡ ಎಂದು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಸ್ಪಷ್ಟ ಮಾಹಿತಿಯನ್ನು ನೀಡಿದ್ದೇನೆ ಎಂದು ಕೆಎಸ್‌ಆರ್‌ಟಿಸಿ ನಿಗಮ ಮಂಡಳಿ ಅಧ್ಯಕ್ಷ ಶಾಸಕ ಎಸ್ ಆರ್ ಶ್ರೀನಿವಾಸ್ ತಿಳಿಸಿದರು.

ತಾಲ್ಲೂಕಿನ ಮದನ ಘಟ್ಟ, ಸಾರಿಗೆ ಪಾಳ್ಯ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ವತಿಯಿಂದ ಒಟ್ಟು 5 ಕೋಟಿ ರೂ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಸಚಿವ ಸ್ಥಾನಕ್ಕೆ ಯಾವುದೇ ರೀತಿಯ ಒತ್ತಡ ಹಾಕಿಲ್ಲ ಒಂದು ಬಾರಿ ಮಾತ್ರ ಕೇಳಿದ್ದು, ಸಾಧಕ ಬಾಧಕಗಳನ್ನು ನೋಡಿ ವಿಚಾರ ಮಾಡುವ ಭರವಸೆ ನೀಡಿದ್ದಾರೆ.

ಹಾಗಾಗಿ ಅದನ್ನು ಮೀರಿ ಪ್ರತಿನಿತ್ಯ ಅವರ ಮನೆಗೆ ಹೋದರೆ ಸರಿ ಹೋಗುವುದಿಲ್ಲ ಎಂದ ಅವರು, 125 ಕೋಟಿ ವೆಚ್ಚದಲ್ಲಿ ಪಟ್ಟಣದಲ್ಲಿ ರಿಸೀವ್ ಸೆಂಟರ್ ಮಾಡುತ್ತಿದ್ದು, ತಾಲ್ಲೂಕಿನಲ್ಲಿ 7ಸಾವಿರ ಟಿಸಿ ಇದ್ದು. ಎಲ್ಲಾ ರೈತರು ಪಂಪ್ ಮೋಟಾರ್ ಅಳವಡಿಸಿದ ಕಾರಣ ವಿದ್ಯುತ್ ಸಮಸ್ಯೆ ಉಂಟಾಗಿದೆ.

ಯರಬಳ್ಳಿ, ನಲ್ಲೂರು, ತಾಳೆಕೊಪ್ಪ, ಹಂಡನಹಳ್ಳಿ ಸೇರಿದಂತೆ ಹಲವು ಕಡೆ ಎಂಎಸ್‌ಎಸ್ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು.

### ರಾಜ್ಯದಲ್ಲಿ 5 ಕೋಟಿ ಗಿಡ ನೆಡುವ ಚಾಲನಾ ಕಾರ್ಯಕ್ರಮದ ಅಂಗವಾಗಿ ಜೂ.13ಕ್ಕೆ ಚಾಲನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಇದೇ ಜೂ.13ರಂದು ಹಮ್ಮಿಕೊಂಡಿರುವ 5 ಕೋಟಿ ಗಿಡ ನೆಡುವ ಚಾಲನಾ ಕಾರ್ಯಕ್ರಮಕ್ಕೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಟಿ.ಪಿ.ರಾಮಲಿಂಗೇಗೌಡ ತಿಳಿಸಿದರು. ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಪ್ರಶಾಂತಿ ಬಾಲ ಮಂದಿರ ಫೌಂಡೇಶನ್ ಇವರ ಸಹಯೋಗದಲ್ಲಿ ರಾಜ್ಯದಲ್ಲಿ 5 ಕೋಟಿ ಸಸಿ ನೆಡುವ ಕಾರ್ಯಕ್ರಮದ ಕುರಿತಾಗಿ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಧ್ಯೇಯದೊಂದಿಗೆ ರಾಜ್ಯದಲ್ಲಿ 5 ಕೋಟಿ ಗಿಡಗಳನ್ನು ನೆಟ್ಟು ಬೆಳೆಸುವ ಮಹತ್ವಾಕಾಂಕ್ಷಿ ಕಾರ್ಯಕ್ರಮಕ್ಕೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮುಂದಾಗಿರುವುದು ಹರ್ಷದಾಯಕವಾದ ವಿಚಾರವಾಗಿದ್ದು, ಈ ಕಾರ್ಯಕ್ರಮವನ್ನು ವಿದ್ಯುಕ್ತ ವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಚಾಲನೆ ದೊರಕುತ್ತಿರುವುದು ಸಂತಸದ ವಿಷಯವಾಗಿದೆ ಎಂದರು.

ಈ ಕಾರ್ಯಕ್ರಮಕ್ಕೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರ್ ಶೆಟ್ಟಿ, ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ನ್ಯಾಯಾಲಯಗಳ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಹಂಚಾಟೆ ಸಂಜೀವ ಕುಮಾರ್ ಅವರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

### ಅಕ್ಷಯಪಾತ್ರೆಯ 81ನೇ ಅಡುಗೆ ಮನೆಗೆ ಚಾಲನೆ ನೀಡಿದ ಮಾಜಿ ಸಚಿವ ಡಾ.ಎಂ.ಸಿ.ಸುಧಾಕರ್

• ಉದಯವಾಹಿನಿ,ಶಿಡ್ಲಘಟ್ಟ

ಶಾಲಾ ಮಕ್ಕಳಿಗೆ ಗುಣಮಟ್ಟದ ಪೌಷ್ಠಿಕ ಆಹಾರ ಒದಗಿಸುವ ಉದ್ದೇಶದಿಂದ ಇಸ್ಕಾನ್ ನ ಅಕ್ಷಯಪಾತ್ರೆ ಫೌಂಡೇಷನ್ ತನ್ನ 81ನೇ ಅಡುಗೆ ಮನೆಯನ್ನು ಶಿಡ್ಲಘಟ್ಟ ತಾಲ್ಲೂಕಿನ ಆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳೂಟಿ ಕ್ರಾಸ್ ಬಳಿ ನಡೆದ ಸರಳ ಸಮಾರಂಭದಲ್ಲಿ ಮಾಜಿ ಸಚಿವ ಡಾ.ಎಂ.ಸಿ.ಸುಧಾಕರ್ ಚಾಲನೆ ನೀಡಿದರು.

ಈ ಘಟಕದ ಮೂಲಕ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಸುಮಾರು 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿದಿನ ಬಿಸಿಯೂಟ ಪೂರೈಕೆಯಾಗಲಿದೆ. ದಿ.ಎನ್.ವಿ.ಕೃಷ್ಣಮೂರ್ತಿ ರಾವ್ ಹಾಗೂ ದಿ.ಎನ್.ಆರ್.ಪದ್ಮಾವತಮ್ಮ ಅವರ ಸ್ಮರಣಾರ್ಥ ನಿರ್ಮಿಸಲಾದ ಈ ಅಡುಗೆ ಮನೆಯನ್ನು ಮಾಜಿ ಸಚಿವ ಹಾಗೂ ಚಿಂತಾಮಣಿ ಶಾಸಕ ಡಾ.ಎಂ.ಸಿ.ಸುಧಾಕರ್ ಉದ್ಘಾಟಿಸಿ ಮಾತನಾಡಿದರು. ಇಸ್ಕಾನ್ ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ನಡೆಯುತ್ತಿರುವ ಅಕ್ಷಯಪಾತ್ರೆ ಯೋಜನೆ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸ್ವಯಂಚಾಲಿತ ವ್ಯವಸ್ಥೆಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಆಹಾರ ತಯಾರಿಸುವ ಸಾಮರ್ಥ್ಯ ಹೊಂದಿದೆ.

ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡುವ ಈ ವ್ಯವಸ್ಥೆ ಮಕ್ಕಳಿಗೆ ಆರೋಗ್ಯಕರ ಆಹಾರ ತಲುಪಿಸುವಲ್ಲಿ ಮಾದರಿಯಾಗಿದೆ ಎಂದು ಬಣ್ಣಿಸಿದರು.ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಜಿಲ್ಲಾಧಿಕಾರಿ ಜಿ. ಪ್ರಭು ಮಾತನಾಡಿ, ಮಕ್ಕಳಲ್ಲಿ ಅಪೌಷ್ಟಿಕತೆ ತಡೆಗಟ್ಟುವ ಜೊತೆಗೆ ಶಾಲಾ ಹಾಜರಾತಿ ಹೆಚ್ಚಿಸಲು ಅಕ್ಷಯಪಾತ್ರೆಯ ಸೇವೆ ಮಹತ್ವದ್ದಾಗಿದೆ ಎಂದು ಹೇಳಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಸಂಸ್ಥೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದರಿಂದಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದಂತಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಗಳನ್ನು ವಿತರಿಸಿ, ಮಧ್ಯಾಹ್ನದ ಬಿಸಿಯೂಟವನ್ನು ಗಣ್ಯರು ವಿತರಿಸಿದರು.

ಅಂತರಾಳದಿಂದ...
EDITORIAL

# ಸ್ಥಳೀಯ ಸಂಸ್ಥೆ ಚುನಾವಣೆ ಸರಕಾರ ನುಡಿದಂತೆ ನಡೆಯಲಿ



ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ 8,770 ಹುದ್ದೆಗಳ ಪೈಕಿ 4,000 ಹುದ್ದೆಗಳನ್ನು ಶೀಘ್ರದಲ್ಲಿಯೇ ಭರ್ತಿ ಮಾಡಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಅಲ್ಲದೆ ಈ ವರ್ಷಾಂತ್ಯದೊಳಗಾಗಿ ಪಂಚಾಯತ್ ರಾಜ್ ಸಂಸ್ಥೆಗಳು, ಸ್ಥಳೀಯಾಡಳಿತ ಮತ್ತು ನಗರಾಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಅದರಂತೆ ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲೂ ಶೀಘ್ರದಲ್ಲಿಯೇ ನೇಮಕಾತಿ ನಡೆಸಿ ವಿವಿಧ ವರ್ಗಗಳ ಸರಿಸುಮಾರು 4,000 ಹುದ್ದೆಗಳಿಗೆ ನೇಮಕಾತಿ ನಡೆಸುವುದಾಗಿ ಸಚಿವರು ತಿಳಿಸಿದ್ದಾರೆ. ಸಚಿವರ ಭರವಸೆಯಂತೆ ನೇಮಕಾತಿ ಪ್ರಕ್ರಿಯೆ ನಡೆದದ್ದೇ ಆದಲ್ಲಿ ವಿವಿಧ ಸರಕಾರಿ ಸೇವೆ, ಸೌಲಭ್ಯಗಳ ಪ್ರಯೋಜನ ಪಡೆದುಕೊಳ್ಳಲು ಕಚೇರಿಗಳಿಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿವಾರಣೆಯಾದೀತು ಎಂಬ ಆಶಾಭಾವ ಜನರಲ್ಲಿ ಮೂಡಿದೆ. ಇನ್ನು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳಿಗೆ ಕಳೆದ ಕೆಲವು ವರ್ಷಗಳಿಂದ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಇವುಗಳ ಆಡಳಿತವು ಅಧಿಕಾರಿ ವರ್ಗದ ಹಿಡಿತದಲ್ಲಿರುವುದರಿಂದ ಈ ಸಂಸ್ಥೆಗಳ ನೈಜ ಉದ್ದೇಶವೇ ನಿರರ್ಥಕವಾದಂತಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ತರುವ ನಿಟ್ಟಿನಲ್ಲಿ ಕಾಯಿದೆಗೆ ತಿದ್ದುಪಡಿ, ಮೀಸಲಾತಿ, ಕ್ಷೇತ್ರಗಳ ಪುನರ್ ವಿಂಗಡಣೆ, ವಾರ್ಡ್ ವಾರು ಮೀಸಲಾತಿ ಹಂಚಿಕೆ, ಕಾನೂನು ಸಮರ ಮತ್ತಿತರ ಬೇಡಿಕೆಗಳನ್ನು ಮುಂದಿಟ್ಟು ಸರಕಾರ ಈ ಸಂಸ್ಥೆಗಳಿಗೆ ಚುನಾವಣೆ ನಡೆಸುವುದನ್ನು ವಿಳಂಬಗೊಳಿಸುತ್ತಲೇ ಬಂದಿತ್ತು. ಈ ಸಂಬಂಧ ಹೈಕೋರ್ಟ್ ಸರಕಾರವನ್ನು ಕೆಲವು ಬಾರಿ ತರಾಟೆಗೆ ತೆಗೆದುಕೊಂಡರೂ ಪಂಚಾಯತ್‌ಗಳನ್ನು ಮೇಲ್ದರ್ಜೆಗೇರಿಸುವುದು, ಕ್ಷೇತ್ರ ಪುನರ್ ವಿಂಗಡಣೆಯಲ್ಲಾಗಿರುವ ವಿಳಂಬವನ್ನು ನೆಪವಾಗಿರಿಸಿ ಬೀಸೋ ದೊಣ್ಣೆಯಿಂದ ಪಾರಾಗಿತ್ತು.'

ಹೊರತಾಗಿಯೂ ಈ ಎಲ್ಲಾ ಪ್ರಕ್ರಿಯೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಈ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಸರಕಾರದ ಈ ವಿಳಂಬ ನೀತಿ ಕೇವಲ ವಿಪಕ್ಷಗಳು ಮತ್ತು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದ್ದೇ ಅಲ್ಲದೆ ಆಡಳಿತ ಪಕ್ಷದ ಕಾರ್ಯಕರ್ತರ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು.

ಈ ಎಲ್ಲಾ ಬೆಳವಣಿಗೆಗಳಿಂದಾಗಿ ಸರಕಾರ ಕೊನೆಗೂ ವರ್ಷಾಂತ್ಯದೊಳಗಾಗಿ ಸ್ಥಳೀಯಾಡಳಿತ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಭರವಸೆಯನ್ನು ನೀಡಿದೆ.

ಸಚಿವರು ಮತ್ತು ಸರಕಾರ ಈ ಎರಡು ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸದೇ ಹೋದಲ್ಲಿ ಸರಕಾರದ ವರ್ಚಸ್ಸಿಗೆ ಬಲುದೊಡ್ಡ ಕಳಂಕ ಅಂಟಿಕೊಳ್ಳಲಿದೆ. ಇನ್ನೂ ನೆಪಗಳನ್ನು ಹುಡುಕಿ ಈ ಸಂಸ್ಥೆಗಳ ಚುನಾವಣೆಯನ್ನು ಮುಂದೂಡದೆ, ಇರುವ ಎಲ್ಲಾ ಆಡಳಿತಾತ್ಮಕ ಮತ್ತು ಕಾನೂನು ಅಡೆತಡೆಗಳನ್ನು ನಿವಾರಿಸಿ ಶೀಘ್ರದಲ್ಲಿಯೇ ಚುನಾವಣ ಪ್ರಕ್ರಿಯೆಗೆ ಚಾಲನೆ ನೀಡಬೇಕು.

### ಆಡಳಿತ ವ್ಯವಸ್ಥೆಗೆ ಮತ್ತೆ ಬಲ

ಕಳೆದ ಕೆಲವು ವರ್ಷಗಳಿಂದ ಸಾರ್ವಜನಿಕ ವಲಯದಿಂದ ಈ ಬಗ್ಗೆ ರಾಜ್ಯ ಸರಕಾರದ ಮೇಲೆ ನಿರಂತರ ಒತ್ತಡ ಹೇರುತ್ತಲೇ ಬರಲಾಗಿದ್ದರೂ ನಾನಾ ಕಾರಣಗಳಿಂದಾಗಿ ಸರಕಾರ ಮಾತ್ರ ಅಂತಿಮ ನಿರ್ಧಾರ ಕೈಗೊಳ್ಳುವುದನ್ನು ಮುಂದೂಡುತ್ತಲೇ ಬಂದಿತ್ತು. ಈಗ ಸಚಿವರು ನೀಡಿರುವ ಈ ಎರಡು ಮಹತ್ತರ ಭರವಸೆಗಳಿಂದಾಗಿ ಸರಕಾರ ಗ್ರಾಮೀಣ ಮಟ್ಟದ ಆಡಳಿತ ವ್ಯವಸ್ಥೆಗೆ ಮತ್ತೆ ಬಲ ತುಂಬುವ ಪ್ರಯತ್ನಕ್ಕೆ ಮುಂದಾಗಿರುವಂತೆ ತೋರುತ್ತಿದೆ. ಮೀಸಲಾತಿ ಗೊಂದಲದಿಂದಾಗಿ ಸರಕಾರಿ ನೌಕರರ ನೇಮಕಾತಿ ಪ್ರಕ್ರಿಯೆ ಕಳೆದೆರಡು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ರಾಜ್ಯ ಸರಕಾರ ತಿಂಗಳ ಹಿಂದೆ ಮೀಸಲಾತಿ ಕುರಿತಂತೆ ಅಂತಿಮ ನಿರ್ಧಾರವನ್ನು ಕೈಗೊಂಡ ಬಳಿಕ ಈಗ ಒಂದೊಂದೇ ಇಲಾಖೆಯಲ್ಲಿ ನೇಮಕಾತಿ ಪ್ರಕ್ರಿಯೆಗಳು ನಡೆಯಲಾರಂಭಿಸಿವೆ.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ನೆಲವು ನಡುಗಿತು, ಬೆಟ್ಟಗುಡ್ಡಸಮುದ್ರಗಳು ಅಲುಗಾಡಿದುವು ಬೆಟ್ಟಗಳೇ ನಡೆದು ಬರುತ್ತಿರುವುವೋ ಎಂಬಂತೆ, ಮೋಡಗಳು ಸೂರ್ಯನ ಮೇಲೇರಿ ಬರುವಂತೆ ಬರುವ ದೈತ್ಯಬಲದೊಡನೆ ಅಕ್ಷಕುಮಾರನು ಕಪಿಯನ್ನು ಹಿಡಿದುಬಿಡುವೆನೆಂಬ ಉತ್ಸಾಹದಿಂದ ಬಂದ. ಆನೆಕುದುರೆಪದಾತಿಗಳ ಕೂಗಾಟದಿಂದಲೂ, ವಾದ್ಯರವದಿಂದಲೂ, ರಥಗಳ ಚೀತ್ಕಾರದಿಂದಲೂ ಕೂಡಿದ ಆ ರಣಪಂಡಿತಮಂಡಲಿಯು ಸರಸರನೆ ಬಂದು ತೋರಣದ ತುದಿಯಲ್ಲಿ ಕುಳಿತಿದ್ದ ಪ್ಲವಗಪತಿಯನ್ನು ಕಂಡಿತು. ಪೂರ್ವಾದ್ರಿಯಲ್ಲಿನ ಬಾಲಸೂರ್ಯನಂತೆ ಕದನವನ್ನು ಎದುರು ನೋಡುತ್ತ ಕುಳಿತಿದ್ದ ಹನುಮಂತನ ಕಾಲನ್ನು ಕಂಡ ತಕ್ಷಣವೇ ಅಕ್ಷನು ಅತಿ ಕೋಪದಿಂದ, ''ಬ್ರಹ್ಮ ಮೊದಲಾದವರು ಕನಸಿನಲ್ಲಿಯೂ ಎಣಿಸದಂತಹ ರೀತಿಯಲ್ಲಿ ದೈತ್ಯಸದನವನ್ನು ಹೊಕ್ಕಿದ್ದೀಯೆ, ಮುಂದಾಗುವುದನ್ನು ಯೋಚಿಸದೆ ಕಪಿಚೇಷ್ಟೆಗಳಲ್ಲಿ ತೊಡಗಿದೆ, ನಾಲ್ವರು ವನಪಾಲಕರನ್ನು ಕೊಂದೆ, ಗಿಡಮರಗಳನ್ನೆಲ್ಲ ಮುರಿದಿಟ್ಟೆ, ಭವನಗಳನ್ನು ಕೆಡಹಿದೆ. ಇಷ್ಟರಿಂದಲೇ ನಿನಗೆ ಸಮಾನರಾರೂ ಇಲ್ಲವೆಂದು ಬಗೆದೆಯಲ್ಲವೇ ನಮ್ಮ ಕೈಗುಣವನ್ನು ಕಾಣದೆ ನಿನಗೆ ದುರ್ಬುದ್ಧಿಯುಂಟಾಯಿತು ಇನ್ನು ನಿನಗೆ ಮೃಷ್ಟಾನ್ನ ಭೋಜನ ಕಾದಿದೆ ಎಂದು ಜರೆದು ಪುಂಖಾನುಪುಂಖವಾಗಿ ಬಾಣಗಳನ್ನು ಬಿಟ್ಟ ಅವನ ಅಸಂಖ್ಯ ಬಾಣಗಳಿಂದ ಭೂಮಿ-ಆಕಾಶಗಳು ಒಂದಾದುವು, ಸೂರ್ಯಚಂದ್ರರು ನಕ್ಷತ್ರಗಳಂತೆ ಕಾಣಿಸಿದರು, ಗಾಳಿ ಸ್ತಬ್ಧವಾಯಿತು, ಬೆಟ್ಟ ನಡುಗಿತು, ಈ ಭೀಕರ ಸಮರವನ್ನು ಕಂಡ ಮುನಿಸಂದೋಹ ತಲ್ಲಣಿಸಿ ರಕ್ಕಸಪತಿಯು ಮೂರು ವಿಶೇಷ ಬಾಣಗಳನ್ನು ಕಪಿವೀರನ ಮೇಲೆ ಪ್ರಯೋಗಿಸಲು ಅವು ಬಿದ್ದ ರಭಸದಿಂದ ಮಾರುತಿಯ ಹಣೆಯೊಡೆದು ರಕ್ತ ಸುರಿಯುತ್ತ ಹೂಬಿಟ್ಟ ಮುಳ್ಳುತ್ತುಗದಂತೆ ಕಾಣಿಸಿತು. ಅದರಿಂದ ಭುಗಿಲೆದ್ದ ಕಪಿವರನು ಹಲ್ಲುಕಡಿಯುತ್ತ ಕಿಡಿಯುಗುಳುವ ಕಣ್ಣುಗಳಿಂದ ನೋಡಿ ಗರ್ಜಿಸುತ್ತ ಮೇಲೆದ್ದ. ಅಕ್ಷನ ಬಾಣಹತಿಯು ಸಹಿಸಲಸಾಧ್ಯವಾಗಿ ಘುಡುಘುಡಿಸುತ್ತ ರಾವಣಕುವರನ ಪ್ರಹಾರದಿಂದ ಮೈ ಗಾಯಗಳಿಂದ ಕೂಡುವಂತಾಗಿ ನೆಲದ ಮೇಲೆ ನಿಂತು ಯುದ್ಧ ಮಾಡುವುದು ಕಷ್ಟವೆನ್ನಿಸಿ, ಮೋಡದಂತೆ ಗುಡುಗಿ ಆಗಸಕ್ಕೇರಿ ಮಿಂಚುಸಿಡಿಲುಗಳಂತೆ ಸುಳಿದು ರಕ್ಕಸನನ್ನು ತುಳಿಯಬೇಕೆಂದುಕೊಂಡ. ಗರುಡನ ಹಾಗೆ ಗಗನದಲ್ಲಿ ಹಾರಾಡುವ ಮರುತಜನ ಪರಿಯನ್ನು ಕಂಡು ಅಕ್ಷನು ಶರಪಂಜರವನ್ನೇ ರಚಿಸಲು ಆಕಾಶವೆಲ್ಲ ಅವನ ಕೈವಶವಾದಂತೆ ಕಾಣಿಸಿತು ಹರಿತವಾದ ಕೆಂಗರಿಬಾಣಗಳ ಅರ್ಧಚಂದ್ರಾಕಾರ ಬಾಣಗಳ ರಾಶಿಯನ್ನೇ ಪ್ರಯೋಗಿಸಿ, ಬೇಟೆಯಲ್ಲಿ ಮೃಗಗಳನ್ನು ಬಲೆ ಹಾಕಿ ಹಿಡಿಯುವಂತೆ, ಆಗಸವನ್ನೆಲ್ಲ ಮುಚ್ಚಿಬಿಟ್ಟ. ನೆಲದ ಮೇಲೆ ನಿಂತು ಯುದ್ಧಮಾಡುವುದು ಅಸಾಧ್ಯ, ಆಗಸದಲ್ಲಿ ಚಲಿಸುವುದು ದುಸ್ಸಾಧ್ಯ ಅವನ ಮುಂದೆ ಸುಳಿದಾಡಿದರೆ ಅಪ್ರತಿಮ ಸಾಹಸಿಯಾದ ರಕ್ಕಸನು ತನ್ನನ್ನು ಕೊಲ್ಲದೆ ಬಿಡುವುದಿಲ್ಲ ಹೀಗಿರಲು ರವಿಕುಲತೇಜನಿಗೆ ಜಯಲಕ್ಷ್ಮಿ ಹೇಗೆ ಒಲಿಯುತ್ತಾಳೆಯೋ ಎಂದು ಹನುಮನು ಕಂಪಿಸಿದ. ಈ ದೈತ್ಯಸುತನು ತನ್ನ ಹರೆಯ ಬಲಗಳಿಂದ ಕೂಡಿ ತುಪ್ಪ ಕುಡಿದ ಬೆಂಕಿಯಂತೆ ಅಸಮಬಲನಾಗಿದ್ದಾನೆ. ಇವನ ಆರ್ಭಟವನ್ನು ನಿಲ್ಲಿಸದಿದ್ದರೆ ಮೂರು ಲೋಕಗಳನ್ನೂ ಇವನು ನೀರಿನಲ್ಲದ್ದುವುದು ಖಂಡಿತ, ಆದ್ದರಿಂದ ಇವನನ್ನು ಕೊಂದೇ ತೀರಬೇಕು, ಚಾರಣಾದಿಗಳಿಗೆ ಸಂತಸವನ್ನು ನೀಡಲೇಬೇಕು ಎಂದು ನಿರ್ಧರಿಸಿದ. ದೃಢನಿಶ್ಚಯದ ಆಂಜನೇಯನು ತನ್ನ ಬಲವನ್ನೆಲ್ಲ ಬಿಟ್ಟು ಮೇಲಿನಿಂದ ಅಕ್ಷನ ರಥದ ಮೇಲೆ ಸರಿಯಾಗಿ ದುಮುಕಿದ, ರಥ ಕುದುರೆ ಸಾರಥಿಗಳು ಒಂದೇ ಕ್ಷಣದಲ್ಲಿ ಅಪ್ಪಚ್ಚಿಯಾದವು. ಇದನ್ನು ಕಂಡ ಅಕ್ಷನು ರೋಷದಿಂದ ಮತ್ತೊಂದು ತೇರನ್ನೇರಿ ಅನಿಲಸಂಭೂತನಿಗೆ ಎದುರಾಗಿ ನಿಂತು ಆಕಾಶಭೂಮಿಗಳಲ್ಲಿ ಒಂದಿನಿತೂ ಜಾಗವಿರದಂತೆ ತನ್ನ ಬಾಣಗಳನ್ನು ಪೇರಿಸಿಬಿಟ್ಟ, ಆಗ ಅದ್ಭುತವಾದ ಸುರಾಸುರ ಯುದ್ಧವು ಘೋರಭೀಕರವಾಗಿ ಸಂಭವಿಸಲು, ಅಕ್ಷನು ನಮುಚಿ ಜಂಭಾಸುರ ಮೊದಲಾದವರಿಗೂ ಮೀರಿದ ರಭಸದಿಂದ ಹೋರಾಡಿದ. ತೂರಿ ಹೋಗಲು ಸಾಧ್ಯವಾಗದಂತೆ ಸುತ್ತಲೂ ಬಾಣಗಳು ಕವಿದಿರಲು, ಪವಮಾನಜನಿಗೆ ಹಾದಿಯಿಲ್ಲದಂತಾಗಿ ಅವನನ್ನು ಶತ್ರುನಿಗ್ರಹ ಚಿಂತೆ ಆವರಿಸಿತು.


ಮುಂದುವರೆಯುವುದು



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ತಲೆಬಾಗಿ ಒಳಬರುವ ವಿನಯ ಅಹಂಕಾರವನ್ನು ಹೊಸ್ತಿಲಲ್ಲೇ ಇಳಿಸುತ್ತದೆ. ಮಣ್ಣಿಗೆ ಶರಣಾದವನೇ ಮಲ್ಲ ಎಂಬ ಉಸ್ತಾದರ ಮಾತಿಗೆ ಇದು ಮೂಕ ಸಾಕ್ಷಿ. ಗೋಡೆಯ ಎತ್ತರದ ಸಣ್ಣ ಕಿಂಡಿ ಇನ್ನೊಂದು ಚಮತ್ಕಾರ. ಮುದ್ಗಲ್ ಎತ್ತುವಾಗ, ತಾಲೀಮು ಮಾಡುವಾಗ ಪೈಲ್ವಾನನ ದೃಷ್ಟಿ ಆ ಕಿಂಡಿಯ ಬೆಳಕಿನ ಗೆರೆಗೆ ಅಂಟಿಕೊಳ್ಳುತ್ತದೆ. ಇದು ಏಕಾಗ್ರತೆಯ ಸಾಧನೆ, ಎದುರಾಳಿಯ ಮೇಲೆ ಕಣ್ಣಿಡುವ ತರಬೇತಿ.

# ಗರಡಿಯ ವಿನ್ಯಾಸ: ಬಾಗಿಲ ಬಾಗು, ಕಿಂಡಿಯ ನೋಟ



ಕರ್ನಾಟಕದ ಪಾರಂಪರಿಕ ಗರಡಿ ಮನೆಗೆ ಕಾಲಿಡುವಾಗ ಎದುರಾಗುವುದು ಕುಬ್ಜ ಬಾಗಿಲು. ಆಜಾನುಬಾಹು ಪೈಲ್ವಾನನೂ ಸೊಂಟ ಬಗ್ಗಿಸಿ ಒಳಹೋಗಬೇಕು. ಇದು ಕೇವಲ ರಚನೆಯಲ್ಲ, ಶಿಸ್ತಿನ ಪಾಠ. ಗಿಡ್ಡ ಬಾಗಿಲು ಹೊರಗಿನ ತಣ್ಣನೆ ಗಾಳಿಯನ್ನು ತಡೆದು ಅಖಾಡದ ಬೆಚ್ಚಗಿನ ಶಾಖವನ್ನು ಕಾಪಾಡುತ್ತದೆ. ದಂಡ-ಬೈಟಕ್‌ನಲ್ಲಿ ಕಾದ ಶರೀರಕ್ಕೆ ಹಠಾತ್ ಕೋಲ್ಡ್ ಶಾಕ್ ತಗುಲದಂತೆ, ಸ್ನಾಯು ಸೆಳೆತ ಬಾರದಂತೆ ಇದು ನೈಸರ್ಗಿಕ ಥರ್ಮೋಸ್ಟಾಟ್ ಆಗಿ ಕೆಲಸ ಮಾಡುತ್ತದೆ.

ಕಿಂಡಿಗೆ ಮತ್ತೊಂದು ಮಹತ್ವವಿದೆ. ವ್ಯಾಯಾಮದ ಬಿಸಿಗೆ ಕಫ ಉಂಟಾದಾಗ ಪೈಲ್ವಾನರು ಪವಿತ್ರ ಮಣ್ಣಿಗೆ ಉಗುಳದೆ, ಕಿಂಡಿಯ ಮೂಲಕ ಹೊರಹಾಕುತ್ತಿದ್ದರು. ಇದರಿಂದ ಅಖಾಡ ಬ್ಯಾಕ್ಟೀರಿಯಾ ಮುಕ್ತವಾಗಿರುತ್ತಿತ್ತು.

ಓರೆ ಕೋನದಲ್ಲಿ ಬೀಳುವ ಸೂರ್ಯ ಕಿರಣ ಮಣ್ಣಿನ ಕ್ರಿಮಿಗಳನ್ನು ಕೊಂದು, ಚರ್ಮರೋಗ ತಡೆಯುತ್ತಿತ್ತು.

ಹೈಟೆಕ್ ಜಿಮ್‌ಗಿಂತ ನಮ್ಮ ಗರಡಿ ಹೆಚ್ಚು ವಿಜ್ಞಾನಮಯ. ಬಾಗಿಲಿನ ವಿನಯ, ಕಿಂಡಿಯ ನೋಟ, ನೈರ್ಮಲ್ಯದ ಜಾಣ್ಮೆ ಇವೆಲ್ಲ ಸೇರಿ ಪೈಲ್ವಾನನನ್ನು ದೇಹದಿಂದಷ್ಟೇ ಅಲ್ಲ, ಮನಸ್ಸಿನಿಂದಲೂ ವೀರನಾಗಿಸುತ್ತದೆ.

# ಬಹು ಗುಣಕಾರಿ ದಾಸವಾಳ



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

1) ಕೆಲವರಿಗೆ ಕೂದಲಿಗೆ ಎಣ್ಣೆ ಹಚ್ಚುವುದು ಇಷ್ಟವಿಲ್ಲ. ಅಂಥವರು, ಕಬ್ಬಿಣದ ಬಾಣಲೆಯಲ್ಲಿ 10 ರಿಂದ 15 ದಾಸವಾಳ ಹೂವುಗಳನ್ನು ಸ್ವಲ್ಪ ನೀರಿನಲ್ಲಿ ನೆನೆಸಿಡಬೇಕು. ರಾತ್ರಿಯಲ್ಲಿ ಆ ನೀರನ್ನು 5-6 ನಿಮಿಷ ಕುದಿಸಿ. ಬೆಳಿಗ್ಗೆ ಎದ್ದ ನಂತರ, ನಿಮ್ಮ ಕೂದಲಿಗೆ ದಾಸವಾಳದ ಈ ಸಾರವನ್ನು ಹಚ್ಚಿ. ಒಂದು ಗಂಟೆಯ ನಂತರ, ನಿಮ್ಮ ಕೂದಲನ್ನು ನೀರಿನಿಂದ ಮಾತ್ರ ತೊಳೆಯಿರಿ. ಇದು ಕೂದಲಿಗೆ ಉತ್ತಮ ಹೊಳಪನ್ನು ನೀಡುತ್ತದೆ.

2) ನೀವು ತಲೆಗೆ ಮಸಾಜ್ ಮಾಡಲು ಬಳಸುತ್ತಿರುವ ಎಣ್ಣೆಯಲ್ಲಿ, ಉದಾಹರಣೆಗೆ, ಎಳ್ಳೆಣ್ಣೆ ಅಥವಾ ತೆಂಗಿನ ಎಣ್ಣೆ, ಐದರಿಂದ ಆರು ದಾಸವಾಳದ ಹೂಗಳನ್ನು ಸೇರಿಸಿ. ಈ ಎಣ್ಣೆಯನ್ನು ಬಿಸಿ ಮಾಡಿ ಅರಳಿಯಿಂದ ಅಥವಾ ಬೆರಳುಗಳ ಬದಲಿಗೆ ದಾಸವಾಳದ ಹೂವುಗಳಿಂದ ಮಸಾಜ್ ಮಾಡಿದರೆ ಕೂದಲಿನ ಬೇರುಗಳು ಬಲಗೊಳ್ಳುತ್ತವೆ.

3) ಬಹಳಷ್ಟು ದಾಸವಾಳದ ಹೂವುಗಳು, ಎರಡು ನೆಲ್ಲಿಕಾಯಿ, ಸ್ವಲ್ಪ ಶಿಕೇಕಾಯಿ ಮತ್ತು ಎರಡು ಅಂಟುವಾಳಗಳನ್ನು ನೀರಿನಲ್ಲಿ ಹಾಕಿ ಮಿಶ್ರಣವನ್ನು ಸರಿಯಾಗಿ ಕುದಿಸಿ. ಕೂದಲಿಗೆ ಹೇರ್ ವಾಶ್ ಆಗಿ ಬಳಸಬಹುದು. ಈ ಹೇರ್ ವಾಶ್ ಅನ್ನು ಪ್ರತಿದಿನ ಬಳಸಬಹುದು.

4) ಮೆಂತ್ಯ, ಅಲೋವೆರಾ, ದಾಸವಾಳ ಹೂವುಗಳನ್ನು ಸೇರಿಸಿ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ಈ ಪ್ಯಾಕ್ ಅನ್ನು ಕೂದಲಿಗೆ ಹಚ್ಚಿ. ಇದು ಕೂದಲಿಗೆ ನೈಸರ್ಗಿಕ ಹೊಳಪನ್ನು ನೀಡುತ್ತದೆ.

5) ದಾಸವಾಳ ಹೂವುಗಳು, ಅಲೋವೆರಾ ಎಲೆಗಳು, 50 ಮಿಲಿ ಕ್ಯಾಸ್ಟರ್ ಆಯಿಲ್ ಮತ್ತು 50 ಮಿಲಿ ಎಳ್ಳಿನ ಎಣ್ಣೆಯನ್ನು ಒಟ್ಟಿಗೆ ಬಿಸಿ ಮಾಡಿ. ಗಾಜಿನ ಬಾಟಲಿಯಲ್ಲಿ ಈ ಎಣ್ಣೆಯನ್ನು ಬಳಸುವುದು ಉತ್ತಮ. ವಾರಕ್ಕೆ ಎರಡು ಬಾರಿಯಾದರೂ ಈ ಎಣ್ಣೆಯನ್ನು ನಿಮ್ಮ ಕೂದಲಿಗೆ ಹಚ್ಚಿಕೊಳ್ಳಿ.

6) ಮಾರುಕಟ್ಟೆಯಲ್ಲಿ ಸಿಗುವ ಜಸ್ವಂದ್ ಎಣ್ಣೆ ಕೂಡ ತುಂಬಾ ಪರಿಣಾಮಕಾರಿ. ಇದನ್ನು ಇನ್ನಷ್ಟು ಎಣ್ಣೆ ಸೇರಿಸಿ ಬಳಸಿ.

7) ದಾಸವಾಳದ ಜೆಲ್ ಅರೋಮಾಥೆರಪಿ ಎಣ್ಣೆಗಳಲ್ಲಿಯೂ ತುಂಬಾ ಉಪಯುಕ್ತವಾಗಿದೆ. ಆದರೆ ತಜ್ಞರ ಸಲಹೆ ಇಲ್ಲದೆ ಇದನ್ನು ಬಳಸಬಾರದು.

8) ಬ್ರಾಹ್ಮಿ, ಬೃಂಗರಾಜ, ನಾಗರಮೋತ (ನಾಗರಮುಜ್ಜೆ, ಕನ್ನರಿಗಡ್ಡ), ನೇರಳೆ ಮತ್ತು ದಾಸವಾಳ ಹೂವುಗಳನ್ನು ಒಟ್ಟಿಗೆ ಕುದಿಸಿ ಅದರ ನೀರನ್ನು ಗಾಜಿನ ಬಾಟಲಿಯಲ್ಲಿ ತುಂಬಿಸಿ ಕೂದಲಿನ ನೀರಿನಂತೆ ಬಳಸಬೇಕು.

9) ಗೋರಂಟಿ (ಮದರಂಗಿ), ಮಜ್ಜಿಗೆ, ದಾಸವಾಳ ಎಣ್ಣೆ ಮತ್ತು ಮಂಡೂರಿನ ಪುಡಿಯನ್ನು ಒಟ್ಟಿಗೆ ನೆನೆಸಿ. ಈ ಮಿಶ್ರಣವನ್ನು ಹಚ್ಚುವುದರಿಂದ ಕೂದಲಿಗೆ ನೈಸರ್ಗಿಕ ಬಣ್ಣ ಬರುತ್ತದೆ.

10) ಜಸ್ವಂದ್ ಜೆಲ್ ಅನ್ನು ಶಿಕೇಕಾಯಿ, ಅಂಟುವಾಳ ಕಾಯಿ, ಕಚೂರ್ ಪರಿಮಳ (ಬಿಳಿ ಅರಿಶಿಣ, ಕಚೋರಾ), ಕಿತ್ತಳೆ ಸಿಪ್ಪೆ ಮತ್ತು ಮುಲ್ತಾನಿ ಮಣ್ಣಿನೊಂದಿಗೆ ಬೆರೆಸಿ ಕೂದಲಿಗೆ ಹಚ್ಚಬೇಕು. ಇಷ್ಟೇ ಅಲ್ಲ, ಆರೋಗ್ಯ ಲಾಭಗಳಿಗಾಗಿ ದಾಸವಾಳದ ಚಹವನ್ನು ಕೂಡ ಕುಡಿಯುವ ವಾಡಿಕೆ ಇದೆ. ದಾಸವಾಳದ ತಾಜಾ ಅಥವಾ ಒಣಗಿದ ಹೂಗಳನ್ನು ನೀರಿನಲ್ಲಿ ಕುದಿಸಿ, ಈ ಚಹವನ್ನು ತಯಾರಿಸಲಾಗುತ್ತದೆ. ಇದು ಕಡು ಕೆಂಪು ಬಣ್ಣದ್ದಾಗಿರುತ್ತದೆ. ದಾಸವಾಳದ ಚಹಾ ಅನೇಕ ಆರೋಗ್ಯ ಲಾಭಗಳನ್ನು ನೀಡುತ್ತದೆ. ಉದಾಹರಣೆಗೆ,

1. ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ
2. ಕ್ಯಾನ್ಸರ್ ಅನ್ನು ತಡೆಗಟ್ಟುತ್ತದೆ
3. ರಕ್ತದ ಅಧಿಕ ಒತ್ತಡವನ್ನು ನಿಯಂತ್ರಿಸುತ್ತದೆ
4. ತೂಕ ನಷ್ಟಕ್ಕೆ ಸಹಾಯಕವಾಗಿದೆ
5. ಬ್ಯಾಕ್ಟೀರಿಯಾ ಇತ್ಯಾದಿ ಸೋಂಕು ನಿರೋಧಕವಾಗಿದೆ
6. ಯಕೃತ್ತನ್ನು ಬಲಪಡಿಸುತ್ತದೆ
7. ಕೊಲೆಸ್ಟ್ರಾಲ್ ಅನ್ನು ನಿಯಂತ್ರಿಸುತ್ತದೆ
8. ಉರಿಯೂತವನ್ನು ಶಮನಗೊಳಿಸುತ್ತದೆ
9. ಖಿನ್ನತೆಯನ್ನು ನಿವಾರಿಸುತ್ತದೆ
10. ಮುಟ್ಟಿನ ಸಮಸ್ಯೆಗಳನ್ನು ನಿಯಂತ್ರಿಸಲು ಸಹಾಯಕ
11. ಜೀರ್ಣ ಕ್ರಿಯೆಯನ್ನು ಸುಧಾರಿಸುತ್ತದೆ
12. ನಿರ್ಜಲೀಕರಣವನ್ನು ತಡೆಯುತ್ತದೆ.

# ಮಾವಿನ ಹಣ್ಣು ತಿನ್ನುವ ಮುನ್ನ ನೀರಿನಲ್ಲಿ ಜಸ್ಟ್ 20 ನಿಮಿಷ ನೆನೆಸಿಟ್ಟರೆ ಇಷ್ಟೆಲ್ಲಾ ಲಾಭ ಆಗುತ್ತೆ!

ಮಾವನ್ನು ಹಣ್ಣಿನ ರಾಜ ಎಂದು ಕೂಡ ಕರೆಯುತ್ತಾರೆ. ಬೇಸಿಗೆ ಬಂದರೆ ಸಾಕು ಎಲ್ಲಿ ನೋಡಿದರಲ್ಲಿ ಮಾವಿನ ಹಣ್ಣುಗಳು ಕಾಣಸಿಗುತ್ತವೆ. ಮಾವಿನ ಹಣ್ಣಿನ ರುಚಿಯನ್ನು ಸವಿಯುವ ಮೊದಲು, ಅನೇಕರು ಹಣ್ಣನ್ನು ನೀರಿನಲ್ಲಿ ನೆನೆಸುವುದನ್ನು ನಿರ್ಲಕ್ಷಿಸುತ್ತಾರೆ. ಆದರೆ ಮಾವನ್ನು ನೀರಿನಲ್ಲಿ ನೆನೆಸಿ ಬಳಿಕ ಸೇವಿಸುವ ಸಾಂಪ್ರದಾಯಿಕ ಪದ್ಧತಿ ಕೇವಲ ಪುರಾಣವಲ್ಲ. ಇದು ನಿಜವಾದ ಆರೋಗ್ಯ ಮತ್ತು ಸುರಕ್ಷತಾ ಪ್ರಯೋಜನಗಳನ್ನು ಹೊಂದಿದೆ. ಹಾಗಾದರೆ ಬನ್ನಿ ಮಾವು ಸೇವಿಸುವ ಮುನ್ನ ನೀರಿನಲ್ಲಿ ನೆನೆಸಿದರೆ ಏನೆಲ್ಲಾ ಲಾಭಗಳು ಆಗಲಿದೆ ಅಂತ ನಾವು ಹೇಳ್ತೀವಿ.

**ಕೊಳಕು, ಕೀಟನಾಶಕ ಮತ್ತು ರಾಸಾಯನಿಕ ಅವಶೇಷಗಳನ್ನು ನಾಶ:** ಮಾವಿನ ಹಣ್ಣುಗಳನ್ನು ಕೃಷಿ ಮತ್ತು ಸಾಗಣಿಕೆಯ ಸಮಯದಲ್ಲಿ ಕೀಟನಾಶಕಗಳು ಮತ್ತು ರಾಸಾಯನಿಕಗಳಿಂದ ಸಂಸ್ಕರಿಸಲಾಗುತ್ತದೆ. ಆದ್ದರಿಂದಾಗಿ ಮಾವಿನ ಹಣ್ಣನ್ನು 20 ರಿಂದ 30 ನಿಮಿಷ ನೀರಿನಲ್ಲಿ ನೆನೆಯಲು ಹಾಕುವುದರಿಂದ ಅದು ಮೇಲ್ಮೈಯನ್ನು ಶುಚಿಗೊಳಿಸಿ, ಅದರಲ್ಲಿದ್ದ ರಾಸಾಯನಿಕಗಳನ್ನು ತೆಗೆದು ಹಾಕಿ ಮುಖ್ಯವಾಗಿ ಮಕ್ಕಳಿಗೆ ತಿನ್ನಲು ಸುರಕ್ಷಿತವಾಗಿರುತ್ತದೆ. **ಶಾಖ ಉತ್ಪಾದಿಸುವ ಗುಣಗಳನ್ನು ಕಡಿಮೆ ಮಾಡುತ್ತದೆ:** ಭಾರತದ ಸಂಪ್ರದಾಯದ ಪ್ರಕಾರ ಮಾವಿನ ಹಣ್ಣು ಶಾಖವನ್ನು ಉತ್ಪಾದಿಸುವ ಹಣ್ಣಾಗಿದೆ. ಆದ್ದರಿಂದ ಮಾವಿನ ಹಣ್ಣನ್ನು ನೀರಿನಲ್ಲಿ ನೆನೆಸುವುದರಿಂದ ಥರ್ಮೋಜೆನಿಕ್ ಪರಿಣಾಮವನ್ನು ಕಡಿಮೆ ಮಾಡುವುದಲ್ಲದೇ ಮುಖ್ಯವಾಗಿ ಬೇಸಿಗೆಯ ಸಮಯದಲ್ಲಿ ಉಂಟಾಗುವ ಅಜೀರ್ಣತೆ, ಮುಖದಲ್ಲಿ ಆಗುವ ಮೊಡವೆ ಮತ್ತು ದೇಹದ ಶಾಖವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. **ಫೈಟಿಕ್ ಆಮ್ಲವನ್ನು ತೆಗೆದುಹಾಕುತ್ತದೆ:** ಮಾವಿನಹಣ್ಣುಗಳು ನೈಸರ್ಗಿಕವಾಗಿ ಸಣ್ಣ ಪ್ರಮಾಣದ ಫೈಟಿಕ್ ಆಮ್ಲವನ್ನು ಹೊಂದಿರುತ್ತದೆ. ಇದು ಐರನ್, ಜಿಂಕ್ ಮತ್ತು ಕ್ಯಾಲ್ಸಿಯಂ ಜೊತೆ ಬಂಧಿತವಾಗುತ್ತದೆ. ನೀರಿನಲ್ಲಿ ನೆನೆಸುವುದರಿಂದ ಇದರ ಸಾಂದ್ರತೆಯನ್ನು ಕಡಿಮೆ ಮಾಡಿ ದೇಹದಲ್ಲಿ ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ.

ಮಾವಿನಹಣ್ಣಿನ ಕಾಂಡವು ಹಾಲಿನ ರಸವನ್ನು ಬಿಡುಗಡೆ ಮಾಡುತ್ತದೆ. ಇದು ಗಂಟಲು ಕೆರೆತ ಮತ್ತು ಚರ್ಮದ ಅಲರ್ಜಿಗೆ ಕಾರಣವಾಗಬಹುದು. ನೀರಿನಲ್ಲಿ ನೆನೆಸುವುದರಿಂದ ಈ ರಸವನ್ನು ಹೋಗಲಾಡಿಸಿ ಮಾವಿನಹಣ್ಣನ್ನು ಮೃದುವಾಗಿರಿಸುತ್ತದೆ. ಮಾವಿನ ಹಣ್ಣಿನ ನೆನೆಸುವುದರಿಂದ ಅದರ ರುಚಿಯಾದ ಅನುಭವವನ್ನು ಹೆಚ್ಚಿಸಬಹುದು. ಸಿಪ್ಪೆಯಿಂದ ಯಾವುದೇ ಕಹಿಯನ್ನು ಹಾಕಿ, ಹಣ್ಣನ್ನು ಸ್ವಲ್ಪ ತಂಪಾಗಿ ಮತ್ತು ಹೆಚ್ಚು ಉಲ್ಲಾಸಕರವಾಗಿರಿಸುತ್ತದೆ. ಮಾವಿನ ಹಣ್ಣುಗಳನ್ನು ಸರಿಯಾಗಿ ನೆನೆಸುವುದು ಹೇಗೆ? ಅಂತ ನೋಡುವುದಾದರೆ, ಒಂದು ಬಟ್ಟಲಿನಲ್ಲಿ ಶುದ್ಧ ನೀರನ್ನು ತೆಗೆದುಕೊಳ್ಳಿ. ನಂತರ ಮಾವಿನ ಹಣ್ಣುಗಳನ್ನು ಸಂಪೂರ್ಣವಾಗಿ ಮುಳುಗಿಸಿ. ಅವುಗಳನ್ನು 20-30 ನಿಮಿಷಗಳ ಕಾಲ ಹಾಗೆಯೇ ಬಿಡಿ.

ತಿನ್ನುವ ಮೊದಲು ಮತ್ತೊಮ್ಮೆ ತೊಳೆಯಿರಿ. ಮಾವಿನ ಹಣ್ಣುಗಳನ್ನು ನೆನೆಸುವುದು ದೊಡ್ಡ ಪ್ರಯೋಜನಗಳನ್ನು ಹೊಂದಿರುವ ಸಣ್ಣ ಅಭ್ಯಾಸವಾಗಿದೆ. ಇದು ನಿಮ್ಮ ಹಣ್ಣನ್ನು ಸ್ವಚ್ಛವಾಗಿ, ಸುರಕ್ಷಿತವಾಗಿ ಮತ್ತು ನಿಮ್ಮ ದೇಹಕ್ಕೆ ಸುಲಭಗೊಳಿಸಲು ಸಹಾಯ ಮಾಡುತ್ತದೆ.



# ಊಟ ಆದ್ಮೇಲೆ ಸೋಂಪು ತಿಂತೀರಾ? ಇದರಿಂದ ದೇಹದೊಳಗೆ ಏನೆಲ್ಲಾ ಆಗುತ್ತೆ ಗೊತ್ತಾ?

ಸಾಮಾನ್ಯವಾಗಿ ನೀವು ಹೋಟೆಲ್‌ಗಳಿಗೆ ಹೋದಾಗ ಅಥವಾ ಮನೆಯಲ್ಲಿಯೇ ಹೆಚ್ಚು ಊಟ ಮಾಡಿದಾಗ, ಅನೇಕ ಮಂದಿ ಊಟದ ಕೊನೆಯಲ್ಲಿ ಸ್ವಲ್ಪ ಸೋಂಪು ಕಾಳುಗಳನ್ನು ಅಗಿಯುವ ಅಭ್ಯಾಸವನ್ನು ಹೊಂದಿರುತ್ತಾರೆ.

ಜೀರ್ಣ ಶಕ್ತಿಯನ್ನು ಹೆಚ್ಚಿಸಲು, ಬಾಯಿಯ ದುರ್ವಾಸನೆ ಹೋಗಲಾಡಿಸಲು, ಬಾಯಿಯನ್ನು ಫ್ರೆಶ್ ಆ್ಯಂಡ್ ಕೂಲ್ ಆಗಿರಿಸಲು ಮಾತ್ರ ಸಹಾಯ ಮಾಡುತ್ತದೆ ಎಂದು ನೀವು ಅಂದುಕೊಂಡಿದ್ದರೆ ತಪ್ಪು. ನಿಮಗೆ ಗೊತ್ತಿದೆಯೋ ಇಲ್ಲವೋ ತಿಳಿದಿಲ್ಲ. ಊಟ ಆದ ಮೇಲೆ ಸ್ವಲ್ಪ ಸೋಂಪು ಕಾಳುಗಳನ್ನು ಬಾಯಿಯಲ್ಲಿ ಹಾಕಿಕೊಂಡು ಜಗಿಯುವುದರಿಂದ ಮತ್ತು ನಿರಂತರವಾಗಿ ಈ ಅಭ್ಯಾಸವನ್ನು ಮುಂದುವರಿಸುವುದರಿಂದ ಅನೇಕ ಆರೋಗ್ಯ ಪ್ರಯೋಜನಗಳನ್ನು ಪಡೆಯಬಹುದಾಗಿದೆ.

ಹೌದು, ತೆಲುಗು ಲೈಫ್‌ಸ್ಟೈಲ್ ಡಾಟ್ ಕಾಮ್ ವರದಿ ಪ್ರಕಾರ, ಈ ಸಣ್ಣ ಸೋಂಪು ಬೀಜಗಳು ಅನೇಕ ಅದ್ಭುತ ಔಷಧೀಯ ಗುಣಗಳನ್ನು ಹೊಂದಿದ್ದು, ಇವು ಕ್ಯಾಲ್ಸಿಯಂ, ಮೆಗ್ನೀಸಿಯಮ್, ರಂಜಕ, ಪೊಟ್ಯಾಸಿಯಮ್, ವಿಟಮಿನ್ ಎ ಮತ್ತು ವಿಟಮಿನ್ ಸಿ ಯಂತಹ ಪೋಷಕಾಂಶಗಳ ಉತ್ತಮ ಮೂಲವಾಗಿದೆ. ಹೀಗಾಗಿ ಇನ್ನು ಮುಂದೆ ನೀವು ಕೂಡ ಪ್ರತಿದಿನ ಊಟ ಆದ ನಂತರ ಸ್ವಲ್ಪ ಸೋಂಪು ಕಾಳುಗಳನ್ನು ಜಗಿಯುವ ಅಭ್ಯಾಸ ಮಾಡಿಕೊಂಡರೆ ಈ ಕೆಳಗಿನ ಆರೋಗ್ಯ ಪ್ರಯೋಜನಗಳನ್ನು ಪಡೆಯಬಹುದಾಗಿದೆ.

**ಜೀರ್ಣಕ್ರಿಯೆ ಸಮಸ್ಯೆ:** ಊಟದ ನಂತರ ಸೋಂಪು ಅಗಿಯುವುದರಿಂದ ನೀವು ಸೇವಿಸಿದ ಆಹಾರವು ಜೀರ್ಣಿಸಿಕೊಳ್ಳಲು ಸುಲಭವಾಗುತ್ತದೆ. ಇದು ಹೊಟ್ಟೆಯಲ್ಲಿರುವ ಕಿಣ್ವಗಳನ್ನು ಉತ್ತೇಜಿಸುತ್ತದೆ ಮತ್ತು ಗ್ಯಾಸ್ಟ್ರಿಕ್, ಅಸಿಡಿಟಿ, ಹೊಟ್ಟೆ ಉಬ್ಬರ ಮತ್ತು ಮಲಬದ್ಧತೆಯಂತಹ ಸಮಸ್ಯೆಗಳನ್ನು ತಡೆಯುತ್ತದೆ.

**ತೂಕ ಇಳಿಕೆ:** ಸೋಂಪು ಬೀಜಗಳು ನಮ್ಮ ದೇಹದಲ್ಲಿನ ಚಯಾಪಚಯ ಕ್ರಿಯೆಯನ್ನು ವೇಗಗೊಳಿಸುತ್ತವೆ. ಇದರಿಂದ, ದೇಹದಲ್ಲಿರುವ ಹೆಚ್ಚುವರಿ ಕ್ಯಾಲೋರಿಗಳು ವೇಗವಾಗಿ ಸುಡಲ್ಪಡುತ್ತವೆ. ನೀವು ಆರೋಗ್ಯಕರ ರೀತಿಯಲ್ಲಿ ತೂಕ ಇಳಿಸಿಕೊಳ್ಳಲು ಬಯಸುವುದಾದರೆ, ನಿಮ್ಮ ಆಹಾರದಲ್ಲಿ ಸಂಪೂರ್ಣ ಸೋಂಪು ಸೇರಿಸಿಕೊಳ್ಳುವುದು ತುಂಬಾ ಒಳ್ಳೆಯದು.

**ನಿದ್ರಾಹೀನತೆ ಸಮಸ್ಯೆ:** ರಾತ್ರಿ ಸರಿಯಾಗಿ ನಿದ್ರಿಸಲು ನಿಮಗೆ ಸಮಸ್ಯೆ ಆಗ್ತಿದ್ಯಾ? ಹಾಗಾದರೆ ಸೋಂಪು ನಿಮಗೆ ಉತ್ತಮ ಔಷಧಿಯಾಗಬಹುದು. ಸೋಂಪು ಪಿಟ್ಯುಟರಿ ಗ್ರಂಥಿಯನ್ನು ಉತ್ತೇಜಿಸಿ ಉತ್ತಮ ನಿದ್ರೆಗೆ ಅಗತ್ಯವಾದ 'ಮೆಲಟೋನಿನ್' ಹಾರ್ಮೋನ್ ಅನ್ನು ಸ್ರವಿಸುತ್ತದೆ. ಇದರಿಂದ, ನಿಮಗೆ ನೆಮ್ಮದಿಯ ನಿದ್ರೆ ಸಿಗುತ್ತದೆ.

**ಹೃದ್ರೋಗ ಸಮಸ್ಯೆ:** ಸೋಂಪು ಕಾಳಿನಲ್ಲಿರುವ ಹೆಚ್ಚಿನ ಪೊಟ್ಯಾಸಿಯಮ್ ಅಂಶವು ರಕ್ತದೊತ್ತಡವನ್ನು (ಬಿಪಿ) ನಿಯಂತ್ರಣದಲ್ಲಿಡುತ್ತದೆ. ಇದು ಹೃದಯ ಬಡಿತವನ್ನು ನಿಯಂತ್ರಣದಲ್ಲಿಡುತ್ತದೆ ಮತ್ತು ಹೃದಯ ಸಂಬಂಧಿತ ಸಮಸ್ಯೆಗಳನ್ನು ತಡೆಯುತ್ತದೆ.

ಊಟದ ನಂತರ ಸೋಂಪನ್ನು ಅಗಿಯುವ ಬದಲು, ಮತ್ತೊಂದು ರೀತಿಯಲ್ಲಿ ಸೇವಿಸುವುದರಿಂದ ನೀವು ಎರಡು ಪಟ್ಟು ಪ್ರಯೋಜನಗಳನ್ನು ಪಡೆಯಬಹುದು. ಅಂದರೆ ರಾತ್ರಿ ಹೊತ್ತು ಮಲಗುವ ಮುನ್ನ ಅರ್ಧ ಟೀ ಚಮಚ ಸೋಂಪು ಬೀಜಗಳನ್ನು ಒಂದು ಲೋಟ ನೀರಿನಲ್ಲಿ ನೆನೆಸಿಡಿ.

ಮರುದಿನ ಬೆಳಗ್ಗೆ, ನೀರು ಕುಡಿಯಿರಿ ಮತ್ತು ಸೋಂಪು ಬೀಜಗಳನ್ನು ಅಗಿಯಿರಿ. ಇದನ್ನು ಪ್ರತಿದಿನ ಮಾಡುವುದರಿಂದ ನಿಮ್ಮ ಆರೋಗ್ಯ ಸುಧಾರಿಸುವುದಷ್ಟೇ ಅಲ್ಲ, ನಿಮ್ಮ ಚರ್ಮ ಸಹ ಆರೋಗ್ಯಕರವಾಗಿರುತ್ತದೆ.



# ಖಾಸಗಿ ಶಾಲೆಗಳ ದುಬಾರಿ ಫಾರಿನ್ ಟ್ರಿಪ್ ಶುಲ್ಕ! ಮಿಡಲ್ ಕ್ಲಾಸ್ ಪೋಷಕರಲ್ಲಿ ಆತಂಕ



ಮಕ್ಕಳನ್ನು ಬೆಳೆಸುವುದು ಕೇವಲ ಆರ್ಥಿಕ ಜವಾಬ್ದಾರಿಯಲ್ಲ, ಅದೊಂದು ಸೂಕ್ಷ್ಮ ಹಾಗೂ ಸುಂದರವಾದ ಕಲೆ ಅಂತಾ ಹೇಳಬಹುದು. ಇದು ಪೋಷಕರಿಂದ ತಾಳ್ಮೆ, ಪ್ರೀತಿ ಮತ್ತು ಸರಿಯಾದ ಮಾರ್ಗದರ್ಶನವನ್ನು ಬೇಡುತ್ತದೆ. ಮಗುವಿನ ಬೆಳವಣಿಗೆಗೆ ಪೋಷಕರು ಅವರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದುವುದು ಅತ್ಯಂತ ಅವಶ್ಯಕವಾಗಿದೆ. ಇದಲ್ಲದೆ, ಆರಂಭದಲ್ಲೇ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವುದು ಪೋಷಕರ ಕರ್ತವ್ಯ. ಆದರೆ, ಶಾಸಗಿ ಶಾಲೆಯೊಂದು ಫಾರಿನ್ ಟ್ರಿಪ್ ಹೆಸರಿನಲ್ಲಿ ವಿಧಿಸುವ ಅತಿಯಾದ ಶುಲ್ಕದ ದೊಡ್ಡ ಮಟ್ಟದಲ್ಲಿ ಚರ್ಚೆಯನ್ನು ಹುಟ್ಟುಹಾಕಿದೆ.

ಹೌದು, ಕೇವಲ 8ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳು ಜಪಾನ್‌ಗೆ ಸ್ಕೂಲ್ ಟ್ರಿಪ್‌ಗಾಗಿ 2.5 ಲಕ್ಷ ರೂ. ಖರ್ಚು ಮಾಡಿರುವುದು ಭಾರೀ ಚರ್ಚೆ ಆಗುತ್ತಿದೆ. ಈ ಬಗ್ಗೆ ಅಲ್ಕಾ ಗುರ್ಹಾ ಎಂಬ ಮಹಿಳೆ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದು, ಈಗ ದೇಶಾದ್ಯಂತ ವೈರಲ್ ಆಗಿದೆ. ಎಜುಕೇಷನಲ್ ಅನುಭವಗಳು ಮತ್ತು ಗ್ಲೋಬಲ್ ಮಾನ್ಯತೆಯ ಹೆಸರಿನಲ್ಲಿ ಶಾಲೆಗಳು ವಿಧಿಸುತ್ತಿರುವ ವೆಚ್ಚಗಳು ಶಿಕ್ಷಣದ ನಿಜವಾದ ಮೊತ್ತಕ್ಕಿಂತ ಹಲವು ಪಟ್ಟು ಹೆಚ್ಚಾಗಿದೆ ಎಂಬ ಟೀಕೆಗಳು ವ್ಯಕ್ತವಾಗಿದೆ.

ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿರು ಪೋಸ್ಟ್‌ನ ಪ್ರಕಾರ, 8ನೇ ತರಗತಿಯ ವಿದ್ಯಾರ್ಥಿನಿ ಜಪಾನ್ ಪ್ರವಾಸಕ್ಕಾಗಿ ಸ್ಕೂಲ್ ಮ್ಯಾನೇಜ್ಮೆಂಟ್‌ಗೆ 2.5 ಲಕ್ಷ ರೂ.ಗಳನ್ನು ಪಾವತಿಸಿದ್ದಲ್ಲದೆ, ಶಾಪಿಂಗ್ ಮತ್ತು ಇತರ ವೈಯಕ್ತಿಕ ವೆಚ್ಚಗಳಿಗಾಗಿ ಆಕೆಯ ಪೋಷಕರಿಂದ ಹೆಚ್ಚುವರಿ 50 ಸಾವಿರ ರೂ.ಗಳನ್ನು ಕಳುಹಿಸುವಂತೆ ಕೇಳಿಕೊಂಡಳು. ಅಷ್ಟೇ ಅಲ್ಲ, ಅದೇ ವಿದ್ಯಾರ್ಥಿನಿ ಕೆಲವು ತಿಂಗಳ ಹಿಂದೆ ಗೋವಾಕ್ಕೆ ಸ್ಕೂಲ್ ಟ್ರಿಪ್‌ಗಾಗಿ 90 ಸಾವಿರ ರೂ.ಗಳನ್ನು ಕೊಟ್ಟು ಹೋಗಿದ್ದಳು ಎಂದು ಮಹಿಳೆ ತಿಳಿಸಿದ್ದಾರೆ.

ಪ್ರಸ್ತುತ, ದೇಶದ ಪ್ರಮುಖ ಕಾರ್ಪೊರೇಟ್ ಸ್ಕೂಲ್‌ಗಳು ಗ್ಲೋಬಲ್ ಮಾನ್ಯತೆ, ಸಾಂಸ್ಕೃತಿಕ ವಿನಿಮಯ ಮತ್ತು ಪ್ರಾಕ್ಟಿಕಲ್ ಕಲಿಕೆಗಾಗಿ ಜಪಾನ್, ಸಿಂಗಾಪುರ, ಯುರೋಪ್ ಮತ್ತು ಅಮೆರಿಕದಂತಹ ದೇಶಗಳಿಗೆ ಪ್ರವಾಸಗಳನ್ನು ಕಡ್ಡಾಯವಾಗಿಸಿವೆ. ಸ್ಕೂಲ್ ಮ್ಯಾನೇಜ್ಮೆಂಟ್‌ಗಳು ಇಂತಹ ಪ್ರವಾಸಗಳು ಮಕ್ಕಳ ಪ್ರಪಂಚದ ತಿಳುವಳಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ವಾದಿಸುತ್ತಿದ್ದರೂ, ಇದರಲ್ಲಿ ಒಳಗೊಂಡಿರುವ ವೆಚ್ಚಗಳು ಸಾಮಾನ್ಯ ಜನರಿಗೆ ತಲುಪಲು ಸಾಧ್ಯವಾಗದ ಮಟ್ಟವನ್ನು ತಲುಪುತ್ತಿವೆ. ವಿಮಾನ ದರಗಳು, ವಿದೇಶಿ ಹೋಟೆಲ್ ರೂಮ್, ಪ್ರಯಾಣ ವಿಮೆ ಮತ್ತು ಗೈಡ್ ಶುಲ್ಕಗಳು ಬಿಲ್‌ಗಳನ್ನು ಲಕ್ಷಗಳಿಗೆ ತಳ್ಳುತ್ತಿವೆ.

ಒಂದೇ ಮನೆಯಲ್ಲಿ ಎರಡು ಅಥವಾ ಮೂರು ಮಕ್ಕಳನ್ನು ಹೊಂದಿರುವ ಕುಟುಂಬಗಳು ಈ ವೆಚ್ಚಗಳನ್ನು ಭರಿಸುವುದು ಅಸಾಧ್ಯವಾಗುತ್ತಿದೆ ಎಂದು ನೆಟ್ಟಿಗರು ಸೋಶಿಯಲ್ ಮೀಡಿಯಾದಲ್ಲಿ ಭಾರೀ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಹೈಕಮಾಂಡ್‌ಗೆ ಕಾಂಗ್ರೆಸ್ ಮುಖಂಡರ ಖಡಕ್ ಎಚ್ಚರಿಕೆ! ಶಾಸಕ ಅಪ್ಪಾಜಿ ನಾಡಗೌಡರು ಏತನೀರಾವರಿ ಯೋಜನೆಗಳನ್ನು ತರುವ ಮೂಲಕ ರೈತರ ಬಾಳಿಗೆ ಬೆಳಕಾಗಿದ್ದಾರೆ.

# ಶಾಸಕ ಸಿ.ಎಸ್. ನಾಡಗೌಡರಿಗೆ ಸಚಿವ ಸ್ಥಾನ ನೀಡದಿದ್ದರೆ 'ಮುದ್ದೇಬಿಹಾಳ ಬಂದ್'

• ಉದಯವಾಹಿನಿ, ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ರಾಜ್ಯ ಸಚಿವ ಸಂಪುಟ ವಿಸ್ತರಣೆಯ ಬೆನ್ನಲ್ಲೇ ಮುದ್ದೇಬಿಹಾಳ ಮತಕ್ಷೇತ್ರದ ಹಿರಿಯ ಶಾಸಕ ಹಾಗೂ ಮೂಲ ಕಾಂಗ್ರೆಸ್ಸಿಗ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ತಾಲ್ಲೂಕಿನ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹೈಕಮಾಂಡ್‌ಗೆ ತೀವ್ರ ಒತ್ತಾಯ ಹೇರಿದ್ದಾರೆ. ಒಂದು ವೇಳೆ ಹಿರಿಯ ನಾಯಕರನ್ನು ಕಡೆಗಣಿಸಿದರೆ ಮುದ್ದೇಬಿಹಾಳ ಬಂದ್ ಮಾಡಿ ಬೀದಿಗಿಳಿದು ಹೋರಾಟ ಮಾಡುವುದಾಗಿ ಖಡಕ್ ಎಚ್ಚರಿಕೆ ನೀಡಿದ್ದಾರೆ. ಬುಧವಾರ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಮುಖಂಡರು, ರಾಜ್ಯ ಸರ್ಕಾರ ಪ್ರಕಟಿಸಿದ ಮೊದಲ ಹಂತದ ಸಚಿವರ ಪಟ್ಟಿಯಲ್ಲಿ ಅಪ್ಪಾಜಿ ನಾಡಗೌಡ ಅವರ ಹೆಸರು ಕೈಬಿಟ್ಟಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಬ್ಲಾಕ್ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಗುರು ತಾರನಾಳ, ಮುಖಂಡರಾದ ಶಿವಶರಣಗೌಡ ಹಿರೇಗೌಡರ ಹಾಗೂ ವೈ.ಎಚ್. ವಿಜಯಕರ ಮಾತನಾಡಿ, ರಾಜ್ಯದ ಸಮಗ್ರ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಅಪ್ಪಾಜಿ ನಾಡಗೌಡರಂತಹ ಅನುಭವಿ ನಾಯಕರ ಸೇವೆ ಅಗತ್ಯವಿದೆ. ಎಸ್ ಎಂ ಕೃಷ್ಣ ಅವರು ಸಿಎಂ ಆಗಿದ್ದ ಕಾಲದಿಂದಲೂ ಅವರಿಗೆ ಸಚಿವ ಸ್ಥಾನ ತಪ್ಪುತ್ತಲೇ ಬಂದಿದೆ. ಹಠ ಮಾಡುವ ಮಕ್ಕಳಿಗೆ ಚಾಕೊಲೇಟ್ ನೀಡಿದಂತೆ ನಮ್ಮ ಶಾಸಕರಿಗೆ ದೆಹಲಿ ವಿಶೇಷ ಪ್ರತಿನಿಧಿ, ನಿಗಮದ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಸಿಎಂ ಡಿ.ಕೆ. ಶಿವಕುಮಾರ್ ಅವರು ನಮ್ಮ ಶಾಸಕರ ಸಮಕಾಲೀನ ರಾಜಕೀಯ ನಾಯಕರಾಗಿದ್ದು, ಹಿರಿತನದ ಆಧಾರದ ಮೇಲೆ 2ನೇ ಸಂಪುಟದಲ್ಲಾದರೂ ಸಚಿವ ಸ್ಥಾನ ನೀಡಲೇಬೇಕು ಎಂದು ಹಕ್ಕೊತ್ತಾಯ ಮಾಡಿದರು.



ಮಾಜಿ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ರಾಜೇಂದ್ರಗೌಡ ರಾಯಗೊಂಡ, ಪಿಂಟು ಸಾಲಿಮನಿ, ತಿಪ್ಪಣ್ಣ ದೊಡಮನಿ, ಸಿ.ಜಿ. ವಿಜಯಕರ, ಬಿ.ಆರ್. ಚಪ್ಪರಬಂದ ಮಾತನಾಡಿ, ಬೇರೆ ಕಡೆ ಈಗಾಗಲೇ ಹಲವು ಬಾರಿ ಸಚಿವರಾದವರಿಗಾಗಿ ತಾಲ್ಲೂಕು ಬಂದ್ ಮಾಡಿ ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ನಮ್ಮ ಶಾಸಕರು 6 ಬಾರಿ ಗೆದ್ದರೂ ಸಂಭಾವಿತರಾಗಿ ಉಳಿದಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಅವರ ಹಿರಿತನಕ್ಕೆ ಮೊದಲ ಆದ್ಯತೆ ನೀಡಬೇಕು. ಈ ಹಿಂದೆ ಸಿದ್ದರಾಮಯ್ಯನವರು ನಾಡಗೌಡರಿಗೆ ಮಂತ್ರಿ ಮಾಡುವ ವಾಗ್ದಾನ ನೀಡಿದ್ದರು, ಅದನ್ನು ಹೈಕಮಾಂಡ್ ಮರೆಯಬಾರದು. ಪ್ರತಿ ಬಾರಿ ಪ್ರಥಮ ಪಟ್ಟಿಯಲ್ಲಿ ಹೆಸರಿದ್ದು ಕೊನೆ ಕ್ಷಣದಲ್ಲಿ ಕೈಬಿಡಲಾಗುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಹಣ ಪಡೆದು ಸಚಿವ ಸ್ಥಾನ ನೀಡುತ್ತದೆ ಎಂಬ ಅಪವಾದವನ್ನು ಈ ಬಾರಿಯಾದರೂ ದೂರ ಮಾಡಬೇಕು. ಇಲ್ಲದಿದ್ದರೆ ಮುಂಬರುವ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಉತ್ತರ ಕರ್ನಾಟಕ ಭಾಗದ 'ಮೂಲ ಕಾಂಗ್ರೆಸ್ಸಿಗರಲ್ಲಿ' ಎರಡನೇ ಅತ್ಯಂತ ಹಿರಿಯ ನಾಯಕರಾಗಿರುವ ಸಿ.ಎಸ್. ನಾಡಗೌಡರನ್ನು ಕಡೆಗಣಿಸಿದರೆ ಇಡೀ ಮತಕ್ಷೇತ್ರದಾದ್ಯಂತ ಉಗ್ರ ಹೋರಾಟ ರೂಪಿಸುವುದಾಗಿ ಕಾರ್ಯಕರ್ತರು ಒಕ್ಕೊರಲಿನಿಂದ ಎಚ್ಚರಿಕೆ ನೀಡಿದ್ದಾರೆ.ಪತ್ರಿಕಾಗೋಷ್ಠಿಯಲ್ಲಿ ರಾಯನಗೌಡ ತಾತರೆಡ್ಡಿ, ಸತೀಶ ಓಸ್ವಾಲ್, ಸಂಗನಗೌಡ ಬಿರಾದಾರ, ತಾಲ್ಲೂಕು ಎಸ್ಸಿ ಘಟಕದ ಅಧ್ಯಕ್ಷ ಶ್ರೀಕಾಂತ ಚಲವಾದಿ, ಸಿಕಂದರ್ ಜಾನ್ವೇಕರ, ಶರಣಬಸು ಚಲವಾದಿ, ಗೋಪಿ ಮಡಿವಾಳರ, ನಾಗೇಶ ಭಜಂತ್ರಿ, ಶರಣು ದೇಗಿನಾಳ, ಬಹದ್ದೂರ್ ರಾಠೋಡ, ರಾಮಣ್ಣ ರಾಜನಾಳ, ಸುರೇಶಗೌಡ ಪಾಟೀಲ, ರಫಿಕ್ ಶಿರೋಳ, ಗುರುಸ್ವಾಮಿ ಬೂದಿಹಾಳಮಠ, ಮಾಬೂಬಿ ಬಾಗವಾನ, ಹೀನಾ ಮೂಲಿಮನಿ, ಸುಜಾತಾ ಶಿಂಧೆ ಸೇರಿದಂತೆ ಕಾಂಗ್ರೆಸ್ ಪಕ್ಷದ ನೂರಾರು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

> ಶಾಸಕ ಅಪ್ಪಾಜಿ ನಾಡಗೌಡರು ಮುದ್ದೇಬಿಹಾಳ ಕ್ಷೇತ್ರಕ್ಕೆ ಬೂದಿಹಾಳ ಪೀರಾಪೂರ, ನಾಗರಬೆಟ್ಟ, ಚಿಮ್ಮಲಗಿ ಮುಳವಾಡ ಏತನೀರಾವರಿ ಯೋಜನೆಗಳನ್ನು ತರುವ ಮೂಲಕ ರೈತರ ಬಾಳಿಗೆ ಬೆಳಕಾಗಿದ್ದಾರೆ. ಪಕ್ಷದಲ್ಲಿ ಅತ್ಯಂತ ನಿಷ್ಠಾವಂತರಾಗಿ ಜವಾಬ್ದಾರಿ ನಿಭಾಯಿಸಿರುವ ಇಂತಹ ಹಿರಿಯ ಶಾಸಕರಿಗೆ ಸಚಿವ ಸ್ಥಾನ ಸಿಗಲೇಬೇಕು ಎಂದರು.
> – ಶ್ರೀಮತಿ ಅಕ್ಷತಾ ಶರಣಬಸು ಚಲವಾದಿ
> ಕಾಂಗ್ರೆಸ್ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ

## ಮುಖ್ಯಮಂತ್ರಿಗಳೇ ಶಿಕ್ಷಣ ಖಾತೆ ನೋಡಿಕೊಳ್ಳುತ್ತಿದ್ದಾರೆ, ಸಚಿವ ಸ್ಥಾನ ನೀಡುವುದು ಹೈಕಮಾಂಡ್ ತೀರ್ಮಾನ: ಮಧು ಬಂಗಾರಪ್ಪ

• ಉದಯವಾಹಿನಿ, ಶಿವಮೊಗ್ಗ

ಸಂಪುಟ ವಿಸ್ತರಣೆ ವೇಳೆ ತಮಗೆ ಸಚಿವ ಸ್ಥಾನ ನೀಡಬೇಕೆಂದು ಹಲವು ನಾಯಕರು ಬೇಡಿಕೆ ಇಡುವುದು ಸಹಜ. ಯಾರನ್ನು ಸಚಿವರನ್ನಾಗಿ ಮಾಡಬೇಕು, ಯಾರಿಗೆ ಯಾವ ಖಾತೆ ನೀಡಬೇಕು ಎಂಬುದು ಹೈ ಕಮಾಂಡ್ ಗೆ ಚೆನ್ನಾಗಿ ತಿಳಿದಿದೆ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ ಎಂದು ಮಾಜಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ತಮ್ಮನ್ನು ಮತ್ತೆ ಶಿಕ್ಷಣ ಸಚಿವರನ್ನಾಗಿ ಮುಂದುವರಿಸುವುದು ಬಿಡುವುದು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟ ವಿಚಾರ. ಪಕ್ಷ ಏನೇ ತೀರ್ಮಾನ ಕೈಗೊಂಡರೂ ಅದನ್ನು ಪಾಲಿಸುತ್ತೇನೆ ಎಂದರು. ಪ್ರಸ್ತುತ ಮುಖ್ಯಮಂತ್ರಿ ಬಳಿಯೇ ಶಿಕ್ಷಣ ಖಾತೆ ಇದೆ. ಶಿಕ್ಷಣ ಸಚಿವರಿಲ್ಲ ಎಂಬ ಕಾರಣಕ್ಕೆ ಇಲಾಖೆಯ ಕಾರ್ಯ ಗಳು ಸ್ಥಗಿತಗೊಂಡಿವೆ


ಉದಯವಾಹಿನಿ ಚಿತ್ರ

ಎಂದು ಹೇಳುವುದು ಸರಿಯಲ್ಲ. ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡ ತಕ್ಷಣವೇ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಲವು ಮಹತ್ವದ ಆದೇಶಗಳನ್ನು ಹೊರಡಿಸಿದ್ದಾರೆ. ತೆಲಂಗಾಣ ರಾಜ್ಯದಲ್ಲಿಯೂ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಬಳಿಯೇ ಶಿಕ್ಷಣ ಖಾತೆ ಇದ್ದು, ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕದಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಇದೆ' ಎಂದು ಮಧು ಬಂಗಾರಪ್ಪ ಸಮರ್ಥಿಸಿಕೊಂಡರು.

> **ಕಾಂಗ್ರೆಸ್ ಸರ್ಕಾರದ ಕನಸಿನ ಕೂಸು**
> ಕೆಪಿಎಸ್ (ಕರ್ನಾಟಕ ಪಬ್ಲಿಕ್ ಶಾಲೆ) ಯೋಜನೆ ಕಾಂಗ್ರೆಸ್ ಸರ್ಕಾರದ ಕನಸಿನ ಕೂಸು. ಇದನ್ನು ಸ್ಥಗಿತಗೊಳಿಸಲಾಗಿದೆ ಎಂಬುದು ವದಂತಿಯಷ್ಟೇ. ಶಿವಮೊಗ್ಗದಿಂದಲೇ ಈ ಯೋಜನೆಗೆ ಮತ್ತಷ್ಟು ವೇಗ ನೀಡುವ ಕೆಲಸ ನಡೆಯಲಿದೆ. ಸರ್ಕಾರದ ಬದಲಾವಣೆಯ ಸಂದರ್ಭದಲ್ಲಿ ಉಂಟಾದ ಆಡಳಿತಾತ್ಮಕ ವ್ಯತ್ಯಾಸಗಳಿಂದ ಕೆಲವು ಕಾರ್ಯಕ್ರಮಗಳು ಮುಂದೂಡಲ್ಪಟ್ಟಿವೆ ಅಷ್ಟೇ. ಯಾವುದೇ ಯೋಜನೆಯೂ ರದ್ದಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

## ಶಿಕ್ಷಣ ಜೀವನ ರೂಪಿಸುವ ಸಂಜೀವಿನಿ:ಸೋಮನಗೌಡ

• ಉದಯವಾಹಿನಿ, ತಾಳಿಕೋಟೆ

ಶಿಕ್ಷಣ ಎಂಬುದು ಸರಕಾರಿ ಹುದ್ದೆಗೆ ಮಾತ್ರ ಸೀಮಿತವಲ್ಲದು ಪ್ರತಿಯೊಬ್ಬ ಮನುಷ್ಯನ ಜೀವನ ರೂಪಿಸುವಂತಹ ಸಂಜೀವಿನಿ ಇದ್ದಂತೆ ಅದ್ದನ್ನು ಬಳಕೆ ಮಾಡಿಕೊಳ್ಳುವ ರೀತಿ ಕಲಿಸುವದು ಶಿಕ್ಷಕರದ್ದಾಗಿದೆ ಅಂತಹ ಶಿಕ್ಷಕ ವೃತ್ತಿಯ ಶಿಕ್ಷಣ ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳು ಅರೀತುಕೊಂಡು ಮುನ್ನಡೆದರೆ ದೇಶದ ಉಜ್ವಲ ಭವಿಷ್ಯ ರೂಪಿಸಲು ಸಾಧ್ಯವೆಂದು ಮಾಜಿ ಶಾಸಕ ಕೆಜಿಪ್ಪಿಎ ಸಂಘದ ಅಧ್ಯಕ್ಷ ಸೋಮನಗೌಡ ಪಾಟೀಲ ಅವರು ಹೇಳಿದರು.

ಅತ್ಯಂತ ಪವಿತ್ರ ವೃತ್ತಿಯಾಗಿದೆ ದೇಶದ ಯುವ ಸಮೂಹವನ್ನು ಪ್ರಜ್ಞಾವಂತ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿ ನಿಮ್ಮಮೇಲಿದೆ ಬಿಎಡ್ ಪ್ರಶಿಕ್ಷಣಾರ್ಥಿಗಳು ಉತ್ತಮ ಕಲಿಕೆಯೊಂದಿಗೆ ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ಮುಂದಾಗಿರಿ ಎಂದರು. ಕಾರ್ಯಕ್ರಮದಲ್ಲಿ ಶ್ರೀ ಷ.ಬ್ರ. ಗುರು ಜಯಸಿದ್ದೇಶ್ವರ ಮಹಾಸ್ವಾಮಿಗಳು ಆಶೀರ್ವಚನವಿತ್ತರು.

## ಮಳೆಗಾಲದ ಹಿನ್ನೆಲೆಯಲ್ಲಿ ಕೊಡಗಿನಲ್ಲಿ ಭಾರೀ ವಾಹನಗಳ ಸಂಚಾರ ನಿಷೇಧ

• ಉದಯವಾಹಿನಿ, ಸುಳ್ಯ

ಮುಂಗಾರು ಪ್ರಾರಂಭವಾಗಿದ್ದು, ಮುಂದಿನ ಮಳೆಗಾಲದ ದಿನಗಳಲ್ಲಿ ನದಿಪಾತ್ರಗಳಲ್ಲಿ ನೀರಿನ ಹರಿವು ಹೆಚ್ಚಾಗಲಿದ್ದು, ಸಾರ್ವಜನಿಕರ ಸುರಕ್ಷತೆಯ ಮತ್ತು ಸಾರ್ವಜನಿಕ ಆಸ್ತಿ ಪಾಸ್ತಿಗಳ ರಕ್ಷಣೆಯ ಹಿತದೃಷ್ಟಿಯಿಂದ ಮರಳುಗಾರಿಕೆ, ಮರದ ದಿಮ್ಮಿಗಳ ಸಾಗಾಣೆ ಮತ್ತು ಇತರೆ ಸರಕು ಸಾಗಾಣಿಕೆ ಮಾಡುವ ಭಾರೀ ವಾಹನಗಳು ಕೊಡಗು ಜಿಲ್ಲೆಯಾದ್ಯಂತ ಸಂಚಾರ ನಿಷೇಧ ಮಾಡಿ ಕೊಡಗು ಡಿಸಿ ಆದೇಶ ಮಾಡಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಹೆಚ್ಚಾಗುವ ದಿನಗಳಲ್ಲಿ ರಸ್ತೆಯ ಪರಿಸ್ಥಿತಿ ಹದಗೆಡುತ್ತದೆಯಲ್ಲದೆ ಅಧಿಕ ಭಾರ ತುಂಬಿದ ಭಾರೀ ಸರಕು ಸಾಗಾಣೆ ವಾಹನಗಳು ದಿನನಿತ್ಯ ಸಂಚರಿಸುವುದರಿಂದ ರಸ್ತೆಯ ಬದಿಗಳ ಮಣ್ಣು ಭೂಕುಸಿತದಿಂದಾಗಿ ರಸ್ತೆಯ ಮೇಲೆ ಮಣ್ಣು ಬಿದ್ದು, ರಸ್ತೆ ಸಂಚಾರಕ್ಕೆ ತೊಂದರೆಯಾಗಿ ಸಾಕಷ್ಟು ಅಪಘಾತಗಳಿಗೆ ಕಾರಣವಾಗುತ್ತಿರುತ್ತದೆ. ಆದ್ದರಿಂದ ಕರ್ನಾಟಕ ಪೊಲೀಸ್ ಕಾಯ್ದೆ, ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಆಕ್ಟ್, ಮೋಟಾರು ವಾಹನಗಳ ಕಾಯ್ದೆ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮಗಳ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಪ್ರಕಾರ ಸ್ಥಳೀಯರ, ವಾಹನ ಸವಾರರ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಕೊಡಗು ಜಿಲ್ಲೆಯಾದ್ಯಂತ ಜೂನ್, 10 ರಿಂದ ಜುಲೈ, 09 ರವರೆಗೆ ವಾಹನ ಸಂಚಾರ ವ್ಯವಸ್ಥೆ ನಿರ್ವಹಿಸಲು ಜಿಲ್ಲಾ ದಂಡಾಧಿಕಾರಿ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಎಲ್ಲಾ ರೀತಿಯ ಮರದ ದಿಮ್ಮಿ ಮತ್ತು ಮರಳು ಸಾಗಾಣಿಕೆ ವಾಹನಗಳು, ವಾಹನದ ನೋಂದಣಿ ತೂಕ 18,500 ಕೆ.ಜಿ.ಗಿಂತ ಹೆಚ್ಚಿನ ಸರಕು ಸಾಗಾಣೆ ಮಾಡುವ ಸರಕು ಸಾಗಾಣಿಕೆ ವಾಹನಗಳು, ಭಾರೀ ವಾಹನಗಳಾದ ಬುಲೆಟ್ ಟ್ಯಾಂಕರ್, ಶಿಪ್ ಕಾರ್ಗೋ ಕಂಟೈನರ್ಸ್, ಲಾಂಗ್ ಚಾಸಿಸ್ (ಮಲ್ಟಿ ಆಕ್ಸಿಲ್) ವಾಹನಗಳು/ ಆರ್ಟಿಕ್ಯೂಲೇಟೆಡ್ ವಾಹನಗಳ ಸಂಚಾರವನ್ನು ನಿಷೆಧಿಸಿದೆ.

## ಯೋಗ ದಿನಾಚರಣೆಯ ಅಗತ್ಯ ಸಿದ್ಧತೆಗೆ ಸೂಚನೆ

• ಉದಯವಾಹಿನಿ ಧಾರವಾಡ

ನಗರದ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜೂನ್ 21 ರಂದು ಬೆಳಿಗ್ಗೆ 6.45 ಗಂಟೆಗೆ 12 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಯೋಜಿಸಲಾಗುವುದು. ಒಂದು ಸಾವಿರ ಯೋಗಾಪಟುಗಳು ಭಾಗವಹಿಸುವರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಸಲಾಗುವುದು. ಇದಕ್ಕೆ ಬೇಕಾದ ಸಿದ್ಧತೆಯನ್ನು ಅಧಿಕಾರಿಗಳು ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ನಿರ್ದೇಶಿಸಿದರು. ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.


ಮೂಲಸೌಕರ್ಯಗಳನ್ನು ಒದಗಿಸಬೇಕು. ಮಹಾನಗರ ಪಾಲಿಕೆಯಿಂದ ಸ್ವಚ್ಛತೆ ಹಾಗೂ ನೀರಿನ ವ್ಯವಸ್ಥೆ ಹಾಗೂ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅವರು ತಿಳಿಸಿದರು.

## ಅಲ್ಲಮಪ್ರಭು ಪಾಟೀಲ ಜನಪರ ಕೆಲಸಗಾರರು: ಸಿದ್ದರಾಮ ಶಿವಾಚಾರ್ಯರು

• ಉದಯವಾಹಿನಿ, ಕಲಬುರಗಿ

ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ಜನಪರ ಕೆಲಸಗಾರರು, ಅನುಭವಿಗಳು, ತನ್ನ ದಶಕಗಳ ರಾಜಕೀಯದಲ್ಲಿ ಸದಾಕಾಲ ಜನಸೇವೆ ಮಾಡುತ್ತಿದ್ದಾರೆ. ಇಂತಹವರು ಡಿಕೆಶಿ ಸರ್ಕಾರದಲ್ಲಿ ಮಂತ್ರಿಗಳಾಗಬೇಕು. ಇದಕ್ಕಾಗಿ ನಾವು ಕಾಂಗ್ರೆಸ್ ಹೈಕಮಾಂಡ್, ಸಿಎಂ ಬಳಿ ನಿಯೋಗ ಹೋಗಬೇಕು ಎಂದು ಚಿಣಮಗೇರಿ ಸಿದ್ದರಾಮ ಶಿವಾಚಾರ್ಯರು ಹೇಳಿದ್ದಾರೆ.

ಮೇಳಕುಂದ ಬಿ ಗ್ರಾಮದಲ್ಲಿ 2025-26ನೇ ಸಾಲಿನ ''ಮುಖ್ಯಮಂತ್ರಿಗಳ ಮೂಲಸೌಕರ್ಯ ಯೋಜನೆ ಅಡಿಯಲ್ಲಿ ಶ್ರೀ ಸಿದ್ದಯ್ಯಪ್ಪ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ನಂತರ ಅವರು ಮಾತನಾಡಿದರು.ಎಲ್ಲರಿಗೂ ಅಧಿಕಾರ ಬೇಕು,


ಉದಯವಾಹಿನಿ ಚಿತ್ರ

ಹೊಸಬರು ಮಂತ್ರಿಯಾಗಬೇಕು.

ಇದರಿಂದ ಹೆಚ್ಚಿನ ಜನಸೇವೆಯಾಗುತ್ತದೆ. ಅಲ್ಲಂಪ್ರಭು ಪಾಟೀಲರು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಸಿರಿವಂತರಾಗಿರುವ ರಾಜಕಾರಣಿಯಾಗಿದ್ದಾರೆ. ಅವರನ್ನು ತುಂಬ ವರ್ಷದಿಂದ ಬಲ್ಲೆ. ಇಂಥವರು ಮಂತ್ರಿಯಾದಲ್ಲಿ ಹೆಚ್ಚಿನ ಜನರ ಕೆಲಸಗಳಾಗುತ್ತವೆ, ಧಾರ್ಮಿಕವಾಗಿಯೂ ಮಠ, ಮಂದಿರಗಳನ್ನು ಅವರು ಪೊಷಿಸುತ್ತಾರೆಂದರು. ಸಭೆಯಲ್ಲಿ ಮಾತನಾಡಿದ ಪಾಳಾದ ಕಟ್ಟಿಮನಿ ಹಿರೇಮಠದ ಡಾ. ಗುರುಮೂರ್ತಿ ಶಿವಾಚಾರ್ಯರು ಕೂಡಾ ಅಲ್ಲಂಪ್ರಬು ಪಾಟೀಲರಿಗೆ ಮಂತ್ರಿಗಿರಿ ಸಿಗಬೇಕು. ನೂತನ ಸರ್ಕಾರದಲ್ಲಿ ಇವರಿಗೆ ಮಂತ್ರಿಯಾಗಿಸುವ ಬಗ್ಗೆ ಸ್ವಿಮಜಿಗಳು ಪಕ್ಷದ ಉನ್ನತ ಹಂತದಲ್ಲಿ ಆಗ್ರಹಿಸಲು ಇದು ಸಕಾಲವೆಂದರು. ಮೇಳಕುಂದಾ ಗ್ರಾಮದಲ್ಲಿ ಭೋಗಲಿಂಗೇಶ್ವರ ಮಂದಿರ ಜೀರ್ಣೋದ್ದಾರಕ್ಕೆ ಅಲ್ಲಂಪ್ರಭು ಅವರ ಕೊಡುಗೆ ಅಪಾರವೆಂದರು.

> ವೇದಿಕೆಯಲ್ಲಿದ್ದ ಶಾಸಕ ಅಲ್ಲಂಪ್ರಭು ಪಾಟೀಲರನ್ನೇ ಉದ್ದೇಶಿಸಿ ನೀವು ಯಾವಾಗ ಕರೆದರು ನಾವು ನಿಮ್ಮೊಂದಿಗೆ ನಿಯೋಗದಲ್ಲಿ ಬರಲು ಸಿದ್ದ. ಸಿಎಂ. ಹೈಕಮಾಂಡ್ ಎಲ್ಲರಿಗೂ ಭೇಟಿಮಾಡಿ ನಿಮಗೆ ಮಂತ್ರಿಗಿರಿ ಯಾಕೆ ಕೊಡಬೋಕು ಎಂಬುದನ್ನು ನಾವು ತಿಳಿಸುತ್ತೇವೆಂದು ಹೇಳಿದರು.
> ಸಿದ್ದರಾಮಯ ಶಿವಾಚಾರ್ಯರು

## ರೇಷನ್ ಬಯೋಮೆಟ್ರೀಕ್‌ಕ್ಕೆ ಹಣ ಪಡೆದು, ಆಹಾರ ದಾನ್ಯಗಳು ಕಡಿಮೆ ವಿತರಿಸಿದರೆ ಅಂಥವರ ಲೈಸನ್ಸ್ ರದ್ದು

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ರೇಷನ್ ಅಂಗಡಿಗಳಲ್ಲಿ ರೇಷನ್ ವಿತರಕರು ಬಡಜನರ ಹತ್ತಿರ ಬಯೋಮೆಟ್ರೀಕ್ ಪಡೆಯಲು 10ಮತ್ತು 20ರೂಪಾಯಿ ಪಡೆದುಕೋಳ್ಳುತ್ತಿರುವುದು ಮತ್ತು ಒಂದೆರಡು ಕಿಲೋ ಆಹಾರ ದಾನ್ಯಗಳು ಕಡಿಮೆ ವಿತರಣೆ ಮಾಡುತ್ತಿರುವುದು ಅನೇಕ ದೂರುಗಳು ಬರುತ್ತಿವೆ ಇದನ್ನು ಇಲ್ಲಿಗೆ ನಿಲ್ಲಿಸಿ ಇಲ್ಲಾದಿದ್ದರೆ ತನಿಖೆ ನಡೆಸಿ ರಾಷನ್ ವಿತರಕರ ಅಂಗಡಿ ಪರವಾನಿಗೆ ಅಮಾನತ್ತು ಮಾಡಲಾಗುವುದು ಎಂದು ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಖಡಕ್ಕಾಗಿ ಎಚ್ಚರಿಕೆ ನೀಡಿದರು.

ಪಟ್ಟಣದ ಚಂದಾಪೂರದ ತಾಪಂ.ಕಾರ್ಯಾಲಯದ ಸಭಾಂಗಣದಲ್ಲಿ ತಾಲ್ಲೂಕಾ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ವತಿಯಿಂದ ಸಾರ್ವಜನಿಕರ ರಾಷನ್ ಸಮಸ್ಯೆಗಳಿಗೆ ಪರಿಹರಿಸಲು ಹಮ್ಮಿಕೊಂಡ ರಾಷನ್ ವಿತರಕರ (ಡೀಲರ್) ಸಭೆಯಲ್ಲಿ ಮಾತನಾಡಿದ ಅವರು, ಅಕ್ರಮವಾಗಿ ರಾಷನ್ ಅಕ್ಕಿಯನ್ನು ಮರಾಟ ಮಾಡುತ್ತಿದ್ದರೆ ಖರೀದಿಸಿಕೋಳ್ಳುತ್ತಿದರೆ ಅಂಥವರ ಹೇಸರು ಅಥವಾ ವಾಹನ ನಂಬರ್ ನಮಗೆ ಮಾಹಿತಿ ನೀಡಿ ಅಂಥವರ ವಿರುದ್ಧ ಕಾನೂನುಕ್ರಮ ಕೈಗೋಳ್ಳಲಾಗುವುದು ಮಹಿತಿ ನೀಡಿದವರ ಹೆಸರು ಗೌಪ್ಯವಾಗಿ ಇಡಲಾಗುವುದು ಎಂದರು.ಸಭೆಯ ಅಧ್ಯಕ್ಷತೆ ವಹಿಸಿದ ಪಂಚ ಗ್ಯಾರಂಟಿ ಯೋಜನೆ




ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ ಮತನಾಡಿ ಯಾವುದೇ ಕಾರಣಕ್ಕೂ ಬಡ ಜನರು ರಾಷನ್‌ಗೆ ಬಂದಾಗ ಅಲೆದಾಡಿಸದೆ ಸರ್ಕಾರದ ಸೌಲಭ್ಯ ವಿತರಿಸಿ,ಬಯೋಮೆಟ್ರೀಕ್ ಪಡೆದ ಕ್ಷಣವೇ ರಾಷನ್ ವಿತರಿಸಿ,ಅಂತರಾಜ್ಯದ ಪಡಿತರ ಚೀಟಿಗಳಿಗೂ ಸಹ ತಪ್ಪದೆ ರಾಷನ್ ಕೋಡಬೇಕು,ಅಜ್ಜಿ,ಅಜ್ಜಂದಿರರ ಬಯೋಮೆಟ್ರೀಕ್ ಬರದಿದ್ದರೆ ಅಂಥವರ ಪಟ್ಟಿ ಮಾಡಿ ತಹಸೀಲ್ದಾರ ಅವರಿಗೆ ನೀಡಿದರೆ ಅಂಥವರಿಗೂ ರಾಷನ್ ವಿತರಿಸಲು ಆದೇಶ ಮಾಡುತ್ತಾರೆ ಎಂದರು.

ತಾಪಂ.ಇಒ ಸಂತೋಷ ಚವ್ಹಾಣ ಮಾತನಾಡಿ ಸರ್ಕಾರದ ಆದೇಶದಂತೆ ರೇಷನ್ ವಿತರಕರು ತಿಂಗಳ ಒಂದನೇ ದಿನಾಂಕದಿಂದ 30ನೇ ದಿನಾಂಕದವರೆಗೆ ಅಂಗಡಿ ಒಪನ್ ಇಡಬೇಕು,ರಾಷನ್ ತೆಗೆದುಕೋಳ್ಳಲು ಬರುವ ಸಾರ್ವಜನಿಕರ ಜೋತೆ ಸೌಜನ್ಯದಿಂದ ಮಾತನಾಡಿ,ಸಮಯಕ್ಕೆ ರಾಷನ್ ವಿತರಿಸಿ,ಜನರಿಂದ ಹಣ ಪಡೆಯಬಾರದು ಎಂದರು.ಆಹಾರ ನೀರಿಕ್ಷಕ ವೀರೇಂದ್ರ ಓತಗಿ,ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಅಬ್ದುಲ್ ಬಾಷೀದ್,ಲಕ್ಷ್ಮಣ ಆವುಂಟಿ,ವಿಜಯಕುಮಾರ ಘಾಟಗೆ,ಶಾಂತಕುಮಾರ,ಅರವೀಂದರೆಡ್ಡಿ,ಗೋವಿಂದಪ್ಪ,ಜನಾರ್ಧನ ಪಾಟೀಲ್,ಮತ್ತು ರುದ್ರಶೇಟ್ಟಿ ಪಡಶೇಟ್ಟಿ,ಶಿವಶರಣಪ್ಪ ಪಾಟೀಲ್,ಉಮಾಪಾಟೀಲ್,ಗುರುಪಟೀಲ್,ಸಂಗಮೇಶ ಶಾಧಿಪೂರ,ದೀಪಕ್,ಪಾಂಡು,ಅಶೋಕ,ಜಾಲೇಂದ್ರ, ಅನೇಕರಿದ್ದರು.

> ನವಿಕರಣ ಆಗದೆ ಇರುವ ರಾಷನ್ ಅಂಗಡಿಗಳ ಪರವಾನಿಗೆ ನವೀಕರಣಗೋಳಿಸಿ, ಯಾರಿಗೆ ಎರಡು ಮತ್ತು ಮೂರ್ನಾಲ್ಕು ಅಂಗಡಿ ರಾಷನ್ ವಿತರಣೆ ಹಂಚಿಕೆ ಮಾಡಲು ಪರವಾನಿಗೆ ನೀಡಲಾಗಿದ್ದು ಅಂಥವರ ಪಟ್ಟಿ ಮಾಡಿ ಒಂದು ಅಂಗಡಿಗೆ ಒಬ್ಬರಿಗೆ ಜವಾಬ್ದಾರಿ ನೀಡಲು ಮಾಡಿ ಇಲ್ಲಾದಿದ್ದರೆ ಆ ಪಟ್ಟಿ ಕೋಡಿ ಜಿಲ್ಲೇಯ ಸಭೆಯಲ್ಲಿ ಸಿಇಒ ಜೋತೆ ಚರ್ಚಿಸಿ ಒಂದು ಅಂಗಡಿ ಒಬ್ಬರಿಗೆ ನೀಡಲಾಗುವುದು.
> :- ಬಸವರಾಜ ಮಾಲಿ
> ಅಧ್ಯಕ್ಷರು,ತಾಲ್ಲೂಕಾ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಚಿಂಚೋಳಿ.

## ಮಾವಿನ ದರ ಕುಸಿತದಿಂದ ಬೆಳೆಗಾರರು ಸಂಕಷ್ಟಕ್ಕೆ



• ಉದಯವಾಹಿನಿ ವಿಜಯಪುರ

ಮಾವಿನ ಇಳುವರಿ ಹಾಗೂ ದರ ಕುಸಿತದಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೋಬಳಿಯಲ್ಲಿ ನೂರಾರು ಎಕರೆಯಲ್ಲಿ ಮಾವು ಬೆಳೆದಿದ್ದಾರೆ. ಸದ್ಯ ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಬೇಡಿಕೆ ಕುಸಿದಿರುವುದರಿಂದ ವರ್ತಕರು ಮಾವು ಖರೀದಿಗೆ ಹಿಂದೇಟು ಹಾಕಿದ್ದಾರೆ.

ಪಟ್ಟಣದ ಪ್ರಮುಖ ರಸ್ತೆಗಳ ಬದಿಗಳಲ್ಲಿ ಚಿಲ್ಲರೆ ವರ್ತಕರು ರಾಶಿ ಹಾಕಿಕೊಂಡು ಮಾವಿನ ಹಣ್ಣು ಮಾರಾಟ ಮಾಡುತ್ತಿದ್ದಾರೆ. ಮಂಡಿಗಳಲ್ಲಿ ವರ್ತಕರಿಂದ ಹಾಗೂ ಬೆಳೆಗಾರರಿಂದ ಮಾವು ಖರೀದಿಸುತ್ತಿರುವ ಚಿಲ್ಲರೆ ವರ್ತಕರು 100ಕ್ಕೆ 2ರಿಂದ 3 ಕೆ.ಜಿ ಯಂತೆ ಮಾರಾಟ ಮಾಡುತ್ತಿದ್ದಾರೆ.

ಸದ್ಯ ಮಾರುಕಟ್ಟೆಯಲ್ಲಿ ರಸಪುರಿ ಕೆ.ಜಿ.ಗೆ 50, ತೋತಾಪುರಿ 30, ಬಾದಾಮಿ, ಮಲ್ಲಿಕಾ, ರಾಜಗಿರ್ 100ಕ್ಕೆ ಎರಡು ಕೆ.ಜಿ.ಯಂತೆ ಮಾರಾಟ ಮಾಡಲಾಗುತ್ತಿದೆ.

# ತಾಲ್ಲೂಕಿನಾದ್ಯಂತ ಮಳೆ ಬಿದ್ದಿರುವುದರಿಂದ ರೈತರ ಮೊಗದಲ್ಲಿ ಮಂದಹಾಸ

### ಬಿತ್ತನೆಗೆ ಮಿರುಗು ಮಳೆ ಆಗಮನದಿಂದ ಮುಂದಾದ ರೈತರು: ಹೊಲಕ್ಕಿಳಿದ ರೈತ; ಸಾಥ್ ನೀಡಿದ ಜಾನುವಾರುಗಳು

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನಲ್ಲಿ ಮಿರುಗು ಮಳೆ ಬಂದಿರುವುದರಿಂದ ರೈತರು ಭರ್ಜರಿಯಾಗಿ ಬಿತ್ತನೆಯಲ್ಲಿ ತೊಡಗಿದ್ದಾರೆ,ತಾಲ್ಲೂಕಿನಲ್ಲಿ ವಿವಿಧ ಕಡೆ ಮಳೆ ಬಿದ್ದಿರುವುದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.ಮಿರುಗು ಮಳೆ ಸುರಿಯುತ್ತಿರುವುದರಿಂದ ರೈತರು ಬಿತ್ತನೆ ಬೀಜ ರಸಗೋಬ್ಬರಕ್ಕೆ ಸರದಿಯಲ್ಲಿ ನಿಂತುಕೋಂಡು ಖರೀದಿ ಮಾಡುತ್ತಿದ್ದಾರೆ.

ತಾಲ್ಲೂಕಿನಾದ್ಯಂತ ರೈತರು ಹೊಲಗದ್ದೆಗಳಿಗೆ ತೆರಳಿ ಟ್ರ್ಯಾಕ್ಟರ್ ಯಂತ್ರ,ಕುಂಟಿ,ಕೂರಿಗಿ ದಿಡ್ಡಿನಿಂದ ರೈತರು ಬಿತ್ತನೆಯಲ್ಲಿ ತೊಡಗಿದ್ದಾರೆ,ತಾಲ್ಲೂಕಿನಲ್ಲಿ ಜೂನ್ 7ರಿಂದ ಕೆಲಕಡೆ ಮಿರುಗು ಮಳೆ ಪ್ರಾರಂಭವಾಗಿದೆ ಹಲವು ಕಡೆ ಇನ್ನು ಸಮರ್ಪವಾಗಿ ವಾಡಿಕೆಯಂತೆ ಮಳೆಯಾಗಿಲ್ಲ,ಭೂಮಿಯ ತೇವಾಂಶ ನೋಡಿ ಬಿತ್ತನೆ ರೈತರು ಮುಂದಾಗಬೇಕು ಒಣ ಭೂಮಿಯಲ್ಲಿ ಬಿತ್ತನೆ ಮಾಡಿದರೆ ಬೀಜ ನಾಟುವುದು ತುಂಬಾ ಕಷ್ಟಕರವಾಗಿದೆ.ಕೆಲವೂಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾತ್ರ ಮಳೆಯಾಗಿದೆ ಇನ್ನು ಅನೇಕ ಕಡೆ ಜಮೀನಿಗೆ ಬೇಕಾಗುವಷ್ಟು ಮಳೆಯಾಗಿಲ್ಲ,ಇನ್ನಷ್ಟು ಮಳೆಯಾದರೆ ಮಾತ್ರ ಬಿತ್ತನೆ ಮಾಡುತ್ತೇವೆ,ರಸಗೋಬ್ಬರ ಕೆಲ ಅಂಗಡಿಯವರು ಹಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದು ಅದಿಕಾರಿಗಳು ಕಡಿವಾಣ ಹಾಕಬೇಕು ಎಂದು ರೈತ ಮುಖಂಡ ಮಲ್ಲಿಕಾರ್ಜುನ ಕೋಡದೂರ ಉದಯವಾಹಿನಿ ಗೆ ತಿಳಿಸಿದ್ದಾರೆ.





> ಚಿಂಚೋಳಿ-ಕಾಳಗಿ ತಾಲ್ಲೂಕಿನ ಜಮೀನುಗಳು ರೇಗಡಿ ಮಣ್ಣು ಇರುವುದರಿಂದ ಈಗ ಬಿದ್ದಷ್ಟು ಮಳೆ ನಮ್ಮ ಭೂಮಿಗಳಿಗೆ ಸಾಕಾಗುವುದಿಲ್ಲ,ಕೃಷಿ ತಜ್ಞರ ಪ್ರಕಾರ ಮಳೆ ಹೆಚ್ಚಿನ ಮಟ್ಟದಲ್ಲಿ ಬರಬಹುದು ಎಂಬ ನಿರೀಕ್ಷೆ ಇಟ್ಟುಕೊಂಡು ರೈತರು ಬಿತ್ತನೆಗೆ ಮುಂದಾಗಿದ್ದಾರೆ,ಮಳೆ ಬಂದರೆ ಉತ್ತಮ ಬೆಳೆಗಳು ಬೆಳೆಸಲು ಸಾದ್ಯವಾಗುತ್ತದೆ,ಕೃಷಿ ಇಲಾಖೆಯು ಬೀಜ ರಸಗೋಬ್ಬರ ಮತ್ತು ಕೃಷಿ ಸಲಕರಣೆಗಳು ವಿತರಣೆಗೆ ಮತಕ್ಷೇತ್ರದ 40ಕ್ಕೂ ಹೆಚ್ಚು ಕೃಷಿ ಸಹಕಾರ ಸಂಘಗಳಿವೆ ಅದರ ಮೂಲಕ ರಸಗೋಬ್ಬರ ಬೀಜ ವಿತರಿಸಿದರೆ ರೈತರಿಗೆ ಸಮಯ ಉಳಿಯುತ್ತೆ,ಬೀಜ ಬೇಗ ಸಿಗುತ್ತೆ,ಬಿತ್ತನೆ ಶೀಘ್ರ ಆಗುತ್ತೆ,ರೈತರಿಗೆ ಅನುಕೂಲವಾಗುತ್ತದೆ,:- ವೀರಣ್ಣ ಗಂಗಾಣಿ
> ಅಧ್ಯಕ್ಷರು,ಕರ್ನಾಟಕ ರಾಜ್ಯ ರೈತ ಸಂಘ ಮತ್ತು ರೈತ ಸೇನೆ



> ತಾಲ್ಲೂಕಿನ ಕುಂಚಾವರಂ, ರಡಕಲ್,ಐನಾಪೂರ ವಲಯಗಳಲ್ಲಿ ಮಾತ್ರ ಬಿತ್ತನೆ ಮಾಡಬಹುದು ಮಳೆಯಾಗಿದೆ.
> ಉಳಿದ ಕಡೆ ಇನ್ನು ಬಿತ್ತನೆ ಮಾಡುವಷ್ಟು ಮಳೆ ಬಂದಿರುವುದಿಲ್ಲ ಭೂಮಿಯಲ್ಲಿ ತೇವಾಂಶ ಇದ್ದರೆ ಮಾತ್ರ ಬಿತ್ತನೆ ಮಾಡಿ ಇಲ್ಲದಿದ್ದರೆ ಬೇಡ, ತಾಲ್ಲೂಕಿನಾದ್ಯಂತ ವರ್ಷದ ವಾಡಿಕೆಯಂತೆ ಮಳೆ 90 ಮಿಮೀ ಮಳೆಯಾಗಬೇಕು ಆದರೆ ಈಗ ಮಳೆಯಾಗಿದ್ದು ಕೇವಲ 17 ಮಿಮೀ ಮಾತ್ರ, 73 ಮಿಮೀ ಮಳೆಯ ಕೊರತೆಯಿದೆ. ಜಮೀನುಗಳಲ್ಲಿ ತೇವಾಂಶವಿದ್ದರೆ ಮಾತ್ರ ಬಿತ್ತನೆ ಮಾಡಿ ಇಲ್ಲಾದಿದ್ದರೆ ಬಿತ್ತನೆ ಮಾಡಬಾರದು.
> :- ವೀರಶೆಟ್ಟಿ ರಾಠೋಡ್
> ಸಹಾಯಕ ಕೃಷಿ ನಿರ್ದೇಶಕರು ಚಿಂಚೋಳಿ.

## ಮಿನಿ ನ್ಯೂಸ್

## ಭದ್ರಾವತಿಯಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ

• ಉದಯವಾಹಿನಿ,ಭದ್ರಾವತಿ

ನಗರದ ಚನ್ನಗಿರಿ (ಸಿ.ಎನ್) ರಸ್ತೆಯಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆ ನೇತೃತ್ವದಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ನಡೆದಿದ್ದು, ಮಾಲೀಕರು ರಸ್ತೆಯ ಅಕ್ಕಪಕ್ಕದಲ್ಲಿನ ಕಟ್ಟಡಗಳ ತೆರವು ಕಾರ್ಯ ಆರಂಭಿಸಿದ್ದಾರೆ. ರಸ್ತೆ ವಿಸ್ತರಣೆಗೆಂದು ಗುರುತು ಮಾಡಿರುವ ಅಳತೆಯವರೆಗೆ ಕಟ್ಟಡಗಳನ್ನು ತೆರವು ಮಾಡಲಾಗುತ್ತಿದೆ. ಕೆಲವು ಹಳೆಯ ಕಟ್ಟಡಗಳನ್ನು ಸಂಪೂರ್ಣವಾಗಿ ನೆಲಸಮಗೊಳಿಸಿದರೆ, ಕೆಲವು ಕಟ್ಟಡಗಳ ಮಾಲೀಕರು ತಮ್ಮ ಅಂಗಡಿಯ ಮುಂಭಾಗದಲ್ಲಿ ವಿಸ್ತರಣೆ ಮಾಡಲು ಗುರುತು ಹಾಕಿರುವ ಅಳತೆಯವರೆಗೆ ಗೋಡೆ ನೆಲಸಮಗೊಳಿಸಿ ಮಿಕ್ಕ ಜಾಗದಲ್ಲಿ ವ್ಯಾಪಾರ ಮುಂದುವರೆಸಿದ್ದಾರೆ.

## ಕಸಗುಡಿಸುವಂತೆ ಹೆಡ್ ಮಾಸ್ಟರ್ ಕಿರುಕುಳ

• ಉದಯವಾಹಿನಿ, ಬೀದರ್

ಮುಖ್ಯ ಶಿಕ್ಷಕರ ಕಿರುಕುಳಕ್ಕೆ ಬೇಸತ್ತು ಶಾಲೆಯ 4ನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೀದರ್‌ನ ಪ್ರತಾಪ್ ನಗರದ ಬಳಿ ನಡೆದಿದೆ. ಶಾಂತಿನಗರದ ನಿವಾಸಿ ಸಮೀರ್(15) ಮೃತ ಬಾಲಕನಾಗಿದ್ದು, ಶಾಲೆಯಲ್ಲಿ ಈತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ಬೆಳಗ್ಗೆ ಸ್ಕೂಲ್‌ಗೆ ಹೋಗಿ ನಾಲ್ಕನೇ ಮಹಡಿಯಿಂದ ಹಾರಿ ಸಾವನ್ನಪ್ಪಿದ್ದಾನೆ. ಆತ್ಮಹತ್ಯೆ ಮಾಡಿಕೊಂಡ ವಿಷಯವನ್ನು ಪೋಷಕರಿಗೆ ಹೇಳದೇ ವಿದ್ಯಾರ್ಥಿಯ ಮೃತದೇಹವನ್ನು ಶಾಲೆಯ ಆಡಳಿತ ಮಂಡಳಿ ಬ್ರಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದಾರೆ. ಹೇಳದೇ ಕೇಳದೇ ಆಸ್ಪತ್ರೆಗೆ ರವಾನಿಸಿರುವುದು ಹಲವು ಅನುಮಾನಕ್ಕೆ ಕಾರಣವಾಗಿದೆ. ಈ ಕುರಿತು ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

1ನೇ ತರಗತಿಯಿಂದಲೂ ಇದೇ ಶಾಲೆಯಲ್ಲಿ ಓದುತ್ತಿದ್ದ. ಹೆಚ್ಚಿನ ಅಂಕ ತೆಗೆದುಕೊಳ್ಳಬೇಕು, ಶಾಲೆಯಲ್ಲಿ ಕಸ ಗೂಡಿಸುವ ಕೆಲಸ ಮಾಡಬೇಕು ಎಂದು ಮುಖ್ಯ ಶಿಕ್ಷಕರು ಕಿರುಕುಳ ನೀಡಿದ್ದಾರೆ. ಹೀಗಾಗಿ ಕಿರುಕುಳದಿಂದ ಬೇಸತ್ತು ಸಾವನ್ನಪ್ಪಿದ್ದಾನೆಂದು ಮೃತ ವಿದ್ಯಾರ್ಥಿಯ ಪೋಷಕರು ಆರೋಪಿಸಿದ್ದಾರೆ.

ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕರು ಈ ಆರೋಪಗಳನ್ನು ಸಂಪೂರ್ಣವಾಗಿ ತಳ್ಳಿ ಹಾಕಿದ್ದಾರೆ. ನಾವು ಬಾಲಕನಿಗೆ ಕೇವಲ ಓದುವಂತೆ ಹೇಳಿದ್ದೇವೆಯೇ ಹೊರತು ಯಾವುದೇ ರೀತಿಯ ಕಿರುಕುಳ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲಾ ಇಲಾಖೆ ಸಹಕರಿಸಿದಲ್ಲಿ ಸಾಧ್ಯ

• ಉದಯವಾಹಿನಿ ಬೀದರ್

ಬೀದರ ಜಿಲ್ಲೆಯಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಹಿನ್ನಲೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಎಲ್ಲಾ ಇಲಾಖೆ ಸಹಕಾರದಿಂದ ಈ ಅನಿಷ್ಟ ಪದ್ದತಿಯನ್ನು ನಿರ್ಮೂಲನೆಗೊಳಿಸಲು ಸಾಧ್ಯ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಹೇಳಿದರು. ಬೀದರ ನಗರದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯ ಜಿಲ್ಲಾ ಟಾಸ್ಕ್ ಫೋರ್ಸ್ ಸಲಹಾ ಸಮಿತಿ ಸಭೆಯ ಅಧ್ಯಕ್ಷರು ಮಾತನಾಡಿದರು.

ಪ್ರತಿ ವರ್ಷದಂತೆ ವರ್ಷವೂ ಜೂನ್ 12 ರಂದು ಬಾಲಕಾರ್ಮಿಕ ವಿರೋಧಿ ದಿನಾಚರಣೆಯನ್ನು ಬೀದರ ಜಿಲ್ಲಾಡಳಿತ ಬೀದರ ಜಿಲ್ಲಾ ನ್ಯಾಯಾಲಯ ಜಾಥಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಜಾಥಾ ಕಾರ್ಯಕ್ರಮವು ತಹಶೀಲ್ ಕಛೇರಿ, ಬಸವೇಶ್ವರ ಚೌಕ, ಅಂಬೇಡ್ಕರ್ ವೃತ್ತದಿಂದ ರೋಟ್ರಿಕ್ ಕ್ಲಬ್ ವೃತ್ತದ ಮೂಲಕ ವೃತ್ತದ ಮೂಲಕ ಜರುಗಿಸಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಸೂಚಿಸಿದರು.

ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಕಾನೂನು ಸೇವ ಪ್ರಾಧಿಕಾರ ಅಧ್ಯಕ್ಷರು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ರಾಘವೇಂದ್ರ, ಜಿಲ್ಲಾಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಖಾಸಗಿ ಬಸ್ ಪ್ರಯಾಣ ದರ ಏರಿಕೆಗೆ ಖಂಡನೆ

• ಉದಯವಾಹಿನಿ ಉಡುಪಿ

'ಖಾಸಗಿ ಬಸ್ ಮಾಲೀಕರು ಪೆಟ್ರೋಲ್ ಡೀಸೆಲ್ ದರ ಹೆಚ್ಚಳದ ವಿಷಯ ಇಟ್ಟುಕೊಂಡು ಸಾರಿಗೆ ಪ್ರಾಧಿಕಾರ, ಜಿಲ್ಲಾಡಳಿತದ ಗಮನಕ್ಕೆ ತಾರದೆ ಏಕಾಏಕಿ ಶೇ 5 ರಿಂದ ಶೇ 8ರಷ್ಟು ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ' ಎಂದು ಸಿಐಟಿಯು ಉಡುಪಿ ವಲಯ ಸಮಿತಿ ಸಂಚಾಲಕ ಕವಿರಾಜ್ ಎಸ್.ಕಾಂಚನ್ ಹೇಳಿದ್ದಾರೆ.

'ಜಿಲ್ಲಾಧಿಕಾರಿ ಸಾರಿಗೆ ಪ್ರಾಧಿಕಾರದ ಸಭೆ ಕರೆದು ಎಲ್ಲಾ ಸಂಘ, ಸಂಸ್ಥೆಗಳು, ಸಾರ್ವಜನಿಕರು, ಬಸ್ ಮಾಲೀಕರ ಜೊತೆ ಚರ್ಚಿಸಿ ನಂತರ ಪ್ರಯಾಣ ದರ ಏರಿಕೆ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಆದರೆ ಖಾಸಗಿ ಬಸ್ ಮಾಲೀಕರು ಜಿಲ್ಲಾಡಳಿತದ ಗಮನಕ್ಕೆ ತಾರದೆ ದರ ಏರಿಕೆ ಮಾಡಿದ್ದಾರೆ. ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ದರ ಏರಿಕೆಯನ್ನು ನಿಲ್ಲಿಸಬೇಕು' ಎಂದು ಅವರು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

'ಪೆಟ್ರೋಲ್, ಡೀಸೆಲ್ ದರವನ್ನು ಕೇಂದ್ರ ಸರ್ಕಾರ ಹೆಚ್ಚಳ ಮಾಡಿದ್ದು, ದರ ಇಳಿಕೆ ಮಾಡಲು ಬಸ್ ಮಾಲೀಕರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಅದು ಬಿಟ್ಟು ಕಾರ್ಮಿಕರು, ಸಾರ್ವಜನಿಕರು, ವಿದ್ಯಾರ್ಥಿಗಳ ಮೇಲೆ ಹೊರೆ ಹಾಕುವುದು ನ್ಯಾಯಸಮ್ಮತವಲ್ಲ' ಎಂದಿದ್ದಾರೆ. 'ಜಿಲ್ಲಾಡಳಿತವು ಬಸ್ ಮಾಲೀಕರ ವಿರುದ್ಧ ಸೂಕ್ತ ಕ್ರಮ ವಹಿಸಬೇಕು ಹಾಗೂ ವಿದ್ಯಾರ್ಥಿಗಳ, ಕಾರ್ಮಿಕರ, ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲಾ ಗ್ರಾಮಗಳಿಗೆ ಸರ್ಕಾರಿ ಬಸ್ ಹಾಕಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

## ಪುರಾತನ ಜೈನ ತೀರ್ಥಂಕರರ ವಿಗ್ರಹ ಪತ್ತೆ

• ಉದಯವಾಹಿನಿ ರಿಪ್ಪನ್‌ಪೇಟೆ

ಸಮೀಪದ ಗವಟೂರು ಗ್ರಾಮದ ತಾವರೆಕೆರೆಯಲ್ಲಿ ಹೂಳೆತ್ತುವ ವೇಳೆ ಜೈನ ಮತಕ್ಕೆ ಸೇರಿದ ಪುರಾತನ ಜೈನ ತೀರ್ಥಂಕರರ ವಿಗ್ರಹ ಹಾಗೂ ಪೀಠದ ಕುರುಹುಗಳು ಪತ್ತೆಯಾಗಿವೆ.ಹಿಟಾಚಿ ಯಂತ್ರದ ಮೂಲಕ ಹೂಳೆತ್ತುವ ವೇಳೆ ಭೂಮಿಯ ಆಳದಲ್ಲಿ ದೊಡ್ಡ ಗಾತ್ರದ ಶಿಲಾಮೂರ್ತಿಗಳು ಕಾಣಿಸಿಕೊಂಡಿವೆ. ಸಿನಿಮಾ ಪಿಡಿಒ ಹಾಗೂ ಪುರಾತತ್ವ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು. ಇದು 11ರಿಂದ 12ನೇ ಶತಮಾನದ ತೀರ್ಥಂಕರರ ವಿಗ್ರಹ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಲಾಂಛನದಲ್ಲಿ ಸ್ಪಷ್ಟತೆ ಇಲ್ಲದಿರುವುದರಿಂದ ಇವು ಯಾವ ತೀರ್ಥಂಕರರಿಗೆ ಸೇರಿವೆ ಎಂದು ನಿಖರವಾಗಿ ತಿಳಿದು ಬಂದಿಲ್ಲ' ಎಂದು ಇತಿಹಾಸ ಸಂಶೋಧಕರು ಹೇಳಿದ್ದಾರೆ.

ಪದ್ಮಾಸನ ಭಂಗಿಯಲ್ಲಿ ಧ್ಯಾನಸ್ಥನಾಗಿ ಕುಳಿತಿರುವಂತಹ ವಿಗ್ರಹ ಪತ್ತೆಯಾಗಿದ್ದು, ಪೀಠವು ಪುಷ್ಪದ ಆಕೃತಿಯ ಸುಂದರ ಕೆತ್ತನೆಯಿಂದ ಕೂಡಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಕುಟುಂಬದ ಸದಸ್ಯರು ನಿಮ್ಮ ಅಭಿಪ್ರಾಯಗಳನ್ನು ಬೆಂಬಲಿಸುತ್ತಾರೆ.

**ವೃಷಭ** ಇದ್ದಕ್ಕಿದ್ದಂತೆ ಇಂದು ನೀವು ಕೆಲಸದಿಂದ ವಿರಾಮ ತೆಗೆದುಕೊಳ್ಳಲು ಯೋಜಿಸಬಹುದು ಮತ್ತು ನಿಮ್ಮ ಕುಟುಂಬದೊಂದಿಗೆ ಸಮಯವನ್ನು ಕಳೆಯಬಹುದು. ನಿಮ್ಮ ವೈವಾಹಿಕ ಜೀವನಕ್ಕೆ ಬಂದಾಗ ಪರಿಸ್ಥಿತಿಗಳು ನಿಜವಾಗಿಯೂ ಅಸಾಧಾರಣವಾಗಿರುತ್ತವೆ.

**ಮಿಥುನ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು, ಆದ್ದರಿಂದ ಇಂದು ನೀವು ನಿಮ್ಮ ವಸ್ತುವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು.

**ಕರ್ಕಟಕ** ಮನೆಯ ಚಿಂತೆಗಳು ನಿಮಗೆ ಉದ್ವೇಗ ತರಬಹುದು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.

**ಸಿಂಹ** ತಾತ್ಕಾಲಿಕವಾದ ಉದ್ವೇಗದಲ್ಲಿ ನಿರ್ಧಾರಕ್ಕೆಗೊಳ್ಳಬೇಡಿ ಇದು ನಿಮ್ಮ ಮಕ್ಕಳ ಹಿತಾಸಕ್ತಿಗೆ ಹಾನಿ ಮಾಡಬಹುದು. ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು. ಸಮಯಕ್ಕೆ ನೀವು ಜಾಗರೂಕರಾಗಿದ್ದರೆ ಅದು ನಿಮಗೆ ಉತ್ತಮವಾಗಿರುತ್ತದೆ.

**ಕನ್ಯಾ** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಮಟ್ಟದ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವೈಶಿಷ್ಟ್ಯವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ.

**ತುಲಾ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಹೂಡಿಕೆ ಮಾಡುವುದು ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು ಏಕೆಂದರೆ ಯಾವುದೇ ಹಳೆಯ ಹೂಡಿಕೆಯಿಂದ ನೀವು ಪ್ರಯೋಜನವನ್ನು ಪಡೆಯಬಹುದು

**ವೃಶ್ಚಿಕ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಕೆಲವು ಸಾಮಾಜಿಕ ಸಮಾರಂಭಗಳಿಗೆ ಹಾಜರಾಗಿ.

**ಧನಸ್ಸು** ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು. ಕೌಟುಂಬಿಕ ಕಾರ್ಯಗಳು ಮತ್ತು ಪ್ರಮುಖ ಸಮಾರಂಭಗಳಿಗೆ ಪವಿತ್ರವಾದ ದಿನ.

**ಮಕರ** ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ ಹಾಗೂ ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ಹಾಗೂ ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ

**ಕುಂಭ** ನಿಮ್ಮ ಆರೋಗ್ಯದ ಬಗ್ಗೆ ಎಚ್ಚರವಹಿಸಿ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪತೊಂದರೆಗೊಳಗಾಗಬಹುದು. ನಿಮ್ಮ ಸ್ವಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

**ಮೀನ** ನಿಮ್ಮ ಆರೋಗ್ಯ ಇಂದು ಪರಿಪೂರ್ಣವಾಗಿಲ್ಲದಿದ್ದರಿಂದ ನೀವು ನಿಮ್ಮ ಕೆಲಸದ ಮೇಲೆ ಗಮನ ಕೊಡುವುದು ಕಷ್ಟವಾಗಬಹುದು. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು ಮತ್ತು ಹಣವನ್ನು ಉಳಿಸಬೇಕು.

# ಬೀದರ್ ಮಾರುಕಟ್ಟೆಗೆ ಲಗ್ಗೆಯಿಟ್ಟ ಕಡು ನೀಲಿ ಸುಂದರಿ.!

## ಮಧುಮೇಹಿಗಳಿಗೆ ಬಲು ಪ್ರೀತಿ; ಕೆಜಿ ನೇರಳೆ ಹಣ್ಣು 150 ರೂ.ನಿಂದ 250 ರೂ.ವರೆಗೆ ಮಾರಾಟ

• ಪರಮೇಶ.ಡಿ.ವಿಳಸಪೂರೆ

• ಉದಯವಾಹಿನಿ ಬೀದರ್

ಅಪಾರ ಪೌಷ್ಟಿಕ ಸತ್ವಗಳನ್ನು ಒಳಗೊಂಡ ಹಾಗೂ ಮಧುಮೇಹಿಗಳಿಗೆ ಪ್ರಿಯವಾದ ನೀಲಿ ಸುಂದರಿ ನೇರಳೆ ಹಣ್ಣು ಇದೀಗ ಬೀದರ್ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ಪ್ರಕೃತಿ ನಮಗೆ ಕಾಲಕಾಲಕ್ಕೆ ತಕ್ಕಂತೆ ವಿವಿಧ ಹಣ್ಣುಗಳನ್ನು ನೀಡುತ್ತದೆ. ಬೇಸಿಗೆಯಲ್ಲಿ ಕಲ್ಲಂಗಡಿ ಸಿಕ್ಕರೆ, ಜೂನ್ ವರೆಗೂ ಮಾವಿನ ಹಣ್ಣು ಬಾಯಿಯಲ್ಲಿ ನೀರೂರಿಸುತ್ತದೆ. ಇನ್ನೇನು ಮಾವು ಮುಗಿಯಿತು ಎನ್ನುವ ಸಂದರ್ಭದಲ್ಲಿಯೇ ಥಟ್ಟನೆ ಪ್ರತ್ಯಕ್ಷವಾಗಿದೆ ಕಡು ನೀಲಿ ಬಣ್ಣದ ನೇರಳೆ ಹಣ್ಣು.

ಅಂದರೆ ಒಂದೊಂದು ಕಾಲಕ್ಕೆ ಒಂದೊಂದು ಬಗೆಯ ಹೂವುಗಳು, ಹಣ್ಣುಗಳು ಸಿಗುತ್ತವೆ. ವರ್ಷದ ಎಲ್ಲಾ ಸಮಯದಲ್ಲೂ ಸಿಗುವ ಹಣ್ಣು, ತರಕಾರಿಗಳಿಗೆ ಒಂದು ಬಗೆಯ ಗುಣ ಲಕ್ಷಣಗಳು ಕಂಡುಬಂದರೆ ಕೇವಲ ವರ್ಷಕ್ಕೆ ಒಂದು ಬಾರಿ ಸಿಗುವ ಹಣ್ಣುಗಳಲ್ಲಿ ಕೆಲವೊಂದು ವಿಶೇಷವಾದ ಗುಣಲಕ್ಷಣಗಳು ಇರುತ್ತವೆ.

ಅದರಲ್ಲಿ ನೀಲಿ ಸುಂದರಿ ಎಂದೇ ಕರೆಸಿಕೊಳ್ಳುವ ಈ ಹಣ್ಣು ಬಹುಪಯೋಗಿ ಎಂಬುದರಲ್ಲಿ ಎರಡು ಮಾತಿಲ್ಲ. ಇದೀಗ ನಗರದ ಮಡಿವಾಳ ವೃತ್ತ, ಭಗತ್ ಸಿಂಗ್ ವೃತ್ತ, ಬಿವಿಬಿ ಕಾಲೇಜ್ ಎದುರುಗಡೆ, ಗುಂಪಾ ರಸ್ತೆ, ನೌಬಾದ್ ರಸ್ತೆ, ಚಿದ್ರಿ ರಸ್ತೆ ಮುಂತಾದ ಪ್ರಮುಖ ಬಡಾವಣೆಗಳ ರಸ್ತೆ ಹಾಗೂ ವೃತ್ತಗಳಲ್ಲಿ ಕಪ್ಪು ಸುಂದರಿಯದ್ದೇ ಕಾರುಬಾರು.



ಉದಯವಾಹಿನಿ ಚಿತ್ರ

> ನಾಲ್ಕು ದಿನಗಳ ಹಿಂದೆ ಕೆಜಿಗೆ 400 ರೂ. ಬೆಲೆ ಇದ್ದ ನೇರಳೆ ಹಣ್ಣು ಇಂದು 250 ರೂ.ಗೆ ಇಳಿದಿದೆ. ಮುಂದೆ ಬೆಲೆ ಇನ್ನಷ್ಟು ಕಡಿಮೆಯಾಗಬಹುದು. ಹೆಚ್ಚು ಮಳೆಯಾಗದ ಕಾರಣ ಹಣ್ಣು ಯಥೇಚ್ಛವಾಗಿ ಮಾರುಕಟ್ಟೆಗೆ ಬಂದಿದೆ. ಹೀಗಾಗಿ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಹಣ್ಣು ಸಿಗುತ್ತಿದೆ.
>
> -ಸಂಗಮೇಶ ಬೀದರ್
> ಹಣ್ಣು ಮಾರಾಟಗಾರರು

### ಬಹುಪಯೋಗಿ ಹಣ್ಣು ನೇರಳೆ.!

ಬಹುಪಯೋಗಿ ಹಣ್ಣು ನೇರಳೆ.!

ಬೇಸಿಗೆಯ ಅಂತ್ಯ ಹಾಗೂ ಮಳೆಗಾಲದಲ್ಲಿ ಎಲ್ಲೆಡೆ ಸಿಗುವ ನೇರಳೆ ಹಣ್ಣಿನಲ್ಲಿ ಅಪಾರವಾದ ಪೌಷ್ಟಿಕಾಂಶಗಳಿವೆ. ನಾರಿನ ಅಂಶ, ಮೆಗ್ನಿಶಿಯಂ, ಕ್ಯಾರೋಟಿನ್, ಕಬ್ಬಿಣದ ಅಂಶ, ವಿಟಮಿನ್ ಎ, ವಿಟಮಿನ್ ಬಿ, ವಿಟಮಿನ್ ಸಿ ಅಂಶಗಳು ಹೆಚ್ಚು ಸಿಗುತ್ತವೆ. ನೇರಳೆ ಹಣ್ಣಿನ ಬೀಜಗಳಿಂದ ಮಾಡಿದ ಪುಡಿ ಮಧುಮೇಹಿಗಳಿಗೆ ರಾಮಬಾಣ. ಸೀಸನ್ ನಲ್ಲಿ ನೇರಳೆ ಹಣ್ಣನ್ನು ಸೇವನೆ ಮಾಡುವ ಅಭ್ಯಾಸ ಇಟ್ಟುಕೊಂಡರೆ ಹಲವು ಬಗೆಯ ಆರೋಗ್ಯ ಸಮಸ್ಯೆಗಳಿಂದ ಮುಕ್ತಿ ಪಡೆದುಕೊಳ್ಳಬಹುದು. ಜೊತೆಗೆ ಕೆಲವು ಆರೋಗ್ಯ ಪ್ರಯೋಜನಗಳು ಸಹ ಸಿಗುತ್ತವೆ.

ಕಳೆದ ಹದಿನೈದು ದಿನಗಳ ಹಿಂದೆ ಕೆಜಿಗೆ 400 ರೂ. ಇದ್ದ ನೇರಳೆ ಹಣ್ಣು ಇದೀಗ 150 ರೂ.ನಿಂದ 250ರೂ. ವರೆಗೆ ಮಾರಾಟವಾಗುತ್ತಿದೆ. ಅದರಲ್ಲಿ ನಾಟಿ ನೇರಳೆ ಹಣ್ಣಿಗೆ ಬೇರೆಯದ್ದೇ ಬೆಲೆ ಎಂದು ಮಾರಾಟಗಾರರು ಗ್ರಾಹಕರನ್ನು ಸೆಳೆಯುತ್ತಿದ್ದಾರೆ.

## ಅಂತರ ಜಿಲ್ಲಾ ಮನೆ ಕಳ್ಳರ ಬಂಧನ

• ಉದಯವಾಹಿನಿ ನವಲಗುಂದ,

ಸ್ಥಳೀಯ ಬಸ್ತಿ ಪ್ಲಾಟ್ ನಿವಾಸಿ ಅಲಾಗೌಡ ತಂದೆ ಹನಮಂತಗೌಡ ಬಾಲನಗೌಡ ಇವರ ಮನೆ ಕಳ್ಳತನ ಕುರಿತು ದೂರು ನೀಡಿದ ಹಿನ್ನಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ನವಲಗುಂದ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿ ಬಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಟ್ಟಣದಲ್ಲಿನ ಸಿ ಸಿ ಕ್ಯಾಮರಾ ಹಾಗೂ ತಂತ್ರಜ್ಞಾನ ಮಾಹಿತಿ ಆಧರಿಸಿ ಸಿನಿಮೀಯ ರೀತಿಯಲಿ ಇಬ್ಬರು ಆರೋಪಿತರಾದ ಜಯರಾಜ ತಂದೆ ಈರಪ್ಪ ಪಾಟೀಲ ಉರ್ಫ ಜಾದವ ಸಾ. ಓಬಳಾಪೂರ ತಾಂಡಾ ತಾ.ರಾಮದುಗ ಜಿ.ಬೆಳಗಾವಿ ಹಾಗೂ ವಿನೋದ ತಂದೆ ಜಯರಾಮ ಲಮಾಣಿ ಸಾ.ಹಲಕಿ ತಾಂಡಾ ತಾ.ಸವದತ್ತಿ ಜಿ. ಬೆಳಗಾವಿ ಅವರನ್ನು ಬಂಧಿಸಲಾಗಿದೆ.

**ಕಳ್ಳತನವಾದ 10 ಗ್ರಾಂ ತೂಕದ ಒಂದು ಬಂಗಾರದ ನೆಕ್ಲೆಸ್:** 1,10,000/- ರೂ, 08 ಗ್ರಾಂ ತೂಕದ ಒಂದು ಬಂಗಾರದ ತಾಳಿ ಅ:ಕಿ: 80,000 ರೂ, 13 ಗ್ರಾಂ ತೂಕದ ಬಂಗಾರದ ಒಂದು ಜೊತೆ ಬೆಂಡಾಲಿ ಮತ್ತು ಡ್ರಾಫ 160000 ರೂ, 05 ಗ್ರಾಂ ತೂಕದ ಎರಡು ಜೊತೆ ಬಂಗಾರದ ರಿಂಗ 50000 ರೂ, 01 ಗ್ರಾಂ ತೂಕದ ಒಂದು ಬಂಗಾರದ ಕ್ಯಾಯಿನ 12,000 ರೂ, 04 ಗ್ರಾಂ ತೂಕದ ಒಂದು ಬಂಗಾರದ ಪದಕ ಇರುವ ಗುಂಡಿನ ಸರ 50000 ರೂ, 5 ಗ್ರಾಂ ತೂಕದ ಒಂದು ಬಂಗಾರದ ಉಂಗುರ 50000 ರೂ ಹೀಗೆ ಒಟ್ಟು ಅಂದಾಜು 5,12,000 ರೂ ಕಿಮ್ಮತ್ತಿನ 46 ಗ್ರಾಂ ಬಂಗಾರದ ಆಭರಣಗಳು ಮತ್ತು ಕೃತ್ಯಕ್ಕೆ ಬಳಸಿದ ಒಂದು ಮೋಟರ ಸೈಕಲನ್ನು ಆರೋಪಿತರಿಂದ ಜಪ್ತ ಮಾಡಿಕೊಂಡಿದ್ದಾರೆ.

## ಶಾಸಕರ ಪರ ಕಾಂಗ್ರೆಸ್ ಕಾರ್ಯಕರ್ತರ ಹರಕೆ!

• ಉದಯವಾಹಿನಿ ಗದಗ

ಡಿ ಕೆ ಶಿವಕುಮಾರ್ ನೇತೃತ್ವದ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಖಾತೆ ಭಾರೀ ಸದ್ದು ಮಾಡುತ್ತಿದೆ. ಸಚಿವ ಸ್ಥಾನ ಸಿಕ್ಕವರಲ್ಲಿ ಕೆಲವರು ತಮ್ಮ ಖಾತೆ ಬಗ್ಗೆ ಖ್ಯಾತೆ ತೆಗೆದಿದ್ದಾರೆ. ಇನ್ನು ಕೆಲವರಿಗೆ ಸಚಿವ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನವಿದೆ.

ಸಚಿವ ಸ್ಥಾನ ಪಡೆಯಲು ದೇವಾಲಯ ಪ್ರದಕ್ಷಿಣೆ, ದೀಡು ನಮಸ್ಕಾರ, ಉರುಳು ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳ ಪ್ರವೃತ್ತಿ ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಹೆಚ್ಚುತ್ತಿದೆ. ತಮ್ಮ ಶಾಸಕರಿಗೆ ಸಚಿವ ಸ್ಥಾನ ದೊರಕಿಸಿಕೊಡಲು ಕಾಂಗ್ರೆಸ್ ಕಾರ್ಯಕರ್ತರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನ ಸೆಳೆಯಲು ಹರಸಾಹಸ ಪಡುತ್ತಿದ್ದಾರೆ. ರೋಣ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ್ ಅವರ ಬೆಂಬಲಿಗರು ಇತ್ತೀಚೆಗೆ ಗದಗ ನಗರದಲ್ಲಿ ಒಂದು ಕಿಲೋಮೀಟರ್‌ಗಿಂತ ಹೆಚ್ಚು ದೂರ ದೀಡು ನಮಸ್ಕಾರ ನೆರವೇರಿಸಿದರು. ಹೆಚ್.ಕೆ. ಪಾಟೀಲ್ ಅವರ ಬೆಂಬಲಿಗರೂ ದೇವಾಲಯಗಳಿಗೆ ಭೇಟಿ ನೀಡಿ ಪೂಜೆ-ಪುನಸ್ಕಾರಗಳಲ್ಲಿ ತೊಡಗಿದ್ದಾರೆ. ಸಚಿವ ಸಂಪುಟದ ಮೊದಲ ಹಂತದ ರಚನೆಯಲ್ಲಿ ಹೆಚ್.ಕೆ. ಪಾಟೀಲ್ ಅವರನ್ನು ಕಡೆಗಣಿಸಿರುವುದನ್ನು ವಿರೋಧಿಸಿ ಅವರ ಬೆಂಬಲಿಗರು ಪ್ರತಿಭಟನೆ ನಡೆಸುತ್ತಿದ್ದಾರೆ. ಪಕ್ಷದಲ್ಲಿ ಹಾಗೂ ಸರ್ಕಾರದಲ್ಲಿ ಹಲವು ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಜವಾಬ್ದಾರಿಗಳನ್ನು ನಿರ್ವಹಿಸಿರುವ ಹಿರಿಯ ನಾಯಕ ಹೆಚ್.ಕೆ. ಪಾಟೀಲ್ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ.

# ಲಕ್ಷ್ಮಣ ಸವದಿಗೆ ಸಚಿವ ಸ್ಥಾನ ನೀಡಿ: ಗಾಣಿಗ ಸಮಾಜ ಒತ್ತಾಯ

## ಬಿಜೆಪಿಯಲ್ಲಿದ್ದಾಗ ಸೋತಾಗಲೂ ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು..

• ಉದಯವಾಹಿನಿ ಯಲಬುರ್ಗಾ

ನೂತನ ಮುಖ್ಯಮಂತ್ರಿಯಾದ ಡಿ.ಕೆ.ಶಿವಕುಮಾರ್ ನೇತೃತ್ವದ ಎರಡನೇ ಹಂತದ ಸಚಿವ ಸಂಪುಟ ರಚನೆ ವೇಳೆ ಗಾಣಿಗ ಸಮಾಜದ ಹಿರಿಯ ಮುಖಂಡ, ಮಾಜಿ ಉಪಮುಖ್ಯಮಂತ್ರಿಯಾದ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರಿಗೆ ಅವಕಾಶ ನೀಡಬೇಕು ಎಂದು ತಾಲ್ಲೂಕಾ ಗಾಣಿಗೆರ ಸಂಘದ ಅಧ್ಯಕ್ಷರಾದ ಶರಣಪ್ಪ ರೇವಣಕಿ ಅವರು ಆಗ್ರಹಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಕಾಂಗ್ರೆಸ್ ಪಕ್ಷದಲ್ಲಿ ಲಕ್ಷ್ಮಣ ಸವದಿ, ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ ಹಾಗೂ ಚಿತ್ರದುರ್ಗ ಶಾಸಕ ವೀರೇಂದ್ರ ಪಪ್ಪಿ ಸೇರಿ ಮೂವರು ಶಾಸಕರಿದ್ದು, ಇವರಲ್ಲಿ ಇಬ್ಬರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಗಾಣಿಗ ಸಮಾಜವು 40 ಲಕ್ಷ ಜನಸಂಖ್ಯೆ ಹೊಂದಿದೆ. ಕಾಂಗ್ರೆಸ್ ಸರ್ಕಾರಕ್ಕೆ ಬಂದಾಗ ಪ್ರತಿ ಸಲ ಸಹ ಸಮಾಜಕ್ಕೆ ಸಚಿವ ಸ್ಥಾನದ ಬೇಡಿಕೆ ಇಡಬೇಕಾದ ಪರಿಸ್ಥಿತಿ ಇದೆ. ಆದರೂ, ಕಾಂಗ್ರೆಸ್ ಸರ್ಕಾರವು ಇದುವರೆಗೂ ಈ ಬೇಡಿಕೆ ಈಡೇರಿಲ್ಲ. ಈ ಬಾರಿಯಾದರೂ ಸಮುದಾಯದ ಶಾಸಕರನ್ನು ಸಚಿವರನ್ನಾಗಿ ಮಾಡಬೇಕು ಎಂದರು.



ಉದಯವಾಹಿನಿ ಚಿತ್ರ

ಆದ್ದರಿಂದ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಗೆ ಮನವಿ ಮಾಡುತ್ತಿದ್ದೇವೆ. ಒಂದು ವೇಳೆ, ಸಚಿವ ಸ್ಥಾನ ಸಿಗದ್ದರೆ, ರಾಜ್ಯಾದ್ಯಂತ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗುತ್ತದೆ. ನಿರ್ಲಕ್ಷ್ಯ ವಹಿಸಿದರೆ, ಮುಂದೆ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಗಾಣಿಗ ಸಮಾಜಕ್ಕೆ ಯಾವುದೇ ಪಕ್ಷ ಅನಿವಾರ್ಯವಲ್ಲ ಎಂದು ಎಚ್ಚರಿಸಿದರು.

ಗಾಣಿಗೆರ ಸಂಘದ ಮಹಾಂತೇಶ ಗಾಣಿಗೇರ ಅವರು ಮಾತನಾಡಿ ಲಕ್ಷ್ಮಣ ಸವದಿ ಸಂಘಟನಾ ಚತುರರಾಗಿದ್ದು, ಬಿಜೆಪಿಯಲ್ಲಿದ್ದಾಗ ಅವರು ಚುನಾವಣೆಯಲ್ಲಿ ಸೋತ ಸಂದರ್ಭದಲ್ಲೂ ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು.

ನಂತರ ಭಿನ್ನಾಭಿಪ್ರಾಯಗಳ ಕಾರಣಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಆಗ ಪಕ್ಷದ ವರಿಷ್ಠರು ಅವರಿಗೆ ಒಳ್ಳೆಯ ಸ್ಥಾನ-ಮಾನದ ಭರವಸೆ ನೀಡಿದನ್ನು ಮರೆಯಬಾರದು ಎಂದು ನೆನಪಿಸಿದರು. ಅಲ್ಲದೇ ಸವದಿ ಕಾಂಗ್ರೆಸ್ ಸೇರ್ಪಡೆಯಿಂದ ಸುಮಾರು 20 ಮತಕ್ಷೇತ್ರದಲ್ಲಿ ಪಕ್ಷಕ್ಕೆ ಅನುಕೂಲವಾಗಿದೆ. ಇಂಡಿ, ಜೇವರ್ಗಿ, ಕೊಪ್ಪಳ ಸೇರಿ ಹಲವು ಕ್ಷೇತ್ರಗಳ ಶಾಸಕರು ಸ್ವತಃ ತಮ್ಮ ಗೆಲುವಿನಲ್ಲಿ ಲಕ್ಷ್ಮಣ ಸವದಿ ಸಹಕಾರವೂ ಪಾತ್ರ ವಹಿಸಿದ್ದು, ಅವರಿಂದಾಗಿಯೇ ಗಾಣಿಗ ಸಮಾಜದ ಮತಗಳು ತಮಗೆ ಬಂದಿದೆ ಎಂದು ಇಂದಿಗೂ ಹೇಳಿಕೊಳ್ಳುತ್ತಾರೆ ಎಂದು ಹೇಳಿದರು. ಈ ಪತ್ರಿಕಾಗೋಷ್ಟಿಯಲ್ಲಿ ತಾಲ್ಲೂಕಾ ಗಾಣಿಗರ ಸಂಘದ ಪದಾಧಿಕಾರಿಗಳಾದ, ಬಾಳೆಶಪ್ಪ ಹಳ್ಳಿ. ವಿರೇಶ್ ಮೆಳ್ಳಿಕೇರಿ. ಹನಮಂತಪ್ಪ ಚರಾರಿ.ಯು ಎಸ್ ಮೆಣಸಗೇರಿ ವಕೀಲರು. ಆದೇಶ ರೊಟ್ಟಿ. ವೀರೇಶ ಚರಾರಿ. ಶರಣಪ್ಪ ಮೇಟಿ. ಮಂಜುನಾಥ್ ರೊಟ್ಟಿ. ಪಂಪಾಪತಿ ವಣಗೇರಿ. ಅಶೋಕ್ ಸಜ್ಜನ. ಶಂಕ್ರಪ್ಪ ಸಿದ್ನೇಕೊಪ್ಪ ಇತರರು ಇದ್ದರು.

# ರೈತರಿಗೆ ಅವಾಜ್ ಹಾಕಿದ ರಾಯರೆಡ್ಡಿ ಆಪ್ತ ಹಂಪಯ್ಯಸ್ವಾಮಿ

• ಉದಯವಾಹಿನಿ ಯಲಬುರ್ಗಾ

ತಾಲ್ಲೂಕಿನ ಚಿಕ್ಕಮ್ಯಾಗೇರಿ-ಮುರಡಿ ಗ್ರಾಮಗಳ ಗ್ರಾಮೀಣ ಒಳ ರಸ್ತೆ ನಿರ್ಮಾಣ ವಿಚಾರಕ್ಕೆ ಸಂಬಂಧಿಸಿದಂತೆ ರೈತರಿಗೆ ಏಕ ವಚನದಲ್ಲಿ ಶಾಸಕ ಬಸವರಾಜ ರಾಯರೆಡ್ಡಿ ಆಪ್ತ ಕೆಎಮ್‌ಎಫ್ ನಾಮ ನಿರ್ದೇಶಕ ಹಂಪಯ್ಯ ಸ್ವಾಮಿ ಹಿರೇಮಠ ಅವಾಜ್ ಹಾಕಿದ ಘಟನೆ ನಡೆದಿದೆ.

ಕಳೆದ ಐದಾರು ತಿಂಗಳಿನಿಂದ ಮುರಡಿಯಿಂದ ಚಿಕ್ಕಮ್ಯಾಗೇರಿ ಗ್ರಾಮದ ವರೆಗೆ ಸಂಪರ್ಕ ಕಲ್ಪಿಸುವ ಒಳ ಗ್ರಾಮೀಣ ರಸ್ತೆಯ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜನಿಯರ್ ಉಪ ವಿಭಾಗದಿಂದ ಕೈಗೆತ್ತಿಗೊಳ್ಳಲಾಗಿದೆ. ಮುರಡಿ ಗ್ರಾಮದಿಂದ ಈಗಾಗಲೇ 31 ಅಡಿಗೆ ರಸ್ತೆಯನ್ನು ಅಗಲೀಕರಣ ಮಾಡಿಕೊಂಡು ಬಂದು ಅರ್ಥ ವರ್ಕ್ ಮಾಡಲಾಗಿದೆ. ಆದರೆ, ಚಿಕ್ಕಮ್ಯಾಗೇರಿ ಗ್ರಾಮದ ಸೀಮಾಂತರದಲ್ಲಿನ ಚಂಡೂರು,ಕುರಿ, ಬಾದ್ರಿ, ದಮ್ಮೂರು ಇವರ ಜಮೀನಿನ ಹತ್ತಿರ ರಸ್ತೆಯನ್ನು ಅಗಲೀಕರಣ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಹಾಗೂ ರೈತರ ಮಧ್ಯ ವಾಗ್ವಾದ ನಡೆಯುತ್ತಿತ್ತು. ಆದರೆ, ಏಕಾಏಕಿ ಆಗಮಿಸಿದ ಕಾಂಗ್ರೆಸ್ ಮುಖಂಡ ಹಾಗೂ ರಾಯರೆಡ್ಡಿ ಆಪ್ತ ಕೆಎಮ್ ಎಫ್ ನಾಮ ನಿರ್ದೇಶಕ ಹಂಪಯ್ಯಸ್ವಾಮಿ ಹಿರೇಮಠ ಅವರು ಯಾರೇ ವಿರೋಧ ಮಾಡಿದ್ರೂ ಸಹ ಅವರಿಗೆ ತಕ್ಕ ಶಾಸ್ತಿ ಮಾಡಿಸೋಣ, ಯಾವನರ್ ಏನರ್ ಅಂದ್ರ ನನಗ ಹೇಳು ಎಂದು ಏಕವಚನದಲ್ಲಿ ರೈತರಿಗೆ ಅವಾಜ್ ಹಾಕಿದ ಕೈ-ಕೈ ಮಿಲಾಯಿಸಿದ ಪ್ರಸಂಗ ಜರುಗಿತು.



ಉದಯವಾಹಿನಿ ಚಿತ್ರ

ಇದಕ್ಕೆ ರೈತರು ತೀವ್ರ ವಿರೋಧ ವ್ಯಕ್ತ ಪಡಿಸಿ, ನೀವು ಒಬ್ಬರೇ ಕಾಂಗ್ರೆಸ್ ನವರಲ್ಲ. ನಾವು ಸಹ ಕಾಂಗ್ರೆಸ್ ನವರೇ ನಮ್ಮ ಅಪ್ಪನ ಕಾಲದಿಂದಲೂ ಕಾಂಗ್ರೆಸ್ ಪಕ್ಷದಲ್ಲಿದ್ದೇವೆ. ನಿನ್ನೆ-ಮೊನ್ನೆ ಬಂದು ನಮ್ಮ ಮೇಲೆ ದಬ್ಬಾಳಿಕೆ ಮಾಡೋದು ಎಷ್ಟು ಸರಿ. ನಾವು ರಾಯರೆಡ್ಡಿಗೆ ಮಾತನಾಡುತ್ತೇವೆ ಎಂದು ಸ್ಥಳದಲ್ಲಿಯೇ ರಾಯರೆಡ್ಡಿಗೆ ದೂರು ವಾಣಿ ಕರೆ ಮಾಡಿದ್ರು, ರಾಯರೆಡ್ಡಿ ಕರೆ ಸ್ವೀಕರಿಸಲಿಲ್ಲವೆಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

**ತಕ್ಕ ಪಾಠ:** ನಮ್ಮ ಜಮೀನುಗಳಿಗೆ ರಸ್ತೆ ನಿರ್ಮಾಣ ಮಾಡಿಕೊಡುವಂತೆ ರಾಯರೆಡ್ಡಿ ಯವರಿಗೆ ಹಲವು ಬಾರಿ ಮನವಿ ಮಾಡಿದ್ದೇವು. ಆದರೆ, ಇತ್ತೀಚಿಗೆ ಅನುದಾನ ಕೊಡಿಸುವ ಮೂಲಕ ರಸ್ತೆ ನಿರ್ಮಾಣ ಮಾಡುತ್ತಿರುವುದಕ್ಕೆ ಸಂತಸ ತಂದಿತ್ತು. ಆದರೆ, ನಿನ್ನೆ-ಮೊನ್ನೆ ಅಷ್ಟೇ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡ ಹಂಪಯ್ಯಸ್ವಾಮಿ ಹಿರೇಮಠಗೆ ಹಾಲು ಉತ್ಪಾದಕ ಸಹಕಾರ ಸಂಘದ ನಾಮ ನಿರ್ದೇಶಕ ಸರ್ಕಾರಿ ಪದವಿ ಪೂರ್ವ ಕಾಲೇಜು ಸಿಡಿಸಿ ಉಪಾಧ್ಯಕ್ಷ ಹಾಗೂ ಕೆಎಮ್‌ಎಫ್ ನಾಮ ನಿರ್ದೇಶಕ ಹುದ್ದೆಯನ್ನು ನೀಡುವ ಮೂಲಕ ರಾಯರೆಡ್ಡಿ ಮೂಲ ಕಾಂಗ್ರೆಸ್ಸಿಗರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇಂತವರನ್ನು ಬೆಳೆಸುವ ಮೂಲಕ ನಮಗೆ ಅನ್ಯಾಯ ಮಾಡಲು ಮುಂದಾದ ರಾಯರೆಡ್ಡಿಗೆ ಮುಂದಿನ ದಿನ ಮಾನಗಳಲ್ಲಿ ತಕ್ಕ ಪಾಠ ಕಲಿಸುವುದಾಗಿ ಗ್ರಾಮದ ನಿಂಗಪ್ಪ ಕುರಿ, ಬಸಪ್ಪ ದಮ್ಮೂರ, ಯಮನರಪ್ಪ ಕುರಿ, ಶರಣಪ್ಪ ಬಾದ್ರಿ, ರಮೇಶ ದಮ್ಮೂರ, ಕಳಕಪ್ಪ ಬಾದ್ರಿ, ರಾಜೇಸಾಬ ಜಾತಿಗೇರ, ಬಸವರಾಜ ಮೆಳ್ಳಿಕೇರಿ ಇತರರು ಎಚ್ಚರಿಸಿದರು.

## ಯುವ ಕಾಂಗ್ರೆಸ್ ಮುಖಂಡನ ಬಂಧನ

• ಉದಯವಾಹಿನಿ ಮಂಗಳೂರು

ಉದ್ಯಮಿಯೊಬ್ಬರಿಗೆ ಮೇಲೆ 'ಬ್ಲ್ಯಾಕ್‌ಮೇಲ್' ಮಾಡಿ, ಅವರ ಆತ್ಮೀಯ ಛಾಯಾಚಿತ್ರಗಳು ಮತ್ತು ವೀಡಿಯೊಗಳನ್ನು ಬಿಡುಗಡೆ ಮಾಡುವುದಾಗಿ ಬೆದರಿಸಿ 2.77 ಕೋಟಿ ರೂ.ಗಳನ್ನು 'ಸುಲಿಗೆ' ಮಾಡಿದ ಆರೋಪದ ಮೇಲೆ ಯುವ ಕಾಂಗ್ರೆಸ್ ನಾಯಕ ನಿಜಾಮ್ ಇಬ್ರಾಹಿಂ ಮತ್ತು ಅವರ ಸಹಚರ ಜಿತೇಶ್ ಎಂಬುವರನ್ನು ಮಂಗಳೂರಿನ ಉರ್ವಾ ಪೊಲೀಸರು ಬಂಧಿಸಿದ್ದಾರೆ.

2024ರಲ್ಲೇ ಪ್ರಸಿದ್ಧ ಉದ್ಯಮಿಗೆ ಹನಿಟ್ರ್ಯಾಪ್ ಖೆಡ್ಡಾ ತೋಡಿದ್ದ ಜಿತೇಶ್, ಉದ್ಯಮಿಯ ಅಶ್ಲೀಲ ಫೋಟೋ, ವಿಡಿಯೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಆಟ ಶುರು ಮಾಡಿದ್ದನಂತೆ. ಉದ್ಯಮಿಯ ಅಶ್ಲೀಲ ಫೋಟೋ, ವಿಡಿಯೋ ಇಟ್ಕೊಂಡು ಬ್ಲ್ಯಾಕ್ ಮೇಲ್ ಮಾಡ್ತಿದ್ದ ಕೈ ಮುಖಂಡರು, ಹಣ ಕೊಡದಿದ್ರೆ, ಆತನ ಪತ್ನಿಗೆ ವಿಡಿಯೋ ತೋರಿಸೋದಾಗಿ ಬೆದರಿಕೆ ಹಾಕಿದ್ದರು. ಮೊದಲಿಗೆ ಜಿತೇಶ್ 35 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದ.

ಮರ್ಯಾದೆಗೆ ಹೆದರಿ ಚೆಕ್ ಮೂಲಕ ಜಿತೇಶ್‌ಗೆ ಉದ್ಯಮಿ ಹಣ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ನಂತರ ಅವರು ಉದ್ಯಮಿಯ ನಿವಾಸಕ್ಕೆ ಭೇಟಿ ನೀಡಿ ಹಣಕ್ಕಾಗಿ ಒತ್ತಡ ಹೇರುತ್ತಲೇ ಇದ್ದರು. ಉದ್ಯಮಿಗೆ ಸಹಾಯ ಮಾಡುವ ಬದಲು ನಿಜಾಮ್ ಸುಲಿಗೆ ದಂಧೆಯ ಭಾಗವಾಗಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

## ಗಾಂಜಾ ಮಾರಾಟ: ಓರ್ವನ ಬಂಧನ

• ಉದಯವಾಹಿನಿ ಕಲಬುರಗಿ

ನಗರದ ರೈಲ್ವೆ ಸ್ಟೇಷನ್ ಮೇನ್ ಗೇಟ್‌ದಿಂದ ವಿ.ಜಿ.ಮಹಿಳಾ ಮಹಾವಿದ್ಯಾಲಯ ಕಡೆಗೆ ಹೋಗುವ ರಸ್ತೆಯ ಹಾಸ್ಟೆಲ್ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ಅರುಣಕುಮಾರ, ಸಿಬ್ಬಂದಿಗಳಾದ ರಾಜಕುಮಾರ, ಅರವಿಂದ, ಅಂಬಾಜಿ, ಪ್ರೀತಮ್, ನಾಗರಾಜ ಅವರು ದಾಳಿ ನಡೆಸದಿ ಬಡಾರೋಜಾದ ಸೈಯ್ಯದ್ ಗಲ್ಲಿಯ ಅಬ್ದುಲ್ ರಶೀದ್ ತಂದೆ ಶೇಖ್ ಚಾಂದಸಾಬ್ ಎಂಬಾತನನ್ನು ಬಂಧಿಸಿ 32 ಸಾವಿರ ರೂ.ಮೌಲ್ಯದ 320 ಗ್ರಾಂ.ಗಾಂಜಾ ಜಪ್ತಿ ಮಾಡಿದ್ದಾರೆ. ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸರ್ಕಾರಿ ಜಾಗದ ಹಕ್ಕುಪತ್ರ ವಿತರಣೆಯಲ್ಲಿ ಭಿನ್ನಾಭಿಪ್ರಾಯ

• ಉದಯವಾಹಿನಿ ಜಗಳೂರು

ತಾಲ್ಲೂಕಿನ ಚದುರಗೊಳ್ಳ ಗ್ರಾಮದ ಸರ್ಕಾರಿ ಜಾಗದಲ್ಲಿ ತಾಲ್ಲೂಕು ಆಡಳಿತದಿಂದ ಈ ಹಿಂದೆ ಹತ್ತಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿರುವ ವಿಚಾರವಾಗಿ ಗ್ರಾಮದಲ್ಲಿ ಭಿನ್ನಾಭಿಪ್ರಾಯ ಮೂಡಿದ ಪರಿಣಾಮ ಶಾಸಕ ಬಿ. ದೇವೇಂದ್ರಪ್ಪ ನೇತೃತ್ವದಲ್ಲಿ ಅಧಿಕಾರಿಗಳು ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಸಭೆ ನಡೆಸಿದರು. 'ಗ್ರಾಮದ ಸರ್ವೆ ಸಂಖ್ಯೆ 62/1ರಲ್ಲಿ ಒಟ್ಟು 13 ಎಕರೆ ಸರ್ಕಾರಿ ಜಮೀನಿದ್ದು, ಕೆಲವು ತಿಂಗಳ ಹಿಂದೆ ತಹಶೀಲ್ದಾರ್ ಆಗಿದ್ದ ಕಲೀಂ ಉಲ್ಲಾ ಅವರು ತರಾತುರಿಯಲ್ಲಿ ಪರಿಶೀಲನೆ ನಡೆಸದೆ ಮನೆ ಇದ್ದವರಿಗೂ ಹಕ್ಕುಪತ್ರಗಳನ್ನು ವಿತರಿಸಿದ್ದಾರೆ. ಕೆಲವರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಬಗ್ಗೆ ಕೋರ್ಟ್‌ನಲ್ಲಿ ದಾವೆ ದಾಖಲಿಸಿದ್ದು, ಸರ್ಕಾರದ ಜಾಗವನ್ನು ತೆರವು ಮಾಡಲು ಆದೇಶ ಮಾಡಲಾಗಿದೆ' ಎಂದು ಗ್ರಾಮದ ಮುಖಂಡರು ಆರೋಪಿಸಿದರು. 'ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಈ ಸ್ಥಳವನ್ನು ಅಂಗನವಾಡಿ, ಆರೋಗ್ಯ ಕೇಂದ್ರ ನಿರ್ಮಿಸಲು ಮೀಸಲಿಡಬೇಕು. ಉಳಿದ ಜಾಗದಲ್ಲಿ ಸೂಕ್ತ ರಸ್ತೆ, ಚರಂಡಿ ಒಳಗೊಂಡ ನವಗ್ರಾಮದ ಮಾದರಿಯಲ್ಲಿ ಸರ್ಕಾರದಿಂದ ಅರ್ಹ ಫಲಾನುಭವಿಗಳಿಗೆ ವಸತಿ ನಿರ್ಮಿಸಿಕೊಡಬೇಕು' ಎಂದು ಗ್ರಾಮದ ಕೆಲವು ಮುಖಂಡರು ಒತ್ತಾಯಿಸಿದರು.

## ವಿಶ್ವ ತಂಬಾಕು ಮಲೇರಿಯಾ ವಿರೋಧಿ ಮಾಸಾಚರಣೆ

• ಉದಯವಾಹಿನಿ ಚಿತ್ರದುರ್ಗ:

ಹೊಸದುರ್ಗ ತಾಲ್ಲೂಕಿನ ಬೆಲಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಮತ್ತು ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮ ನಡೆಯಿತು.

ದಂತ ವೈದ್ಯಧಿಕಾರಿ ಡಾ. ಸುಮಾ ಅವರು, ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಹಾಗೂ ನಿಕೋಟಿನ್ ಗಮ್ ಬಳಸುವ ಮಾಹಿತಿಯನ್ನು ಮತ್ತು ಪೌಷ್ಠಿಕ ಆಹಾರದ ಬಗ್ಗೆ ಮಾಹಿತಿಯನ್ನು ಸಮುದಾಯದ ಜನರಿಗೆ ತಿಳಿಸಿದರು. ಬಿಎಚ್ ಇಒ ಲಲಿತಮ್ಮ ಅವರು ಮಲೇರಿಯಾ ರೋಗದ ಲಕ್ಷಣಗಳು ತಡೆಗಟ್ಟುವ ಕ್ರಮಗಳ ಬಗ್ಗೆ ಆರೋಗ್ಯ ಶಿಕ್ಷಣ ನೀಡಿದರು.



ಉದಯವಾಹಿನಿ ಚಿತ್ರ

ಕಾರ್ಯಕ್ರಮದಲ್ಲಿ ಡಾ.ಸಹನಾ, ಎಸ್‌ಪಿಹೆಚ್‌ಸಿಒ ನಿರ್ಮಲ ಹಾಗೂ ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತೆಯರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.


## ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಮಹಿಳಾ ಹೆಡ್ ಕಾನ್ಸ್ಟೇಬಲ್, ಎಎಸ್‌ಐ ಅಮಾನತು

• ಉದಯವಾಹಿನಿ ಕಲಬುರಗಿ,

ಬಿಎನ್‌ಎಸ್ ಮತ್ತು ಕಲಂ 4,6 ಪೋಕ್ಸೋ ಕಾಯ್ದೆ ಪ್ರಕರಣದಲ್ಲಿ ನೊಂದ ಬಾಲಕಿಯ ಹೇಳಿಕೆ ಪಡೆದುಕೊಳ್ಳಲು ಫಿರ್ಯಾದಿಗೆ ಪೊಲೀಸ್ ಠಾಣೆಗೆ ಕರೆಯಿಸಿಕೊಂಡು ಸದರಿ ಪ್ರಕರಣದಲ್ಲಿ ಸಹಾಯ ಮಾಡುವುದದಕ್ಕಾಗಿ 10 ಸಾವಿರ ರೂ.ಬೇಡಿಕೆ ಇಟ್ಟು, 9 ಸಾವಿರ ರೂ.ಹಣ ಪಡೆದುಕೊಳ್ಳುವಾಗು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಮಹಿಳಾ ಹೆಡ್ ಕಾನ್ಸ್ಟೇಬಲ್ ಶ್ರೀಮತಿ ಜ್ಯೋತಿ ಮತ್ತು ಎಎಸ್‌ಐ ಶಿವಶರಣಪ್ಪ ಅವರನ್ನು ಅಮಾನತ್ತುಗೊಳಿಸಿ ನಗರ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಪೊಕ್ಸೋ ಪ್ರಕರಣದಲ್ಲಿ ಫಿರ್ಯಾದಿಗೆ ಸಹಾಯ ಮಾಡುವುದಾಗಿ ಹಣದ ಬೇಡಿಕೆ ಇಟ್ಟು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿ ಗಂಭೀರ ಲೋಪವೆಸಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತಿನ ನಡಾವಳಿ) ನಿಯಮಾವಳಿ 1965/89 ರ ನಿಯಮ 5 ರನ್ವಯ ಇಲಾಖಾ ಶಿಸ್ತಿನ ಕ್ರಮ ಬಾಕಿಯಲ್ಲಿರಿಸಿ ಸದರಿ ಸಿಬ್ಬಂದಿಯವರನ್ನು ಅಮಾನತ್ತುಗೊಳಿಸಿ ಆಯುಕ್ತರು ಆದೇಶ ಹೊರಡಿಸಿದ್ದಾರೆ.

## ಕನ್ನಡ ಜಾಗೃತಿ ಸಮಾವೇಶ: ಸಚಿವ, ಶಾಸಕರಿಗೆ ಆಹ್ವಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬೀದರ್

ಕನ್ನಡ ಸೇನೆ ಕರ್ನಾಟಕ ಸಂಘಟನೆ ವತಿಯಿಂದ ಜೂ. 19 ರಂದು ನಗರದಲ್ಲಿ ಹಮ್ಮಿಕೊಳ್ಳಲಾದ ರಾಜ್ಯಮಟ್ಟದ ದ್ವಿತೀಯ ಗಡಿನಾಡು ಕನ್ನಡ ಜಾಗೃತಿ ಸಮಾವೇಶಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ, ಹಾಗೂ ಶಾಸಕ ರಹೀಂಖಾನ್ ಅವರನ್ನು ಸಂಘಟನೆಯ ಪದಾಧಿಕಾರಿಗಳು ಬೆಂಗಳೂರಿನಲ್ಲಿ ಆಹ್ವಾನಿಸಿದರು.ಶಾಲು ಹೊದಿಸಿ ಸತ್ಕರಿಸಿ, ಸಮ್ಮೇಳನದ ಆಮಂತ್ರಣ ಪತ್ರಿಕೆ ನೀಡಿದರು.

ಬೀದರನ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶ ನಡೆಯಲಿದೆ. ಸಮ್ಮೇಳನದ ಯಶಸ್ವಿಗೆ ಸಂಘಟನೆ ಪದಾಧಿಕಾರಿಗಳು ಶ್ರಮಿಸುತ್ತಿದ್ದಾರೆ.ರಾಜ್ಯದ ವಿವಿಧ ಜಿಲ್ಲೆಗಳ ಸಂಘಟನೆಯ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಕನ್ನಡಾಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟನೆಯ ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ರಾಜಶೇಖರ ಜಿ. ತಿಳಿಸಿದರು.ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ, ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ್ ಕೆನಾಡೆ, ಬೀದರ್ ತಾಲ್ಲೂಕು ಘಟಕದ ಉಪಾಧ್ಯಕ್ಷ ಸೂರ್ಯಕಾಂತ ರಾಂಪುರ, ತುಳಸಿ ವಾಘಮಾರೆ, ಕುಮಾರ ಆಲೂರೆ ಇದ್ದರು.

# ಹೆಲ್ಮೆಟ್, ಪೊಲೀಸರ ಭಯಕ್ಕೋ ಜೀವದ ಮೇಲಿನ ಕಾಳಜಿಗೋ?

• ಪರಮೇಶ.ಡಿ.ವಿಳಸಪೂರೆ

• ಉದಯವಾಹಿನಿ ಬೀದರ್

ಜಿಲ್ಲೆಯಲ್ಲಿ ಹೆಲ್ಮೆಟ್ ಕಡ್ಡಾಯ ನಿಯಮ ಜಾರಿಗೊಳಿಸಿರುವ ಜಿಲ್ಲಾ ಪೊಲೀಸ್ ಇಲಾಖೆ ದಂಡಾಸ್ತ್ರ ಪ್ರಯೋಗ ಆರಂಭಿಸಿದ ಬಳಿಕ ವಾಹನ ಸವಾರರಲ್ಲಿ ಹೆಲ್ಮೆಟ್ ಬಳಕೆ ಗಮನಾರ್ಹವಾಗಿ ಹೆಚ್ಚಾಗಿದೆ.ಅಧಿಕ ಪ್ರಕರಣಗಳನ್ನು ದಾಖಲಿಸಿರುವ ಪೊಲೀಸರು ಸುಮಾರು ಲಕ್ಷಕ್ಕೂ ಅಧಿಕ ದಂಡವಸೂಲಿ ಮಾಡಿದ್ದಾರೆ. ಆದರೆ ಈ ಬೆಳವಣಿಗೆಯ ಹಿಂದೆ ಆತಂಕಕಾರಿ ಸಂಗತಿಯೊಂದು ಅಡಗಿದೆ. ಬಹುತೇಕರು ತಮ್ಮ ಸುರಕ್ಷತೆಗಾಗಿ ಅಲ್ಲ, ಪೊಲೀಸರ ಭಯದಿಂದಲೇ ಹೆಲ್ಮೆಟ್ ಧರಿಸುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ.

> ★ಹೆಲ್ಮೆಟ್ ಕಡ್ಡಾಯಗೊಳಿಸಿರುವುದು ಜನರ ಜೀವ ರಕ್ಷಣೆಗಾಗಿ.
> ★ಅಪಘಾತದ ಸಂದರ್ಭದಲ್ಲಿ ಹೆಲ್ಮೆಟ್ ಜೀವ ರಕ್ಷಕ ಕವಚವಾಗಿದೆ.
> ★ದಂಡ ಕಟ್ಟುವುದನ್ನು ತಪ್ಪಿಸಿಕೊಳ್ಳುವ ಮನಸ್ಥಿತಿಯಿಂದ ಹೊರಬನ್ನಿ.
> ★ಹೆಲ್ಮೆಟ್ ಧರಿಸುವ ಸಂಸ್ಕೃತಿ ಬೆಳೆಸಿಕೊಳ್ಳುವುದು ಅಗತ್ಯ.

ನಗರದ ಪ್ರಮುಖ ರಸ್ತೆಗಳಲ್ಲಿ ಈಗ ಹೆಲ್ಮೆಟ್ ಧರಿಸಿದ ಸವಾರರ ಸಂಖ್ಯೆ ಹೆಚ್ಚಾಗಿದ್ದರೂ ಗುಣಮಟ್ಟದ ಸುರಕ್ಷತಾ ಸಾಧನವಾಗಿ ಬಳಸುವ ಬದಲು ಕೇವಲ ದಂಡದಿಂದ ತಪ್ಪಿಸಿಕೊಳ್ಳುವ ಉಪಾಯವಾಗಿ ಹೆಲ್ಮೆಟ್ ಬಳಸುತ್ತಿರುವವರೇ ಹೆಚ್ಚು. ಕೆಲವರು ಕಡಿಮೆ ಬೆಲೆಯ, ಸುರಕ್ಷತಾ ಮಾನದಂಡಗಳಿಗೆ ಹೊಂದದ ಹೆಲ್ಮೆಟ್ ಧರಿಸುತ್ತಿದ್ದರೆ, ಇನ್ನು ಕೆಲವರು ಪೊಲೀಸ್ ಸಿಬ್ಬಂದಿ ಕಂಡಾಗ ಮಾತ್ರ ಹೆಲ್ಮೆಟ್ ತೊಟ್ಟು, ನಂತರ ತೆಗೆದುಹಾಕುವ ಪ್ರವೃತ್ತಿ ತೋರಿಸುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಪೊಲೀಸ್ ಅಧಿಕಾರಿಗಳ ಪ್ರಕಾರ, ಹೆಲ್ಮೆಟ್ ಕಡ್ಡಾಯ ಗೊಳಿಸಿರುವುದು ದಂಡ ವಸೂಲಿಗಾಗಿ ಅಲ್ಲ. ನಗರ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ತಲೆಗೆ ಗಂಭೀರ ಪೆಟ್ಟಾಗಿ ಸಾವನ್ನಪ್ಪುವವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

> ಹೆಲ್ಮೆಟ್ ಕಡ್ಡಾಯ ಜನರ ಜೀವ ರಕ್ಷಣೆಗಾಗಿ.

ಅಪಘಾತದ ಸಂದರ್ಭದಲ್ಲಿ ಹೆಲ್ಮೆಟ್ ಜೀವ ರಕ್ಷಕ ಕವಚವಾಗಿದ್ದು, ಅನೇಕ ಸಾವು-ನೋವು ತಪ್ಪಿಸಬಲ್ಲದು ಎಂಬುದು ವೈದ್ಯಕೀಯ, ಸಂಚಾರ ತಜ್ಞರ ಅಭಿಪ್ರಾಯ. ಆದರೆ. ಕೆಲ ಸವಾರರು ಮುಖ್ಯ ರಸ್ತೆಗಳನ್ನು ಬಿಟ್ಟು ಓಣಿಗಳಲ್ಲಿ ಸಂಚರಿಸುವುದು, ಪೊಲೀಸರ ಕಣ್ತಪ್ಪಿಸಿಕೊಂಡು ಓಡಾಡಲು ಯತ್ನಿಸುವುದು, ಕಳಪೆ ಹೆಲ್ಮೆಟ್ ಬಳಸುವುದು ಪೊಲೀಸ್ ಇಲಾಖೆಯ ಉದ್ದೇಶವನ್ನೇ ವಿಫಲಗೊಳಿಸುವಂತಿದೆ.

**ಹೆಲ್ಮೆಟ್ ಧರಿಸುವುದು ಪೊಲೀಸರನ್ನು ಕಂಡು ಭಯ ಪಡುವುದಕ್ಕಲ್ಲ;** ಕುಟುಂಬದವರ ಮುಖವನ್ನು ಮತ್ತೆ ಸುರಕ್ಷಿತವಾಗಿ ಕಾಣುವುದಕ್ಕಾಗಿ ದಂಡ ಕಟ್ಟುವುದನ್ನು ತಪ್ಪಿಸಿಕೊಳ್ಳುವ ಮನಸ್ಥಿತಿಯಿಂದ ಹೊರಬಂದು ಜೀವ ರಕ್ಷಣೆಗಾಗಿ ಹೆಲ್ಮೆಟ್ ಧರಿಸುವ ಸಂಸ್ಕೃತಿ ಬೆಳೆಸಿಕೊಳ್ಳುವುದು ಇಂದು ಅಗತ್ಯವಾಗಿದೆ.

ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಹೆಲ್ಮೆಟ್ ಧರಿಸುವ ಮೂಲಕ ಪೊಲೀಸ್ ಇಲಾಖೆಯ ಕಾರ್ಯಕ್ಕೆ ಕೈಜೋಡಿಸಬೇಕು. ಮನೆಯಲ್ಲಿ ಯಾರೇ ಆದರೂ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದರೆ ಅವರನ್ನು ಎಚ್ಚರಿಸುವುದು ಯುವಕರ ಕರ್ತವ್ಯ. ಮುಖ್ಯವಾಗಿ ಯುವಕರು ಮೊದಲು ಹೆಲ್ಮೆಟ್ ಧರಿಸುವ ಮೂಲಕ ಎಲ್ಲರಿಗೂ ಮಾದರಿಯಾಗಬೇಕು ಅವಸರವೇ ಅಪಾಯ, ನಿಧಾನವೇ ಪ್ರಧಾನ ಹೀಗಾಗಿ ರಸ್ತೆಯಲ್ಲಿ ಸಂಚರಿಸುವಾಗ ಸಾವಧಾನದಿಂದ ಸಂಚಾರಿ ನಿಯಮ ಪಾಲಿಸುತ್ತ ನಡೆದರೆ ಅಪಾಯದಿಂದ ದೂರ ಇರಬಹುದು. ಪ್ರಸ್ತುತ ನಡೆಯುತ್ತಿರುವ ರಸ್ತೆ ಅಪಘಾತಗಳಿಗೆ ರಸ್ತೆ ನಿಯಮಗಳ ಉಲ್ಲಂಘನೆಯೇ ಕಾರಣವಾಗಿದೆ.ಅದಕ್ಕಾಗಿ ಹೆಲ್ಮೆಟ್ ಧರಿಸಿ ಪ್ರಯಾಣಿಸಬೇಕು ಎಂದು ಯುವ ಚಿಂತಕರಾದ ಚೇತನ್ ಸೊರಳ್ಳಿ **ಉದಯವಾಹಿನಿ ಪತ್ರಿಕೆಗೆ** ತಿಳಿಸಿದ್ದಾರೆ

ವಿದ್ಯಾವಂತರಾದವರು ಸಹ ಹೆಲ್ಮೆಟ್ ಇಲ್ಲದೇ ಓಡಾಡುತ್ತಾರೆ. ಪೊಲೀಸರು ಕಂಡ ಕೂಡಲೇ ಹೆಲ್ಮೆಟ್ ಹಾಕಿಕೊಳ್ಳುತ್ತಾರೆ. ಬಳಿಕ ಹೆಲ್ಮೆಟ್ ತೆಗೆದು ವಾಹನದ ಮುಂದಿಟ್ಟುಕೊಂಡು ಓಡಾಡುತ್ತಿದ್ದಾರೆ. ಸುಶಿಕ್ಷಿತರು ಎನಿಸಿಕೊಂಡವರೇ ಈ ರೀತಿ ವರ್ತಿಸುವುದು ಎಷ್ಟು ಸರಿ? ಪೊಲೀಸರು ದಂಡ ಹಾಕುತ್ತಾರೆ ಎಂದು ಟೀಕಿಸುವ ಇವರು ಹೆಲ್ಮೆಟ್ ಧರಿಸುವುದು ತಮ್ಮ ಜವಾಬ್ದಾರಿ ಎಂದು ಏಕೆ ತಿಳಿಯುವುದಿಲ್ಲ? ಎಂದು ಪ್ರಶ್ನಿಸುತ್ತಾರೆ ಸಂಚಾರ ಪೊಲೀಸರು.



> ಹೆಲ್ಮೆಟ್ ಕಡ್ಡಾಯಗೊಳಿಸಿರುವುದು ಜನರ ಜೀವ ರಕ್ಷಣೆಗಾಗಿ. ದಂಡ ಹಾಕುವುದು ಪೊಲೀಸರ ಉದ್ದೇಶವಲ್ಲ. ಹೆಲ್ಮೆಟ್ ಹಾಕುವುದು ರೂಢಿ ಆಗಬೇಕು. ಎಲ್ಲಕ್ಕಿಂತ ಜೀವ ಮುಖ್ಯ ಎಂಬುದು ಜನರಲ್ಲಿ ಜಾಗೃತಿ ಬರಬೇಕು. ಈಗಾಗಲೇ ಬೀದರ್ ಜಿಲ್ಲೆಯಾದ್ಯಂತ ಹೆಲ್ಮೆಟ್ ಪರಿಶೀಲನೆ ಮತ್ತು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡುವವರ ಕಾರ್ಯ ಪೊಲೀಸ್ ಇಲಾಖೆಯಿಂದ ನಡೆಯುತ್ತಿದೆ.
>
> -ಚೇತನ್ ಸೋರಳ್ಳಿ
> ಯುವ ಚಿಂತಕರು ಬೀದರ್